ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾ ಬಾಪು ವಿಶೇಷ ಸಂಚಿಕೆ

ಬಾಪು ಪ್ರಪಂಚ

BAPU PRAPANCHA

ಸಂಪುಟ – 1 ಸಂಚಿಕೆ – 1 ಡಿಸೆಂಬರ್, 2019 ₹ 20/–



ಸತ್ಯವು ನನ್ನ ಜೀವನದ
ಬುನಾದಿಯಾಗಿರುವುದು.
ಈ ಸತ್ಯದಿಂದಲೇ ಬ್ರಹ್ಮಚರ್ಯ
ಹಾಗೂ ಅಹಿಂಸೆಗಳು
ಹಿಂದಿನಿಂದ ರೂಪುಗೊಂಡವು.
ನೀವು ಯಾವ ಕೃತಿಯಲ್ಲಾದರೂ
ನಿಮ್ಮ ಮಟ್ಟಿಗಲ್ಲದೇ ಜಗತ್ತಿನ
ಮಟ್ಟಿಗೂ ಸತ್ಯವಂತರೂ
ಪ್ರಾಮಾಣಿಕರೂ ಆಗಿರಬೇಕು.
ನಿಮ್ಮ ವಿಚಾರಗಳನ್ನು
ಬಚ್ಚಿಡಬೇಡಿರಿ. ಅವುಗಳನ್ನು
ವ್ಯಕ್ತಪಡಿಸುವುದು
ನಾಚಿಕೆಗೇಡಿತನವೆನಿಸುತ್ತಿದ್ದರೆ,
ಹಾಗೆ ವಿಚಾರಿಸುವುದು
ಇನ್ನೂ ಹೆಚ್ಚು
ನಾಚಿಕೆಗೇಡಿತನವೆನಿಸುವುದು.

- ಮಹಾತ್ಮ ಗಾಂಧಿ





ಹೊಸವರ್ಷದ ಹಾರ್ದಿಕ ಶುಭಾಷಯಗಳು



"ಜೀವನವೆಂಬುದೊಂದು ಆಕಾಂಕ್ಷೆ, ಸಿದ್ಧಿ ಮತ್ತು ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯ ದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ."

– ಮಹಾತ್ಮ ಗಾಂಧಿ



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

ಬಾ–ಬಾಪು 150 ವಿಶೇಷ ಸಂಚಿಕೆ

BAPU PRAPANCHA

(A Monthly Kannada - English Magazine of Gandhian Thoughts) Special Edition on the occasion of 150th Anniversary of Mahatma Gandhi & Kasturba

ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ

Chief Editor : **Dr. Wooday P. Krishna**

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–56001

Published by : **Karnataka Gandhi Smaraka Nidhi**

Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

ನೆರವು : ಬಿ.ಎನ್. ಹೇಮಾದೇವಿ

Assistance - **B.N. Hemadevi**

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಸಂಪಾದಕೀಯ

ಇಂದಿರಾ ಕೃಷ್ಣಪ್ಪ




ನಮ್ಮೆಲ್ಲಾ ಪ್ರೀತಿಯ ಓದುಗರು, ಚಿಂತಕರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮತ್ತು ಗಾಂಧಿ ಅನುಯಾಯಿಗಳು, ಮಿತ್ರರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಬಾ–ಬಾಪು 150ರ ವರ್ಷಾಚರಣೆಯ ಮಹತ್ವದ ಈ ಕಾಲಘಟ್ಟದಲ್ಲಿ ನಾವು ಕ್ರಮಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಬಹು ಆಯಾಮಗಳಲ್ಲಿ ಬಾ ಮತ್ತು ಬಾಪು ಅವರನ್ನು ಜನರು ಯುವಜನರು ನಡುವೆ, ವಿದ್ಯಾರ್ಥಿ – ವಿದ್ಯಾರ್ಥಿನಿ ಮಿತ್ರರೊಂದಿಗೆ ಕೊಂಡೊಯ್ಯುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಬಹುವಿಧದಲ್ಲಿ ಅಂದರೆ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ಚರ್ಚಾ ಗೋಷ್ಠಿಗಳು, ಪುಸ್ತಕ ಪ್ರದರ್ಶನ, ವಿತರಣೆ, ಛಾಯಾಚಿತ್ರ ಪ್ರದರ್ಶನ ಶಿಬಿರಗಳು ಮತ್ತು ಇನ್ನೂ ಮುಂತಾದ ವೈವಿಧ್ಯಮಯತೆಯಿಂದ ಬಾ–ಬಾಪುವನ್ನು ನಾವು ಅರಿತುಕೊಳ್ಳುತ್ತಾ ನಿಮ್ಮೊಂದಿಗೆ ಹೆಜ್ಜೆ ಹಾಕಿದ್ದೇವೆ. ಅದರ ಭಾಗವಾಗಿ "ಬಾಪು ಪ್ರಪಂಚ" ಸಂಚಿಕೆಯನ್ನು ಪ್ರಕಟಿಸುತ್ತಾ, ಬಾಪು ವಿಚಾರಗಳು ಮತ್ತಷ್ಟು ಹೃದಯಾಂತರಾಳದಲ್ಲಿ ಮೂಡಿಸುವ ಆಸೆ ನಮ್ಮದು.

ಈ ವರ್ಷ ಭಾರತ ಹಲವು ಆರ್ಥಿಕ ಸಂಕಷ್ಟಗಳನ್ನು, ಪ್ರಾಕೃತಿಕ ಅವಘಡಗಳನ್ನು, ಸಾಂಸ್ಕೃತಿಕ ವೈರುಧ್ಯಗಳನ್ನು ಅನುಭವಿಸಿದೆ. ಅವುಗಳನ್ನು ಎದುರಿಸುವಲ್ಲಿ ಗಾಂಧಿ ಮತ್ತು ಸಹ ಚಿಂತಕರ ತತ್ವಾದರ್ಶಗಳು ನಮ್ಮನ್ನು ಮುನ್ನೆಡಿಸಿವೆ. ಡಿಸೆಂಬರ್ 6, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂಸ್ಮರಣಾ ದಿನವೂ ಆಗಿರುವಂತೆ 'ಮನುಜಮತ – ವಿಶ್ವಪಥ'ವನ್ನು ಸಾರಿದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆಯೂ ಇದೇ ಮಾಹೆಯಲ್ಲಿದೆ ಮತ್ತು ಭಾರತ ಸ್ವಾತಂತ್ರ್ಯ ಸಮಾನತೆ, ಜಾತ್ಯಾತೀತತೆ ಮತ್ತು ಸಹೋದರತೆಯನ್ನುಳ್ಳ ರಾಷ್ಟ್ರವಾಗಿಸಲು, ಮಹಾತ್ಮಾ ಗಾಂಧೀಜಿ ಮತ್ತು ಭಾರತರತ್ನ ಅಂಬೇಡ್ಕರ್ ಅವರು ಅಜೀವ ಪರ್ಯಂತ ಹೋರಾಟ ನಡೆಸಿದ್ದನ್ನು ನಾವು ಸ್ಮರಿಸಬೇಕಾಗಿದೆ. ಇಂತಹ ಶಾಶ್ವತ ಸತ್ಯಗಳು ಮತ್ತು ಪ್ರಜೆಗಳು ಮಾನವೀಯರಾಗಿ ಬಾಳಲುಬೇಕಾದ, ಅಹಿಂಸೆ, ಸರಳತೆ ಶಿಸ್ತು, ಸಾಮಾಜಿಕ ನ್ಯಾಯದ ದೃಷ್ಟಿಕೋನಗಳನ್ನು ನಮ್ಮೆಲ್ಲರಲ್ಲಿ ಅಳವಡಿಸಿಕೊಳ್ಳೋಣ.

'ಬಾಪು ಪ್ರಪಂಚ' ಪತ್ರಿಕೆಗೆ ಚಂದಾದಾರರಾಗುವ ಮುಖಾಂತರ ಈ ಪತ್ರಿಕೆ ಬೆಳೆಸಿರಿ, ಗಾಂಧಿ ಭವನದಲ್ಲಿನ ಹೊಸವರ್ಷದ ವಿಶೇಷ ಕಾರ್ಯಕ್ರಮಗಳಲ್ಲಿ ತಾವು ಮನಃಪೂರ್ವಕವಾಗಿ ಭಾಗವಹಿಸಿ ಎಂದು ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇನೆ.

ಬಾ–ಬಾಪು ಮತ್ತು ಡಾ. ಅಂಬೇಡ್ಕರ್ ಅವರು ನೂತನ ವರ್ಷದಲ್ಲಿ ಎಲ್ಲರಿಗೂ ಅವರ ಸಂಕಷ್ಟಗಳು ಮತ್ತು ದುಃಖಗಳನ್ನು ಎದುರಿಸುವ ಸ್ಥೈರ್ಯವನ್ನು ನೀಡಲಿ ಮತ್ತು ಗಾಂಧೀಜಿ ಅವರ ಕನಸಿನ ಭಾರತ ಮತ್ತು ಅಂಬೇಡ್ಕರ್ ಅವರ ಆಶಯದ ಭಾರತ ಕಟ್ಟಲು, ಈ ದೇಶದ ಪ್ರಜೆಗಳಾದ ನಾವೆಲ್ಲ 2020ನೇ ಸಾಲಿನಲ್ಲಿ ಮತ್ತಷ್ಟು ಉತ್ಸಾಹ, ಸ್ಫೂರ್ತಿ ಮತ್ತು ಸಂತೋಷದಿಂದ ಪಾಲ್ಗೊಳ್ಳೋಣ

> "ಸಿಲುಕದಿರಿ ಮತವೆಂಬ ಮೋಹದ ಅಜ್ಞಾನಕೆ
> ಮತಿಯಿಂದ ದುಡಿಯಿರೈ ಲೋಕ ಹಿತಕೆ
> ಆ ಮತದ ಈ ಮತದ ಹಳೆ ಮತದ ಸಹವಾಸ
> ಸಾಕಿನ್ನು ಸೇರಿರೈ ಮನುಜ ಮತಕೆ
> ಓ, ಬನ್ನಿ ಸೋದರರೆ, ವಿಶ್ವ ಪಥಕೆ





ಪರಿವರ್ತನೆ

ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ 1

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. .ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

ನಾಟ್ಯ, ನೃತ್ಯ ಮುಂತಾದವುಗಳಲ್ಲಿ ನಾನು ನಡೆಸಿದ ಪ್ರಯೋಗಗಳಿಂದ ನಾನು ಉಚ್ಛೃಂಖಲ ಪ್ರವೃತ್ತಿಯುಳ್ಳವನಾಗಿದ್ದೆನೆಂದು ಯಾರೂ ತಿಳಿಯಬಾರದು ಅದರಲ್ಲಿಯೂ ವಿವೇಕದ ಅಂಶ ಇದ್ದಿತೆಂಬುದು ವಾಚಕರಿಗೆ ಗೊತ್ತಾಗುತ್ತದೆ. ಆ ಮೋಹದ ಕಾಲದಲ್ಲಿಯೂ ನಾನು, ಕೆಲವಂಶ ವಿಮೋಚನಾಪರನಾಗಿಯೇ ಇದ್ದೆ. ಕಾಸು ಕಾಸಿಗೂ ಲೆಕ್ಕವನ್ನು ಇಡುತ್ತಿದ್ದೆ. ವೆಚ್ಚದ ಅಂದಾಜನ್ನೂ ಮಾಡುತ್ತಿದ್ದೆ. ನಾನು ತಿಂಗಳಿಗೆ ಹದಿನಾಲ್ಕು ಪೌಂಡುಗಳಿಗಿಂತ ಹೆಚ್ಚು ಖರ್ಚು ಮಾಡಕೂಡದೆಂದು ನಿಶ್ಚಯಿಸಿದೆ. ಬಸ್ ಪ್ರಯಾಣ ಮತ್ತು ಅಂಚೆಯ ವೆಚ್ಚ, ವೃತ್ತ ಪತ್ರಿಕೆ ಕೊಂಡ ಖರ್ಚು ಎಲ್ಲವನ್ನೂ ಅಂದಂದೇ ಬರೆದು ಮಲಗುವುದಕ್ಕೆ ಮುಂಚಿತವಾಗಿ ಜಮಾ ಖರ್ಚನ್ನು ನೋಡುತ್ತಿದ್ದೆ. ಆ ಅಭ್ಯಾಸ ಇಂದಿನವರೆಗೆ ನಡೆದು ಬಂದಿದೆ. ಈ ಅಭ್ಯಾಸದಿಂದ ನನ್ನ ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚು ಆದರೂ ಮಿತವ್ಯಯವನ್ನು ಅನುಸರಿಸಿದ್ದೇನೆ. ಪ್ರತಿಯೊಂದು ಸಾರ್ವಜನಿಕ ಕಾರ್ಯದಲ್ಲಿಯೂ ಸಾಲ ಮಾಡುವ ಬದಲು ತಪ್ಪದೆ ಹಣವನ್ನು ಉಳಿಸಿದ್ದೇನೆ. ಪ್ರತಿಯೊಬ್ಬ ಯುವಕನೂ ನನ್ನ ಅನುಭವದಿಂದ ಲಾಭ ಹೊಂದಿ ತನ್ನ ಜಮಾ ಮತ್ತು ಖರ್ಚಿನ ಲೆಕ್ಕವನ್ನು ಸರಿಯಾಗಿಡಲಿ. ಅವನಿಗೂ ಕೊನೆಯಲ್ಲಿ ನನಗಾದಂತೆ ಲಾಭವಾಗುವುದು.

ನನ್ನ ಖರ್ಚನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡಿದೆ. ಮಿತವ್ಯಯವನ್ನು ಮಾಡುವುದು ಅವಶ್ಯಕವೆಂದು ತೋರಿತು. ನನ್ನ ವೆಚ್ಚವನ್ನು ಅರ್ಧಕ್ಕೆ ಇಳಿಸಬೇಕೆಂದು ತೀರ್ಮಾನಿಸಿದೆ. ನನ್ನ ಜಮಾ ಖರ್ಚನ್ನು ನೋಡಿದೆ. ಗಾಡಿ ಬಾಡಿಗೆಗಾಗಿಯೇ ಅನೇಕ ಸಲ ನಾನು ವೆಚ್ಚ ಮಾಡಿರುವುದು ನನಗೆ ಗೊತ್ತಾಯಿತು. ನಾನು ಒಂದು ಕುಟುಂಬದೊಳಗೆ ವಾಸಿಸುತ್ತಿದ್ದುದರಿಂದ ಪ್ರತಿ ವಾರವೂ ಕಡ್ಡಾಯವಾಗಿ ವಾರದ ಹಣವನ್ನು ಕೊಡಲೇ ಬೇಕಾಗಿತ್ತು. ಸಭ್ಯತೆಯ ಕುರುಹಾಗಿ ಕುಟುಂಬದ ಜನರನ್ನು ಬೇರೆ ಕಡೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದ ವೆಚ್ಚವೂ ಅವರ ಜೊತೆ ಕೂಟಗಳಿಗೆ ಹೋಗುತ್ತಿದ್ದ ವೆಚ್ಚವೂ ಇದರಲ್ಲಿ ಸೇರಿತ್ತು. ಇವೆಲ್ಲವುಗಳಿಂದ ನಾನು ವಾಹನಗಳಿಗಾಗಿ ಕೊಡುತ್ತಿದ್ದ ವೆಚ್ಚವೇ ಬಹಳ ಹೆಚ್ಚಾಗುತ್ತಿತ್ತು. ಅದರಲ್ಲಿಯೂ, ಜತೆಗೆ ಬರುವವಳು ಮಹಿಳೆಯಾದರೆ ವಾಹನದ ಬಾಡಿಗೆಯನ್ನೆಲ್ಲ ಗಂಡಸೇ ಕೊಡಬೇಕಾಗಿತ್ತು. ಅಲ್ಲದೆ ಹೊರಗೆ ಊಟ ಮಾಡಿದರೆ ಹೆಚ್ಚಿಗೆ ವೆಚ್ಚ. ಮನೆಯಲ್ಲಿ ಊಟ ಮಾಡದಿದ್ದರೂ ಅದಕ್ಕೆ ಉಳಿತಾಯವಿಲ್ಲ ಈ ವೆಚ್ಚಗಳನ್ನೆಲ್ಲ ಉಳಿಸಬಹುದು. ನನಗೆ ವಿವೇಚನೆ ಇಲ್ಲದೆ ಅನುಸರಿಸುತ್ತಿದ್ದ ಇಂಗ್ಲೆಂಡ್ ದೇಶದ ವಾಡಿಕೆಗಳನ್ನು ನಿಲ್ಲಿಸುವುದರಿಂದಲೂ ಖರ್ಚು ಕಡಿಮೆ ಮಾಡಬಹುದು ಎಂದು ಯೋಚಿಸಿದೆ.

ಒಂದು ಕುಟುಂಬದ ಜೊತೆ ವಾಸಿಸುವುದಕ್ಕೆ ಬದಲಾಗಿ ನನಗಾಗಿಯೇ ಬೇರೆ ಕೊಠಡಿಯನ್ನು ಗೊತ್ತುಮಾಡಿಕೊಳ್ಳಬೇಕೆಂದು ನಿಶ್ಚಯಿಸಿದೆ. ನನ್ನ ಕೆಲಸಕ್ಕೆ ಅನುಸಾರವಾಗಿಯೂ ಮತ್ತು ಅನುಭವವನ್ನು ಸಂಪಾದಿಸುವುದಕ್ಕಾಗಿಯೂ ಕೊಠಡಿಗಳನ್ನು ಬದಲಾಯಿಸುವುದನ್ನೂ ನಿಶ್ಚಯಿಸಿದೆ. ನನ್ನ ಕೆಲಸದ ಸ್ಥಳಕ್ಕೆ ಅರ್ಧಗಂಟೆಯೊಳಗೆ ನಡೆದುಕೊಂಡು ಹೋಗುವಷ್ಟು ದೂರದಲ್ಲಿ ಕೊಠಡಿಗಳನ್ನು ಗೊತ್ತು ಮಾಡಿಕೊಳ್ಳುತ್ತಿದ್ದೆ. ಇದರಿಂದ ಗಾಡಿ ಬಾಡಿಗೆ ಉಳಿತಾಯವಾಯಿತು ಅದಕ್ಕೆ ಮುಂಚಿನ ಕಾಲದಲ್ಲಿ ನಾನು ಎಲ್ಲಿ ಹೋಗಬೇಕಾದರೂ ಗಾಡಿಯನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದೆ. ಇದರಿಂದ ಸಂಚಾರಕ್ಕಾಗಿ ಬೇರೆ ವೇಳೆಯನ್ನು ಗೊತ್ತುಮಾಡಿಕೊಳ್ಳಬೇಕಾಗಿತ್ತು. ಹೊಸ ಏರ್ಪಾಡಿನಲ್ಲಿ ಮಿತವ್ಯಯ ಮತ್ತು ಸಂಚಾರ



ಎರಡೂ ಸೇರಿತ್ತು. ದಿವಸಕ್ಕೆ ಎಂಟು ಹತ್ತು ಮೈಲಿ ಸಂಚಾರ, ಗಾಡಿ ಬಾಡಿಗೆ ಉಳಿತಾಯ ಈ ಅಭ್ಯಾಸ ನಾನು ವಿಲಾಯಿತಿಯಲ್ಲಿರುವವರೆಗೆ ನನ್ನನ್ನು ರೋಗರಹಿತನನ್ನಾಗಿಯೂ ದೃಢಕಾಯನನ್ನಾಗಿಯೂ ಇಟ್ಟಿತ್ತು. ನಾನು ಒಂದು ಸಂಸಾರದವರೊಂದಿಗೆ ಇರುವುದನ್ನು ಬಿಟ್ಟು ಎರಡು ಕೊಠಡಿಗಳನ್ನು ಬಾಡಿಗೆಗೆ ತೆಗೆದುಕೊಂಡೆ. ಮಲಗುವುದಕ್ಕೆ ಒಂದು, ಕುಳಿತುಕೊಳ್ಳಲು ಒಂದು ಬೈಠಕ್‌ಖಾನೆ. ಇದು ನನ್ನ ಪರಿವರ್ತನೆಯ ಎರಡನೆಯ ಯುಗವೆಂದು ಹೇಳಬಹುದು. ಮೂರನೆಯ ಯುಗ ಇನ್ನೂ ಮುಂದೆ ಬರುವುದಾಗಿತ್ತು.


ಹೀಗೆ ಅರ್ಧ ಖರ್ಚು ಉಳಿಯಿತು. ಆದರೆ ಕಾಲವನ್ನು ಕಳೆಯುವುದು ಹೇಗೆ? ಬ್ಯಾರಿಸ್ಟರ್ ಪರೀಕ್ಷೆಗೆ ಹೆಚ್ಚು ವ್ಯಾಸಂಗ ಅವಶ್ಯಕವಿಲ್ಲವೆಂದು ನನಗೆ ತಿಳಿದಿದ್ದಿತು. ಆದುದರಿಂದ ನನಗೆ ಆ ಯೋಚನೆ ಇರಲಿಲ್ಲ. ನನ್ನ ಅರ್ಧಂಬರ್ಧ ಇಂಗ್ಲೀಷಿನದೇ ನನಗೆ ಯೋಚನೆಯಾಗಿತ್ತು. ಲೇಲಿ ಸಾಹೇಬರು ಹೇಳಿದ್ದ "ಬಿ.ಎ. ಮುಗಿಸಿ ನನ್ನಲ್ಲಿಗೆ ಬಾ" ಎಂಬ ಮಾತು ನನ್ನ ಕಿವಿಯಲ್ಲಿ ಆಡುತ್ತಿತ್ತು. ಬ್ಯಾರಿಸ್ಟರ್ ಆದರೆ ಸಾಲದು. ಇನ್ನಾವುದಾದರೂ ವಿಷಯ ಅಧ್ಯಯನ ಮಾಡಿ ಪದವಿ (ಡಿಗ್ರಿ) ಸಂಪಾದಿಸಬೇಕೆನಿಸಿತು. ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಬಗ್ಗೆ ವಿಚಾರಿಸಿದೆ. ಮಿತ್ರರನ್ನು ಕೇಳಿದೆ. ಅಲ್ಲಿ ಹೋದರೆ ಖರ್ಚು ಹೆಚ್ಚಾಗಿ ಬೀಳುತ್ತೆ. ಕಾಲವೂ ಹೆಚ್ಚು ಬೇಕಾಗುತ್ತದೆ ಎಂದು ತಿಳಿಯಿತು. ನಾನು ಮೂರು ವರ್ಷಗಳಿಗಿಂತ ಹೆಚ್ಚಾಗಿ ಇಂಗ್ಲೆಂಡಿನಲ್ಲಿರಲು ಸಾಧ್ಯವಿರಲಿಲ್ಲ. ಒಬ್ಬ ಮಿತ್ರರು ನಿನಗೆ ನಿಜವಾಗಿ ಒಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂದು ಇಷ್ಟವಿದ್ದರೆ, ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತುಕೋ, ಅದಕ್ಕೆ ಹೆಚ್ಚು ಕಷ್ಟಪಟ್ಟು ವ್ಯಾಸಂಗ ಮಾಡಬೇಕು. ಜತೆಗೆ ನಿನ್ನ ಸಾಮಾನ್ಯ ಜ್ಞಾನವೂ ಹೆಚ್ಚುತ್ತದೆ. ಖರ್ಚು ಕಡಿಮೆ ಎಂದು ಹೇಳಿದರು. ಆ ಮಾತು ನನಗೆ ಒಪ್ಪಿಗೆಯಾಯಿತು. ಆದರೆ ಪರೀಕ್ಷಾ ವಿಷಯಗಳನ್ನು ನೋಡಿ ನಾನು ಹೆದರಿದೆ. ಲ್ಯಾಟಿನ್ ಮತ್ತು ಇನ್ನೂ ಒಂದೆರಡು ಆಧುನಿಕ ಭಾಷೆಗಳನ್ನು ತೆಗೆದುಕೊಳ್ಳಲೇ ಬೇಕಾಗಿತ್ತು. ಲ್ಯಾಟಿನ್ ಕಲಿಯುವುದು ಹೇಗೆ? ವಕೀಲರಿಗೆ ಲ್ಯಾಟಿನ್ ಭಾಷೆಯಿಂದ ತುಂಬಾ ಲಾಭವಿದೆ. "ಲ್ಯಾಟಿನ್ ತಿಳಿದವರಿಗೆ ಕಾನೂನನ್ನು ಅರ್ಥಮಾಡಿಕೊಳ್ಳುವುದು ಸುಲಭ. ರೋಮನ್ ಕಾನೂನಿಗೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆ ಲ್ಯಾಟಿನ್ ಭಾಷೆಯಲ್ಲಿರುತ್ತೆ ಮತ್ತು ಲ್ಯಾಟಿನ್ ತಿಳಿದಿದ್ದರೆ ಇಂಗ್ಲೀಷ್ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವವುಂಟಾಗುತ್ತದೆ." ಎಂದು ಹೇಳಿದರು. ಆ ಮಾತು ನನ್ನ ಮನಸ್ಸಿಗೆ ಹಿಡಿಸಿತು. ಎಷ್ಟೇ ಕಷ್ಟವಾದರೂ ಲ್ಯಾಟಿನ್ ಕಲಿಯಬೇಕೆಂದು ನಿಶ್ಚಯಿಸಿದೆ. ಫ್ರೆಂಚನ್ನು ಕಲಿಯಲು ಆಗಲೇ ಪ್ರಾರಂಭಿಸಿದ್ದುದರಿಂದ ಅದೇ ಆಧುನಿಕ ಭಾಷೆಯಾಯಿತೆಂದು ನಿಶ್ಚಯಿಸಿದೆ. ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದ ಒಂದು ಮೆಟ್ರಿಕ್ಯುಲೇಷನ್ ತರಗತಿಯನ್ನು ಸೇರಿದೆ. ಆ ಪರೀಕ್ಷೆ, ಆರು ತಿಂಗಳಿಗೊಮ್ಮೆ ನಡೆಯುತ್ತಿತ್ತು. ನನ್ನ ಮುಂದೆ ಇದ್ದುದ್ದು ಐದೇ ತಿಂಗಳು. ಆ ಕೆಲಸ ನನ್ನ ಶಕ್ತಿಗೆ ಮೀರಿದುದಾಗಿತ್ತೆನ್ನಬಹುದು. ಪರಿಣಾಮವಾಗಿ ಇಂಗ್ಲೀಷ್ ನಾಗರಿಕನಾಗಬೇಕೆಂದು ಹೊರಟಿದ್ದ ನಾನು, ಅತ್ಯಂತ ಉದ್ಯಮಶೀಲನಾದ ವಿದ್ಯಾರ್ಥಿಯಾದೆ. ಒಂದು ಗಳಿಗೆಯೂ ಪೋಲಾಗದಂತೆ ವೇಳಾಪಟ್ಟಿಯನ್ನೂ ನಿರ್ಮಿಸಿಕೊಂಡೆ. ಆದರೆ ಉಳಿದಿದ್ದ ಕಾಲದಲ್ಲಿ ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳನ್ನೂ ಉಳಿದ ವಿಷಯಗಳನ್ನೂ ಕಲಿಯುವಷ್ಟು ನನ್ನ ಬುದ್ಧಿಯಾಗಲೀ, ಸ್ಮರಣಶಕ್ತಿಯಾಗಲಿ ಚುರುಕಾಗಿರಲಿಲ್ಲ. ಪರೀಕ್ಷೆಗೆ ಕುಳಿತೆ. ಲ್ಯಾಟಿನ್‌ನಲ್ಲಿ ತೇರ್ಗಡೆಯಾಗಲಿಲ್ಲ. ಇದರಿಂದ ನನಗೆ ದುಃಖವಾದರೂ ನಾನು ಧೈರ್ಯಗುಂದಲಿಲ್ಲ. ಲ್ಯಾಟಿನ್ ರುಚಿ ಹುಟ್ಟಿತು. ಮತ್ತೊಂದು ಸಲ ಪ್ರಯತ್ನ ಮಾಡಿದರೆ ಫ್ರೆಂಚ್ ಭಾಷೆಯ ಜ್ಞಾನ ಉತ್ತಮವಾಗುವುದೆಂದು ಭಾವಿಸಿದೆ. ವಿಜ್ಞಾನದಲ್ಲಿ ಒಂದು ಹೊಸ ವಿಷಯ ತೆಗೆದುಕೊಳ್ಳುವ ನಿಶ್ಚಯ ಮಾಡಿದೆ. ರಸಾಯನ ಶಾಸ್ತ್ರ ಅಭಿರುಚಿ ಹುಟ್ಟಿಸುವ ಶಾಸ್ತ್ರ. ಆದರೆ ಪ್ರಯೋಗಗಳ ಅಭಾವದಿಂದ ನನಗೆ ಹಿಡಿಸಲಿಲ್ಲ. ಭಾರತದಲ್ಲಿ ರಸಾಯನ ಶಾಸ್ತ್ರ, ಎಲ್ಲ ವಿದ್ಯಾರ್ಥಿಗಳಿಗೂ ಕಡ್ಡಾಯ ವಿಷಯ. ಆದುದರಿಂದ ನಾನು ಅದನ್ನು ಮೊದಲ ಸಲ ಲಂಡನ್ ಮೆಟ್ರಿಕ್ಯುಲೇಷನ್‌ಗೆ ಆರಿಸಿಕೊಂಡಿದ್ದೆ. ಈ ಸಲ ಬೆಳಕು ಮತ್ತು ಶಾಖ ಎಂಬ ವಿಷಯಗಳನ್ನು ತೆಗೆದುಕೊಂಡೆ. ಅದು ಸುಲಭ ಎಂದು ಹೇಳಿದರು. ನನಗೂ ಹಾಗೆಯೇ ತೋರಿತು.

ಇನ್ನೊಮ್ಮೆ ಪರೀಕ್ಷೆಗೆ ಕೂಡುವ ಸಿದ್ಧತೆಯ ಜತೆಯಲ್ಲಿಯೇ ಜೀವನವನ್ನು ಇನ್ನೂ ಸರಳವಾಗಿ ಮಾಡಲು ಪ್ರಯತ್ನಿಸಿದೆ. ನಮ್ಮ ಮನೆಯವರ ಬಡತನಕ್ಕೆ ಅನುಸಾರವಾದ ರೀತಿಯಲ್ಲಿ ನಾನು ಜೀವಿಸುತ್ತಿಲ್ಲ ಎಂದು ನನಗೆ ತೋರಿತು. ನಮ್ಮಣ್ಣ ಕಷ್ಟಪಟ್ಟು ನಾನು ಕೇಳಿದಾಗಲೆಲ್ಲಾ ಉದಾರವಾಗಿ ಹಣ ಕಳುಹಿಸುತ್ತಿದ್ದುದನ್ನು ಚಿಂತಿಸಿ, ನನಗೆ ದುಃಖವಾಗುತ್ತಿತ್ತು.



ತಿಂಗಳಿಗೆ ಎಂಟರಿಂದ ಹದಿನೈದು ಪೌಂಡುಗಳವರೆಗೆ ಖರ್ಚು ಮಾಡುತ್ತಿದ್ದ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ದೊರಕುತ್ತಿತ್ತು. ನನಗಿಂತ ಹೆಚ್ಚು ಸರಳವಾಗಿ ಜೀವಿಸುತ್ತಿದ್ದವರನ್ನೂ ನಾನು ನೋಡಿದೆ. ಒಬ್ಬ ವಿದ್ಯಾರ್ಥಿ, ಲಂಡನ್ನಿನ ಬಡವರ ಬೀದಿಯಲ್ಲಿ ವಾರಕ್ಕೆ ಎರಡು ಷಿಲಿಂಗ್ ಬಾಡಿಗೆ ಕೊಠಡಿ ತೆಗೆದುಕೊಂಡಿದ್ದ. ಲಾಕ್‌ಹಾರ್ಟ್ ಎಂಬಾತನ ಅಗ್ಗದ ಅಂಗಡಿಯಲ್ಲಿ ಒಂದೊಂದು ದಿನ ಎರಡು ಪೆನ್ನಿಯ ರೊಟ್ಟಿ, ಕೋಕೋ ತೆಗೆದುಕೊಂಡು ಜೀವನ ಸಾಗಿಸುತ್ತಿದ್ದೆ. ಹಾಗೆ ಇರಬೇಕೆಂದು ನಾನೇನೂ ಯೋಚಿಸಲಿಲ್ಲ. ಆದರೆ "ನನಗೆ ಎರಡು ಕೊಠಡಿಗಳು ಬೇಕಿಲ್ಲ. ನನ್ನ ಊಟದಲ್ಲಿ ಅರ್ಧ ಅಡಿಗೆ ನಾನೇ ಮಾಡಿಕೊಳ್ಳಬಹುದು" ಎಂದು ಯೋಚಿಸಿದೆ. ಆದರಿಂದ ತಿಂಗಳಿಗೆ ನಾಲ್ಕು, ಐದು ಪೌಂಡು ಉಳಿತಾಯವಾಗುತ್ತಿತ್ತು. ಸರಳ ಜೀವನಕ್ಕೆ ಸಂಬಂಧಿಸಿದ ಕೆಲವು ಪುಸ್ತಕಗಳನ್ನು ಓದಿದೆ. ಎರಡು ಕೊಠಡಿಯನ್ನು ಬಿಟ್ಟು ವಾರಕ್ಕೆ ಎಂಟು ಷಿಲಿಂಗ್ ಬಾಡಿಗೆಗೆ ಒಂದು ಕೊಠಡಿಯನ್ನು ಗೊತ್ತು ಮಾಡಿಕೊಂಡೆ. ಒಂದು ಸ್ಟವ್ ಕೊಂಡುಕೊಂಡು ಬೆಳಗಿನ ಅಡುಗೆ ನಾನೇ ಮಾಡಿಕೊಳ್ಳಲು ಪ್ರಾರಂಭಿಸಿದೆ. ಅಡುಗೆ ಇಪ್ಪತ್ತು ನಿಮಿಷಕ್ಕಿಂತ ಹೆಚ್ಚಿಗೆ ಹಿಡಿಯುತ್ತಿರಲಿಲ್ಲ. ಗೋದಿ ಹಿಟ್ಟಿನ ಅಂಬಲಿ ಮತ್ತು ಕೋಕೋ ಇದಕ್ಕೆ ಇನ್ನೆಷ್ಟು ಹೊತ್ತು? ಮಧ್ಯಾಹ್ನದ ಊಟವನ್ನು ಹೋಟೆಲಿನಲ್ಲಿ ಮಾಡುತ್ತಿದ್ದೆ. ಈ ರೀತಿ ಒಂದು ದಿನದ ಊಟ ಒಂದು ಕಾಲೂ ಷಿಲಿಂಗ್‌ನಲ್ಲಿ ಮುಗಿಯುತ್ತಿತ್ತು. ಆ ಸಮಯದಲ್ಲಿ ನಾನು ವಿಶೇಷವಾಗಿ ವ್ಯಾಸಂಗ ಮಾಡಿದೆ. ಜೀವನ ಸರಳವಾದುದರಿಂದ ನನಗೆ ಸಮಯ ಬೇಕಾದಷ್ಟು ದೊರೆಯಿತು. ಎರಡನೇ ಸಲ ಪರೀಕ್ಷೆಯಲ್ಲಿ ತೇರ್ಗಡೆಯಾದೆ.

ಈ ಬಗೆಯ ಸರಳತೆಯಿಂದ ನನ್ನ ಜೀವನ ನೀರಸವಾಯಿತೆಂದು ಪಾಠಕರು ಭಾವಿಸದಿರಲಿ. ಅದರ ಬದಲು ಈ ಪರಿವರ್ತನೆಯಿಂದ ನನ್ನ ಆಂತರಿಕ ಮತ್ತು ಬಾಹ್ಯ ಜೀವನದ ಸ್ಥಿತಿಗಳಲ್ಲಿ ಏಕತೆಯುಂಟಾಯಿತು. ನನ್ನ ಆ ಜೀವನ ನಮ್ಮ ಕುಟುಂಬದ ಸ್ಥಿತಿಗತಿಯೊಂದಿಗೆ ಸಹ ಏಕತೆಯನ್ನು ಪಡೆಯಿತು. ನನ್ನ ಜೀವನ ಅಧಿಕ ಸತ್ಯಮಯವಾಯಿತು. ನನ್ನ ಆತ್ಮಾನಂದ ಮೇರೆ ಇಲ್ಲದುದಾಯಿತು.



ಮೋಹನ

– ಶ್ವೇತಾ ಎನ್

ಅವನೆಂದೂ
ಮಹಾತ್ಮನೆಂಬುದ ಬೇಡಿದವನಲ್ಲ
ಪೋರ ಬಂದರಿನಲ್ಲಿ ಜನಿಸಿ
ಜಗ ಮೆಚ್ಚಿಸಿ ಪೋರನಾದವ
ಎಷ್ಟೋ ಮನೆ ಮನಗಳಲಿ
ನೆಲೆನಿಂತು ನಕ್ಕವ..

ಆಗೋ, ಅವನೆ ಅವನೇ ಆ ಮೋಹನ
ದೇಶವೇ ತಲೆದೂಗಿದ ಕೊಳಲ ನುಡಿಸಿದವ
ತನ್ನೊಡನೆ ಹೆಜ್ಜೆ ಇಡಿಸಿದವ...

ಬಾಂಬು ಬಂದೂಕುಗಳ ಎದುರು
ಶಾಂತಿ ಅಸ್ತ್ರ ಹಿಡಿದು
ಮೌನ ರಾಗ ಹಾಡಿದವ
ತುಂಡು ಬಟ್ಟೆ ಉಟ್ಟು
ದೇಶ ಪ್ರೇಮ ತಿಳಿಸಿದವ...

ಬೀಜವಾಗಿ ಮತಿಯ ತುಂಬಿ
ಸಬರಮತಿ ಬೆಳೆಸಿದವ
ನೂರು ಪ್ರಶ್ನೆ ಎದಿರು
ದಿಟ್ಟ ನಿಲುವು ನೀಡಿದವ
ಅವನೇ ಆ ಮೋಹನ...

ಇಂದಿಗೂ ಎಲ್ಲೆಲ್ಲೂ
ಅವನದೇ ಜೇಂಕಾರ
ಪುಸ್ತಕದ ಪುಟ ಪುಟಗಳಲಿ
ಆಫೀಸಿನ ಗೋಡೆ ಗೋಡೆಗಳಲಿ
ದೇಶ ಪ್ರೇಮದ ಭಾಷಣಗಳಲಿ
ಇಂದಿಗೂ ಅವನದೇ ಝೇಂಕಾರ...

ಇದು ವಿವಾಹವೇ ?


ಮೋ. ಕ. ಗಾಂಧಿ
(ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

ಈಚೆಗೆ ನಾನು ಕಾಯಿಲೆಯಾಗಿದ್ದ ಪ್ರಥಮದಲ್ಲಿ, ಕಾಗದ ಪತ್ರವನ್ನು ನೋಡಲು ಸಾದ್ಯವೇ ಇಲ್ಲದಂತೆ ಆಗಿದ್ದಾಗ, ನನಗೆ ಮುಟ್ಟಿದ ಪತ್ರವನ್ನು ಈ ಕೆಳಗೆ ಕೊಟ್ಟಿರುತ್ತೇನೆ. ಇದರ ಬಾತ್ಮೀದಾರ ತನ್ನ ಪತ್ರದಲ್ಲಿ ಎಲ್ಲರ ಹೆಸರುಗಳನ್ನು ತಿಳಿಸಿದ್ದರು. ಅವನ್ನು ನಾನು ಇಲ್ಲಿ ಬಿಟ್ಟಿರುತ್ತೇನೆ.

"ವರುಷದ ಮದುವೆ ಕಾಲದಲ್ಲಿ, ಕಾರವಾರದ ಸದಾಶಿವಘಡದಲ್ಲಿ ಎದೆ ಬಿರಿಯುವಂಥ ವಿವಾಹವು ಒಂದು ನಡೆದಿರುತ್ತದೆ. ವಧುವಿನ ವಯಸ್ಸು ಸುಮಾರು 12, ಗೋವಾದ ಬಡ ಕುಟುಂಬಕ್ಕೆ ಸೇರಿದವಳು. ವರನ ವಯಸ್ಸು 60. ವರನ ಮೊದಲನೆ ಹೆಂಡತಿ ಸುಮಾರು ಮೂರುವರ್ಷಗಳ ಹಿಂದೆ ಮೃತಳಾದಳು. ಎಂಟು-ಒಂಭತ್ತು ಮಕ್ಕಳಲ್ಲಿ ಆಕೆಯ ಇಬ್ಬರು ಮಕ್ಕಳು ಜೀವಂತರಾಗಿದ್ದಾರೆ. ವರ ಒಂದು ಆಂಗ್ಲ ಶಾಲೆಯ ಸ್ಥಾಪಕ. ಕಳೆದ ವರ್ಷ ಕಿರಿಯ ವಯಸ್ಸಿನ ಕನ್ಯೆಯನ್ನು ಪಡೆಯಲು ಪ್ರಯತ್ನಿಸಿ ಸ್ವಜಾತಿಯ ಬಾಂಧವರಲ್ಲಿ ಗುಲ್ಲು ಎದ್ದು ಪ್ರಯತ್ನ ಫಲಿಸಲಿಲ್ಲ. ಈ ವರುಷ ವಧುವಿನ ಮಾತಾಪಿತೃಗಳಿಗೆ ಇನ್ನೂರು ರೂಪಾಯಿಗಳನ್ನು ಕೊಟ್ಟು ಸಫಲತೆ ಪಡೆದಿರುತ್ತಾನೆ. ಈ ಬಗ್ಗೆ ಮಾಡತಕ್ಕದ್ದೇನು? ಸ್ಥಳೀಯ ಸಮಾಜ ಸುಧಾರಕರಾದ ಶ್ರೀ... ಅವರು ಈ ಅಮಾನುಷ ಕೃತ್ಯದ ವಿರುದ್ಧ ಒಂದು ಕಿರುಬೆರಳನ್ನೂ ಎತ್ತುವುದಿಲ್ಲ."

ಈ ಪತ್ರದಲ್ಲಿ ಕಾಣಿಸಿರುವ ವಿಷಯದ ವಾಸ್ತವಿಕತೆಯನ್ನು ಅನುಮಾನಿಸ ಬೇಕಾಗಿಲ್ಲವೆಂದು ನಮಗೆ ತೋರುತ್ತದೆ. ಈ ಪತ್ರದ ಸಾರಾಂಶ ಮೇಲ್ಕಾಣಿಸಿದಂತೆ ಕೊಟ್ಟಿರುತ್ತೇನೆ. ಇದು ಬಹಳ ಅಪರೂಪ ಘಟನೆಯೆಂದು ಹೇಳಿಕೊಳ್ಳಲು ಸಾಧ್ಯವಿರಬಾರದೆ. ಆದರೆ ಇಂಥ ಘಟನೆಗಳು ಆಗಿಂದಾಗ್ಗೆ ಸಂಭವಿಸುತ್ತಿರುವುದರಿಂದ, ಇದಕ್ಕೆ ಬಲವಾದ ಮದ್ದು



ಅಗತ್ಯ. ಇಂಥ ಪ್ರತಿಯೊಂದು ಘಟನೆಯನ್ನೂ ಬಹಿರಂಗವಾಗಿ ಪ್ರಸಿದ್ಧಪಡಿಸಿ, ಸ್ತ್ರೀ ಜಾತಿಯ ವಿರುದ್ಧ ಈ ಬಗೆಯ ದುಷ್ಕೃತ್ಯಗಳು ನಡೆಯದಂತೆ ಪ್ರಬಲ ಮತ್ತು ಯೋಗ್ಯ ಸಾರ್ವಜನಿಕಾಭಿಪ್ರಾಯ ಮೂಡುವಂತೆ ಮಾಡುವುದು ಒಂದು ಯುಕ್ತಿಮಾರ್ಗವೇ ಸರಿ. ಇಂಥಹ ಘಟನೆಗಳು ಸಂಭವಿಸಬಹುದಾದ ಸೂಚನೆಗಳು ಕಂಡು ಬಂದಾಗ ಸ್ಥಳೀಯ ಚಳುವಳಿ ಕೈಗೊಳ್ಳುವುದು ತುಂಬ ಪರಿಣಾಮಕಾರಿಯಾದುದು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಎಂಟು ಮಕ್ಕಳನ್ನು ಹುಟ್ಟಿಸಿರುವ ಈ ತಂದೆ ಪುರ್ನವಿವಾಹ ಮಾಡಿಕೊಳ್ಳಲು ನಡೆಸಿದ ಪ್ರಥಮ ಪ್ರಯತ್ನ ವಿಫಲವಾಗಲು ಮುಖ್ಯ ಕಾರಣ ಸಕಾಲದಲ್ಲಿ ಕೈಗೊಂಡ ಚಳವಳಿಯೆಂದು ಈ ಸುದ್ದಿಗಾರ ತಿಳಿಸುತ್ತಾನೆ. ಈ ಸಂದರ್ಭದಲ್ಲಿ ಅಂಥ ಚಳವಳಿ ಏಕೆ ನಡೆಯಲಿಲ್ಲವೋ ನನಗೆ ಅಚ್ಚರಿಯಾಗುತ್ತದೆ. ಸ್ಥಳದ ಬಹು ಜನರಿಗೆ ಈ ವಿದುರ, ಎಳೆವಯಸ್ಸಿನ ಹುಡುಗಿಯನ್ನು ಪಡೆಯಲು ಪ್ರಯತ್ನಿಸುತ್ತಿದ್ದುದು ತಿಳಿದೇ ಇರಬೇಕು. ಚಿತ್ರಹಿಂಸೆ ಮತ್ತು ಸಂಕಟದ ಬದುಕಿನಿಂದ ಈ ಹುಡುಗಿಯನ್ನು ಪಾರು ಮಾಡಲು ಕೂಡಲೇ ಚಳುವಳಿ



ಏಕೆ ಕೈಗೊಳ್ಳಲಿಲ್ಲ ಎಂದು ನನಗೆ ಅಚ್ಚರಿಯಾಗುತ್ತದೆ. ವಿವಾಹಿತಳಾದ ಈ ಹುಡುಗಿಗೆ ನೆರವು ನೀಡಲು ಸ್ಥಳೀಯ ಸಾರ್ವಜನಿಕಾಭಿಪ್ರಾಯ ರೂಢಿಸಲು ಈಗಲೂ ಕಾಲ ಮೀರಿಲ್ಲವೆಂದು ನನ್ನ ಅಭಿಪ್ರಾಯ. ಈ ವಿದುರ ಒಂದು ಕಾಲದಲ್ಲಿ ದಾನಿಯಾಗಿದ್ದನೆಂದು ನನ್ನ ಬಾತ್ಮೀದಾರನ ಕಾಗದ ತಿಳಿಸುತ್ತದೆ ವಯಸ್ಸಾಗುವವರೆಗೆ ಈ ಹುಡುಗಿಯನ್ನು ಸೇವಾಸದನ ಅಥವಾ ಅಂಥದ್ದೇ ಯಾವುದಾದರೂ ಸಂಸ್ಥೆಯಲ್ಲಿ ಶಿಕ್ಷಣಕ್ಕಾಗಿ ಬಿಟ್ಟು ಪೂರ್ಣ ವಯಸ್ಸಿಗೆ ಬರುತ್ತಲೇ ಆತನೊಡನೆ ಸ್ವಇಚ್ಛೆಯಿಂದ ಉಳಿಯುವುದಾಗಲಿ ಅಥವಾ ವಿವಾಹ ವಿಚ್ಛೇದನವಾದಂತೆ ಪರಿಗಣಿಸುವುದಕ್ಕಾಗಲಿ ಅವಕಾಶ ಮಾಡಿಕೊಡುವಂತೆ ಅವನ ಮನಸ್ಸನ್ನು ಪರಿವರ್ತನಗೊಳಿಸಬಹುದಲ್ಲವೇ? ಆದರೆ ಪಾಚಿ ಕಟ್ಟಿಕೊಂಡಿರುವ ಸಮಾಜದ ಇಂದಿನ ಪರಿಸ್ಥಿತಿಯಲ್ಲಿ ಇಂಥ ಕ್ರಮ ಕೈಗೊಳ್ಳುವುದು ಸಾಧ್ಯವೋ ಅಸಾಧ್ಯವೋ ಏನೇ ಇರಲಿ, ಸಚ್ಚಾರಿತ್ರ್ಯವಂತರಾದ ತರುಣರು ಎಲ್ಲ ಸಂಭಾವಿತ ನ್ಯಾಯ ಸಮ್ಮತ ಮಾರ್ಗಗಳಿಂದ ಇಂಥ ಸಣ್ಣ ಮಕ್ಕಳ ಮದುವೆ ತಡೆಗಟ್ಟಲು ಮತ್ತು ಎಳೇ ವಯಸ್ಸಿನ ವಿದವೆಯರ ಪುನರ್ವಿವಾಹ ಪ್ರೋತ್ಸಾಹಿಸಲು ದಯಾ ದೃಷ್ಟಿಯ ತಂಡಗಳನ್ನೇಕೆ ರಚಿಸಿಕೊಳ್ಳಬಾರದು. ಇವೆರಡು ಕೈಗೂಡಿಸಿ ಒಟ್ಟಿಗೇ ಹೋಗುತ್ತೇವೆಂದು ನನ್ನ ಮತ. ಈ ದಯಾಪೂರಿತ ಸಂಸ್ಥೆಗಳು ಸಾರ್ಥಕ ಕೆಲಸಮಾಡಲು ತಮ್ಮ ಸಂಘ ಶಕ್ತಿಯನ್ನು ಸ್ಥಳದಲ್ಲಿಯೇ ಕೇಂದ್ರೀಕರಿಸಬೇಕು. ಕೆಲವು ವರುಷಗಳಲ್ಲಿ ಅವು ತುಂಬಾ ಪ್ರಭಾವಶಾಲಿ ಸಂಸ್ಥೆಯಾಗುವುದು ಅವರಿಗೆ ತಿಳಿದು ಬಂದೀತು. ಬಹುತೇಕ ನಮ್ಮ ಊರುಗಳ ಜನಸಂಖ್ಯೆ ಕೇವಲ ಅಲ್ಪ. ಆದ್ದರಿಂಧ ಈ ಬಾತ್ಮೀದಾರ ನಿಮ್ಮ ಗಮನಕ್ಕೆ ತಂದಿರುವ ಅನೀತಿ ವ್ಯಾಪಾರಗಳು ಸಂಭವಿಸುವುದರಲ್ಲಿವೆ ಎಂದು ತಿಳಿಯುವುದಾಗಲಿ, ಅಥವಾ ತಮ್ಮ ಪಟ್ಟಣಗಳ ಬಾಲ ವಿಧವೆಯರನ್ನು ಅರಿಯುವುದಾಗಲಿ ಕಠಿಣವಲ್ಲ. ಆ ದಯಾಪೂರಿತ ಸಂಸ್ಥೆಗಳು ಬಹಳ ಜಾಣ್ಮೆ ಮತ್ತು ಅತ್ಯಂತ ಅನುಕರಣೀಯ ಆತ್ಮ ಸಂಯಮದಿಂದ ವರ್ತಿಸಬೇಕೆನ್ನುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಸ್ವಲ್ಪ ತಾಳ್ಮೆಗೆಟ್ಟರೂ ಸರಿ ಅಥವಾ ಹಿಂಸೆ ಪ್ರವೃತ್ತಿ ವ್ಯಕ್ತಪಡಿಸಿದರೂ ಸರಿ ತಮಗೆ ತಾವೇ ವಿರೋಧ ಕಟ್ಟಿಕೊಂಡಂತಾಗಿ ಅವರು ಕೈಗೊಂಡಿರುವ ಉದ್ದೇಶಕ್ಕೆ ಧಕ್ಕೆಯಾದೀತು.

ಯಂಗ್ ಇಂಡಿಯಾ – 01.09.1927

ಕರುಣಾಳು ಬಾ ಬೆಳಕೆ

ಇಂಗ್ಲೇಷ್ ಮೂಲ : ಕಾರ್ಡಿನಲ್ ನ್ಯೂಮನ್
ಕನ್ನಡಾನುವಾದ : ಬಿ.ಎಂ.ಶ್ರೀ

ಕರುಣಾಳು ಬಾ ಬೆಳಕೆ
ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು

ಇರುಳು ಕತ್ತಲೆಯ ಗವಿ
ಮನೆ ದೂರ ಕನಿಕರಿಸಿ
ಕೈ ಹಿಡಿದು ನಡೆಸೆನ್ನನು

ಹೇಳಿ ನನ್ನಡಿ ಇಡಿಸು
ಬಲು ದೂರ ನೋಟವನು
ಕೇಳಿದೊಡನೆಯ
ಸಾಕು ನನಗೊಂದು ಹೆಜ್ಜೆ

ಮುನ್ನ ಇಂತಿರದಾದೆ
ನಿನ್ನ ಬೇಡದೆ ಹೋದೆ
ಕೈ ಹಿಡಿದು ನಡೆಸೆನ್ನನು


ನನ್ನ ದಾರಿಯ ನಾನೆ
ನೋಡಿ ಹಿಡಿದೆನೋ ಇನ್ನು
ಕೈ ಹಿಡಿದು ನಡೆಸೆನ್ನನು

ಮಿರುಗು ಬಣ್ಣಕೆ ಬೆರೆತು
ಭಯ ಮರೆತು ಕೊಬ್ಬಿದೆನು
ಮರೆದಾಯ್ತು ನೆನೆಯದಿರು ಹಿಂದಿನದೆಲ್ಲ
ಇಷ್ಟು ದಿನ ಸಲಹಿರುವೆ ಮೂರ್ಖನನು
ಮುಂದೆಯೂ ಕೈ ಹಿಡಿದು ನಡಸದಿಹೆಯಾ

ಕಷ್ಟದಡವಿಯ ಕಳೆದು
ಬೆಟ್ಟ ಹೊಳೆಗಳ ಹಾಯ್ದು
ಇರುಳನ್ನು ನೂಕದಿಹೆಯಾ

ಬೆಳಗಾಗ ಹೊಳೆಯದೆ ಹಿಂದೊಮ್ಮೆ ನಾನೊನಿದು
ಈ ನಡುವೆ ಕಳಕೊಂಡ ದಿವ್ಯಮುಖ ನಗುತ

ನನ್ನ ದಾರಿಯ ನಾನೆ ನೋಡಿ
ಕೊಡದಿಹೆನು ಇನ್ನು ಕೈ ಹಿಡಿದು ನಡೆಸೆನ್ನನು



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಮದ್ಯಪಾನದ ಪರಿಣಾಮಗಳು ಮತ್ತು ದುಷ್ಪರಿಣಾಮಗಳು :

ಡಾ. ಸಿ.ಆರ್. ಚಂದ್ರಶೇಖರ್

ಯಾವುದೇ ಮದ್ಯಪಾನೀಯದಲ್ಲಿ ಈಥೈಲ್ ಆಲ್ಕೋಹಾಲ್, ಜೊತೆಗೆ ನೀರು, ಲವಣಗಳು, ಅಮೈನೋ ಆಮ್ಲಗಳು, ಖನಿಜಗಳು ಇರುತ್ತವೆ. ಮದ್ಯಸಾರವು ಜಠರ ಮತ್ತು ಕರುಳಿನಿಂದ ರಕ್ತಕ್ಕೆ ಹೀರಲ್ಪಡುತ್ತದೆ. ಮಿದುಳಿಗೆ ಹೋಗಿ, ಅಲ್ಲಿ ಪರಿಣಾಮಗಳನ್ನುಂಟು ಮಾಡುತ್ತದೆ. ಯಕೃತ್ತಿಗೆ ಬಂದಾಗ ಆಲ್ಕೋಹಾಲ್ ಡಿಹೈಡ್ರಾಜಿನೇಸ್ ಮತ್ತು ಆಲ್ಡಿಹೈಡ್ ಡಿಹೈಡ್ರಾಜಿನೇಸ್ ಎಂಬ ವಿಶೇಷ ಕಿಣ್ವಗಳು (Enzymes) ಸಹಾಯದಿಂದ ವಿನೇಗರ್, ಅಸಿಟಿಕ್ ಆಮ್ಲವಾಗಿ ಪರಿವರ್ತಿತವಾಗುತ್ತದೆ. ಮೂತ್ರ ಮತ್ತು ಬೆವರಿನ ಮೂಲಕ ಶರೀರದಿಂದ ಹೊರದೂಡಲ್ಪಡುತ್ತದೆ. ಒಬ್ಬ ವ್ಯಕ್ತಿ ಮದ್ಯಪಾನ ಮಾಡಿದಾಗ, ಅದು ಅವನ ರಕ್ತದಲ್ಲಿ ಯಾವ ಪ್ರಮಾಣದಲ್ಲಿ ಜಮಾವಣೆಯಾಗುತ್ತದೆ ಎಂಬುದರ ಮೇಲೆ ಆತನ ನಡೆ-ನುಡಿ ಕ್ರಿಯೆ ಪ್ರತಿಕ್ರಿಯೆಗಳು ನಿರ್ಧಾರವಾಗುತ್ತದೆ.

ಸಾಧಾರಣವಾಗಿ 360 ಮಿಲಿ ಬೀರ್ (ಒಂದು ಅಳತೆ) ಕುಡಿದಾಗ, ಸುಮಾರು 60 ಕಿಲೋ ಗ್ರಾಂ ತೂಗುವ ವ್ಯಕ್ತಿಯಲ್ಲಿ ಒಂದು ಗಂಟೆಯ ನಂತರ ಎರಡು ಗಂಟೆಯವರೆಗೆ ಅವನ ಪ್ತಿ 100 ಮಿಲಿ ರಕ್ತದಲ್ಲಿ 30 ಮಿಲಿ ಗ್ರಾಂ ಮದ್ಯಸಾರವಿರುತ್ತದೆ. ಆತ ಎರಡು ಅಳತೆ ಅಂದರೆ 720 ಮಿಲಿ ಮೀರ್ ಕುಡಿದಾಗ 50 ಮಿಲಿ ಗ್ರಾಂ, ಮೂರು ಅಳತೆ (1080 ಮಿಲಿ) ಕುಡಿದಾಗ 80 ಮಿಲಿ ಗ್ರಾಂ ಹಾಗೂ ನಾಲ್ಕು ಅಳತೆ ಕುಡಿದಾಗ (1440 ಮಿಲಿ ಬೀರ್) 130 ಮಿಲಿ ಗ್ರಾಂ ಮದ್ಯಸಾರವಿರುತ್ತದೆ.

ಮದ್ಯಸಾರ ಪ್ರಮಾಣ	ವ್ಯಕ್ತಿಯ ಮನಸ್ಸಿನ ಮೇಲೆ ಪರಿಣಾಮಗಳು
20 ಮಿ. ಗ್ರಾಂ.	ಏನೂ ಪರಿಣಾಮವಿಲ್ಲ
40 ಮಿ. ಗ್ರಾಂ	ಆರಾಮವೆನಿಸುತ್ತದೆ. ನಾನು ಚೆನ್ನಾಗಿದ್ದೇನೆ, ಎಲ್ಲವೂ ದೆನ್ನಾಗಿದೆ ಎಂಬ ಭ್ರಮೆ
60 ಮಿ. ಗ್ರಾಂ.	ಮಾತು ಚಟುವಟಿಕೆ ಹೆಚ್ಚು. ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವುದಿಲ್ಲ
80 ಮಿ. ಗ್ರಾಂ.	ದೇಹದ ಅಂಗಾಂಗಳ ಅಸಮತೋಲನ ಚಲನೆ. ಮಾತು ತೊದಲುತ್ತದೆ. ತೂರಾಡುತ್ತಾನೆ. ಭಾವೋದ್ವೇಗಕ್ಕೆ ಒಳಗಾಗುತ್ತಾನೆ.
100 ಮಿ. ಗ್ರಾಂ	ವ್ಯಕ್ತಿ ತನ್ನ ಶರೀರ ಮತ್ತು ಮನಸ್ಸಿನ ಮೇಲೆ ಹತೋಟಿ ಕಳೆದುಕೊಳ್ಳುತ್ತಾನೆ. ಎಷ್ಟು ಕುಡಿದೆ, ಇನ್ನೆಷ್ಟು ಕುಡಿಯಬೇಕು, ಕುಡಿಯಬಾರದು ಎಂದು ಆತನಿಗೆ ತಿಳಿಯುವುದಿಲ್ಲ. ಮಾತು, ವರ್ತನೆಯ ಮೇಲೆ ಹತೋಟಿ ಇಲ್ಲ.
120 ಮಿ.ಗ್ರಾಂ.	ವಾಕರಿಕೆ, ವಾಂತಿಯಾಗವಹುದು.
150 ಮಿ. ಗ್ರಾಂ	ನಿಲ್ಲಲಾಗದೇ ಬೀಳುತ್ತಾನೆ.
300 ಮಿ. ಗ್ರಾಂ.	ಪ್ರಜ್ಞಾಹೀನ ಸ್ಥಿತಿ
400 ಮಿ. ಗ್ರಾಂ.	ಕೋಮ ಹಾಗೂ ಸಾವು

ರಕ್ತದಲ್ಲಿ ಮದ್ಯಸಾರದ ಪ್ರಮಾಣವು ಅನೇಕ ಅಂಗಗಳ ಮೇಲೆ ನಿರ್ಧಾರವಾಗುತ್ತದೆ.

- ಯಾವ ಮಾದಕ ಪಾನೀಯ? ವ್ಯಕ್ತಿ ಸೇವಿಸಿದ ಮದ್ಯಪಾನೀಯದಲ್ಲಿ ಎಷ್ಟು ಪ್ರಮಾಣದ ಮದ್ಯಸಾರವಿದೆ? (ಹಾರ್ಡ್ ಲಿಕ್ಕರ್‌ಗಳಲ್ಲಿ ಮದ್ಯಸಾರ 40%ರಿಂದ 45% ಇರಬಹುದು. ಕಳ್ಳಭಟ್ಟಿಯಲ್ಲಿ 30% ರಿಂದ 40%)
- ಪಾನೀಯದ ಜೊತೆ ಗಾಳಿ ಮಿಶ್ರಿತ ನೀರನ್ನು (ಸೋಡಾ, ಕೋಲಾ) ಬೆರೆಸಿದರೆ, ಆಲ್ಕೋಹಾಲ್ ಬೇಗ ರಕ್ತದೊಳಕ್ಕೆ ಹೀರಲ್ಪಡುತ್ತದೆ. ಅದರಿಂದ ಕಿಕ್ ಬೇಗ ಬರುತ್ತದೆ!
- ಖಾಲಿ ಹೊಟ್ಟೆಯಲ್ಲಿ ಮದ್ಯಪಾನ ಮಾಡುವುದರಿಂದ ಮದ್ಯಸಾರ ಬೇಗ ಹೀರಲ್ಪಡುತ್ತದೆ. ಎಣ್ಣೆ/ಜಿಡ್ಡು ಪದಾರ್ಥಗಳನ್ನು ಜೊತೆಯಲ್ಲಿ ತಿಮದರೆ ರಕ್ತದಲ್ಲೆ ಮದ್ಯಸಾರದ ಪ್ರಮಾಣ ನಿಧಾನವಾಗಿ ಏರುತ್ತದೆ.



- ಕುಡಿಯುವ ವಿಧಾನ–ವೇಗ : ಮಾತಾಡಿಕೊಮಡು, ಸ್ವಲ್ಪ ಸ್ವಲ್ಪ ಗುಟುಕರಿಸುತ್ತಾನಾ ಅಥವಾ ಒಂಟಿಯಾಗಿ ಕುಳಿತು ನೇರವಾಗಿ ಗಟಗಟನೆ ಕುಡಿಯುತ್ತಾನಾ? ಇದಕ್ಕೆ ಪರಿಸರವೂ ಪ್ರಭಾವ ಬೀರುತ್ತದೆ.

ಕುಡಿತದ ಪ್ರಾರಂಭ

ಸಾಮಾನ್ಯವಾಗಿ, ಕುಡಿತದ ಆರಂಭ ಹದಿವಯಸ್ಸಿನಲ್ಲಿ ನಡೆಯುತ್ತದೆ. ಹದಿವಯಸ್ಸಿನಲ್ಲಿ ಕಂಡುಬರುವ ಕುತೂಹಲ, ಉತ್ಸಾಹ, ಏನಾದರೂ ಹೊಸತನ್ನು ಮಾಡಬೇಕು, ಅನುಭವಿಸಬೇಕು ಎಂಬ ಬಯಕೆ, ಸಿನಿಮಾ ಅಥವಾ ಇಂತಹ ಹೀರೋಗಳನ್ನು ಅನುಕರಿಸುವ ಆಸೆ ಅವರನ್ನು ಆಲ್ಕೋಹಾಲ್ ಸೇವನೆಗೆ ಪ್ರೇರೇಪಿಸುತ್ತದೆ. ಆಲ್ಕೋಹಾಲ್ ಸೇವಿಸುವುದು ತಾವು ದೊಡ್ಡವರಾಗಿದ್ದೇವೆ, ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಬಲ್ಲೆವು, ಹಿರಿಯರನ್ನು ಕಂಡರೆ ಹೆದರಬೇಕಿಲ್ಲ, ಅವರ ಬುದ್ಧಿ ಮಾತನ್ನು ಕೇಳಬೇಕಾಗಿಲ್ಲ ಎಂಬುದನ್ನು ಸೂಚಿಸುತ್ತದೆ ಎಂದೂ ನಂಬುತ್ತಾರೆ.

ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು, ಕರ್ನಾಟಕ ಸರ್ಕಾರದ ಅಬಕಾರಿ ಇಲಾಖೆಯ ನೆರವಿನಿಂದ ಕರ್ನಾಟಕದ ಐದು ಜಿಲ್ಲೆಗಳಲ್ಲಿ ಸರ್ವೇಕ್ಷಣೆಯನ್ನು ನಡೆಸಿತು. 5573 ವಿದ್ಯಾರ್ಥಿಗಳು (ಹೈಸ್ಕೂಲ್, ಪದವಿ ಪೂರ್ವ, ಪದವಿ, ಪದವಿಯೋತ್ತರ, ಇಂಜಿನಿಯರಿಂಗ್, ಮೆಡಿಕಲ್) ಹಾಗೂ 4007 ವಿದ್ಯಾರ್ಥಿಗಳಲ್ಲದ ಯುವ ಜನರನ್ನು ಮದ್ಯಪಾನದ ವಿಚಾರವಾಗಿ ಪ್ರಶ್ನಾವಳಿ ಮುಖಾಂತರ ಸಂದರ್ಶಿಸಲಾಯಿತು. ಶೇಕಡಾ 30ರಿಂದ 46%ರಷ್ಟು ವಿದ್ಯಾರ್ಥಿಗಳು ತಾವು ಒಮ್ಮೆಯಾದರೂ ಆಲ್ಕೋಹಾಲ್ ಸೇವಿಸಿರುವುದಾಗಿ ತಿಳಿಸಿದರು. ಶೇಕಡಾ 2 ರಿಂದ 5 ರಷ್ಟು ವಿದ್ಯಾರ್ಥಿಗಳು ವಾರದಲ್ಲಿ ಹಲವು ಸಲ ಆಲ್ಕೋಹಾಲನ್ನು ಸೇವಿಸುವುದಾಗಿ ತಿಳಿಸಿದರು. ವಿದ್ಯಾರ್ಥಿಗಳಲ್ಲದವರಲ್ಲಿ ಶೇಕಡಾ 20ರಿಂದ 40%ರಷ್ಟು ಮಂದಿ ಒಮ್ಮೆ ಆಲ್ಕೋಹಾಲ್ ಸೇವಿಸುವುದಾಗಿಯೂ, 3 ರಿಂದ 14 ರಷ್ಟು ಮಂದಿ ವಾರದಲ್ಲಿ ಹಲವು ಸಲ ಸೇವಿಸುವುದಾಗಿಯೂ ತಿಳಿಸಿದರು.

ಸಂತೋಷ ಕೂಟಗಳು, ಮೋಜಿನ ಸನ್ನಿವೇಶಗಳು, ಪಿಕ್‌ನಿಕ್ ಟೂರ್‌ಗಳು, ವಾರದ ಕೊನೆ, ಭಾನುವಾರಗಳು, ಮಾಂಸಾಹಾರ ಸೇವಿಸಿದ ದಿನ, ಬಹುಮಾನ, ಯಶಸ್ಸು–ಆಚರನೆಗಳು ಸಮಾರಂಭಗಳು ಆಲ್ಕೋಹಾಲ್ ಸೇವಿಸಲು ಉತ್ತೇಜನ ನೀಡುತ್ತವೆ. ಕ್ರಮೇಣ ವ್ಯಕ್ತಿ ಇಂತಹ ಸನ್ನಿವಾಶಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಾನೆ. ಸ್ನೇಹಿತರು ಸಹವಯಸ್ಕರ ಮೇಲೆ ಒತ್ತಡ ತಂದು, ಆಲ್ಕೋಹಾಲ್ ಸಿಗುವ–ಸೇವಿಸುವ ಅವಕಾಶಗಳನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಾನೆ. ಈ ಹಂತದಲ್ಲಿ ತಂದೆ ತಾಯಿಗಳು, ಪತ್ನಿ, ಬಂಧು–ಮಿತ್ರರು ಸ್ವಲ್ಪ ವಿರೋಧವನ್ನು ತೋರಿಸಿದರೂ ವ್ಯಕ್ತಿಗೆ 'ನೀನು ಕುಡಿಯಬಾರದು' ಎಂದು ಸ್ಪಷ್ಟವಾಗಿ ನಿರೂಪ ಕೊಡುವುದಿಲ್ಲ. ಹಿಂದೆ ಮುಂದೆ ಆತಂಕವನ್ನು ವ್ಯಕ್ತಪಡಿಸಿ ಸುಮ್ಮನಾಗುತ್ತಾರೆ.

ಮುಂದುವರೆಯುವುದು......

(ಮದ್ಯಪಾನ ಸಂಯಮ ಮಂಡಳಿಯು ಪ್ರಕಟಿಸಿದ ಮದ್ಯಪಾನ ಆರೋಗ್ಯಕ್ಕೆ ಮಾರಕ ಹೇಗೆ? ಪರಿಹಾರ ಹೇಗೆ? ಕೃತಿಯಿಂದ ಆಯ್ದ ಭಾಗ)



Gandhi Visited Bengaluru Five Times

His first visit was in 1915 when noted writer D.V. Gundappa invited him to unveil a stone laid in the memory of Gandhi's political teacher Gopal Krishna Gokhale at Bapuji Sabhangana.

In 1920, Bapu visited teh Edgah Khudus Saheb Grounds behind Cantonment Railway Station and urged Muslims to be a part of the freedom Movement.

In 1927, when Gandhi was ill, he stayed at Nandi Hills for 45 days, and 87 days at the Kumar Krupa Guest house.

In 1934 and 1936, Gandhi visited several parts of Bengaluru and Old Mysure region, campaigning against untouchability.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

ಇಂದಿರಾ ಕೃಷ್ಣಪ್ಪ,

ಜಗತ್ತಿನ ಇತಿಹಾಸವನ್ನು ಅವಲೋಕಿಸಿದಾಗ, ಮಹಿಳೆಯರನ್ನು ಪರಿಭಾವಿಸಿದ ರೀತಿಗೂ, ವಾಸ್ತವದಲ್ಲಿ ಆಕೆಯನ್ನು ದುಡಿಸಿಕೊಂಡ ಪರಿಗೂ ಭೂಮ್ಯಾಕಾಶದಷ್ಟು ಅಂತರವಿದೆ. ಆದ್ದರಿಂದಲೇ, ಮಾನವನ ಇತಿಹಾಸ "His-story" ಆಗಿದೆ. ಈ ಮಹಿಳಾ ವಿರೋಧಿ 'His-story' ಯನ್ನು 'Her - story' ಅಥವಾ "ಮಾನವೀಯ ಚರಿತ್ರೆ"ಯಾಗಿಸುವ ಪ್ರಕ್ರಿಯೆಯಲ್ಲಿ ವಿಶ್ವದ ಮಹಿಳೆಯರು ಇತಿಹಾಸ ಚಕ್ರವನ್ನು ತಿರುಗಿಸುತ್ತಿದ್ದಾರೆ. ಅಮೇರಿಕಾದ ಸಂಶೋಧಕಿ 'ಕೋರಾ ಸಟ್ವಾನ ಕ್ಲೀಸರ್' ಅವರು ಜಗತ್ತಿನ ಅತಿದೊಡ್ಡ ಆರು ವಿಶ್ವಕೋಶಗಳನ್ನು ಪರಿಶೀಲಿಸಿದ ನಂತರ ಹೇಳುತ್ತಾರೆ. "ಜಗತ್ತಿನ ಸೃಷ್ಟಿಯಿಂದ ಇಂದಿನ ತನಕ ಚರಿತ್ರೆಯ ಪುಟಗಳನ್ನು ಅವಲೋಕಿಸಿದಾಗ ಕೇವಲ ಸಾವಿರದಷ್ಟು ಕಡಿಮೆ ಮಹಿಳೆಯರು ಇತಿಹಾಸದಲ್ಲಿ ದಾಖಲಾಗುವಂಥ ಕೆಲಸ ಮಾಡಿದ್ದಾರೆನ್ನುವುದು ಬಹಳ ದುಃಖಕರ ಸಂಗತಿ" ಎಂದು ಹತಾಶೆಯ ನುಡಿಗಳನ್ನಾಡಿದ್ದಾರೆ. ಇದರಿಂದ ವಿಶ್ವದ ಚರಿತ್ರೆ ಮಹಿಳಾ ಪ್ರತಿಭೆ, ಸಾಧನೆ, ಅನ್ವೇಷಣೆ, ಸಾಹಸ, ಸಾಮರ್ಥ್ಯ, ಹೋರಾಟ ಮತ್ತು ಜ್ಞಾನ ವಿಜ್ಞಾನಗಳನ್ನು ಪ್ರಜ್ಞಾಪೂರಕವಾಗಿ ಅವಜ್ಞೆಗೊಳಪಡಿಸಿದೆ ಎಂಬುದನ್ನು ಗಮನಿಸಬಹುದಾಗಿದೆ. ಭಾರತ ದೇಶದ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಲೋಕವು ಇದಕ್ಕಿಂತ ಏನೂ ಭಿನ್ನವಾಗಿಲ್ಲ. ಮಹಿಳೆಯರನ್ನು ಅಕ್ಷರ ಬೆಳಕಿನಿಂದ ದೂರವಿಟ್ಟು, ಎಲ್ಲಾ ಜ್ಞಾನಶಾಖೆಗಳಿಂದಲೂ ವಂಚಿಸಿ, ವಿಧಿ, ಕರ್ಮ ಸಿದ್ಧಾಂತಗಳ ಬಂಧಿಯಾಗಿಸಿ ನಡೆಸಿಕೊಂಡ ಪಿತೃ ಪ್ರಾಧಾನ್ಯತೆ ಮತ್ತು ಪುರುಷಾಧಿಕಾರದ ಸಾಮಾಜಿಕ ವ್ಯವಸ್ಥೆ ಪುರುಷನ ಕ್ರೂರತೆಯ ಚರಿತ್ರೆಯನ್ನು ಬಿಚ್ಚಿಡುತ್ತದೆ. ಇಂಥಹ ಸಾಮಾಜಿಕ ಸಂದರ್ಭದಲ್ಲಿಯೂ, ಆಯಾಯ ಕಾಲಘಟ್ಟದಲ್ಲಿ ವೈಯಕ್ತಿಕ ನೆಲೆಯಲ್ಲಿ ಮತ್ತು ಸಂಘಟಿತ ನೆಲೆಯಲ್ಲಿ ಎಲ್ಲಾ ಸಂಕೋಲೆಗಳನ್ನು ಮೀರಿ ಬೆಳೆದ ಮಹಿಳೆಯರ ಕಥಾನಕ ಜ್ವಾಜಲ್ಯಮಾನವಾಗಿದೆ. ಭಾರತದ ಚರಿತ್ರೆಯ ಬಹುಮುಖ್ಯ ಕಾಲಘಟ್ಟಗಳಾದ ಬುದ್ಧ, ಬಸವ, ಸಾವಿತ್ರಿ ಜ್ಯೋತಿ ಬಾಪುಲೆ, ಅಂಬೇಡ್ಕರ್, ಗಾಂಧೀಜಿ ಅವರ ಸಾಮಾಜಿಕ ಪರಿವರ್ತನಾ



ಹೋರಾಟಗಳು, ಮಹಿಳೆಯರಿಗೆ ಸಮಾಜದ ಎಲ್ಲ ರಂಗದಲ್ಲೂ ಹೆಜ್ಜೆ ಮೂಡಿಸುವ ಅವಕಾಶದ ಬಾಗಿಲನ್ನು ತೆರೆದಿಟ್ಟಿವೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಸಾಮಾಜಿಕ, ರಾಜಕೀಯ ಹೋರಾಟಗಳು, ಮಹಿಳೆಯರಿಲ್ಲದ ಸಾಮಾಜಿಕ, ರಾಜಕೀಯ ವ್ಯವಸ್ಥೆ ಅರ್ಥಪೂರ್ಣವಲ್ಲವೆಂಬುದನ್ನು ನಿರೂಪಿಸುತ್ತಾ, ಮಹಿಳೆಯರನ್ನು ಮುಂಚೂಣಿ ನಾಯಕತ್ವದಲ್ಲಿ ತಂದು ನಿಲ್ಲಿಸಿದೆ. ಇಂಥಹ ಮಹಿಳಾ ಚರಿತ್ರೆಯನ್ನು ಮೂರು ಮುಖ್ಯ ಆಯಾಮಗಳಲ್ಲಿ ಗಮನಿಸಬಹುದು.

- ಮಹಿಳಾ ಪರಂಪರೆಯ ಶೋಧನೆ ಹಾಗೂ ದಾಖಲೀಕರಣ
- ಪಿತೃಪ್ರಧಾನ ವ್ಯವಸ್ಥೆ ನಿರಾಕರಣೆಯೊಂದಿಗೆ ಸಮಸಮಾಜದ ಕೈಂಕರ್ಯ
- ಮಾನವೀಯ ಸಮಾಜದ ಮೌಲ್ಯಗಳನ್ನು ಕಟ್ಟುವಿಕೆ

ಹೀಗೆ ಪ್ರಧಾನ 3 ಆಯಾಮಗಳಲ್ಲಿ ಮಹಿಳೆಯರ ಹೋರಾಟ, ಸಾಮಾಜಿಕ ಬದಲಾವಣೆಯಲ್ಲಿ ಅವರ ಪಾತ್ರ, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಸಹಭಾಗಿತ್ವ, ಭಾರತದ ಅಭಿವೃದ್ಧಿಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ವಿಶ್ಲೇಷಿಸಬಹುದು.

ಇಲ್ಲಿ ಬಹಳ ಮುಖ್ಯವಾಗಿ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ, ಮಹಿಳೆಯರ ಭಾಗಿತ್ವ, ಹುತಾತ್ಮರಾದವರು, ಪರೋಕ್ಷವಾಗಿ ದುಡಿದುಡಿದು ಮಡಿದವರು ಮತ್ತು ಭಾರತವನ್ನು ಕಟ್ಟಿದವರನ್ನೂ ಕುರಿತು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸಲಾಗಿದೆ.



ಭಾರತದ ಸ್ವಾತಂತ್ರ್ಯ ಆಂದೋಲನವು, ಸಮಾಜ ಸುಧಾರಣೆ, ಕ್ರಾಂತಿಕಾರಿ ಹೋರಾಟ, ಸಮಾಜವಾದಿ ಚಳುವಳಿ, ಆದಿವಾಸಿ ಬುಡಕಟ್ಟು ಜನರ ಪರವಾಗಿ ಹೋರಾಟ ಮತ್ತು ಅಹಿಂಸಾತ್ಮಕ ಸತ್ಯಾಗ್ರಹವೆಂಬ, ಪಂಚಮುಖಗಳನ್ನು ಹೊಂದಿದೆ.

ವಸಾಹತುಶಾಹಿ ಆಡಳಿತ ವಿರುದ್ಧ ಹೋರಾಡಿದ ಅನೇಕ ರಾಜ–ಮಹಾರಾಜರುಗಳ ಪಟ್ಟಿಯಲ್ಲಿ, ಮುಂಚೂಣಿ ನಾಯಕತ್ವದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಬೇಗಂ ಹಜರತ್ ಮಹಲ್ ಕೆಳದಿಯ ಚೆನ್ನಮ್ಮ, ಅಹಲ್ಯಾಬಾಯಿ ಹೋಳ್ಕರ್, ರಾಣಿ ಅಬ್ಬಕ್ಕ ಮುಂತಾದ ಅನನ್ಯ ವೀರರಾಣಿಯರ ಹೆಸರುಗಳು ಜನಜನಿತವಾಗಿವೆ.

ಬ್ರಿಟಿಷರ ಆಡಳಿತ ವಿರುದ್ಧವಾಗಿ ಅನೇಕ ಕ್ರಾಂತಿಕಾರಿ ಹೋರಾಟಗಳಲ್ಲಿ ಆತ್ಮಾರ್ಪಣೆ ಮಾಡಿಕೊಂಡ ಅನೇಕ ಮಹಿಳೆಯರ ತ್ಯಾಗ–ಬಲಿದಾನಗಳು, ನಗಣ್ಯವಾಗಿಯೇ ಚರಿತ್ರೆಯ ಪುಟಗಳಿಂದ ಮರೆಯಾಗಿವೆ. ಅಹಲ್ಯಾ ರಾಂಗ್ಣೇಕರ್ ಅವರು 1942ರ ಕಿಟ್ ಇಂಡಿಯಾ ಚಳುವಳಿ, ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಕಾಲೇಜಿನಿಂದ ಹೊರಬಂದು, ಗಾಂಧೀಜಿ ಅವರ ಬಂಧನ, ಮಹದೇವಭಾಯಿಯ ಮರಣದ ವಾರ್ತೆಯಿಂದ ಸಿಟ್ಟಿಗೆದ್ದು, ಹೆಣ್ಣುಮಕ್ಕಳ ಗುಂಪನ್ನು ರಚಿಸಿಕೊಂಡು ಪ್ರತಿಭಟನೆ ನಡೆಸಿದರು. ಆಗ ಇವರನ್ನು ಬಂಧಿಸಿ, 4ನೇ ದರ್ಜೆಯ ಸೆರೆಯಲ್ಲಿಡಲಾಯಿತು. ಅಲ್ಲಿಯೂ ಜೈಲಿನಲ್ಲಿ ಮಹಿಳಾ ಕೈದಿಗಳ ಸುವ್ಯವಸ್ಥೆಗಾಗಿ ಹೋರಾಟಗಳನ್ನು ಮಾಡಿ, ಅನೇಕ ಸುಧಾರಣ ಕ್ರಮಗಳಿಗೆ ನಾಂದಿ ಹಾಡಿದರು. ಜೈಲಿನಲ್ಲಿದ್ದಾಗಲೇ, ಕೇಸರಿ ಬಿಳಿ ಹಸಿರು ಬಟ್ಟೆಗಳನ್ನು ಹೊಂದಿಸಿ, ಎಂಟು ಮಂದಿ ಮಹಿಳೆಯರು ಸೇರಿ ಸಾಹಸದಿಂದ ಮಾನವ ಪಿರಮಿಡ್ ನಿರ್ಮಿಸಿ ರಸ್ತೆಗೆ ಕಾಣುವಂತೆ ಭಾರತದ ಬಾವುಟ ಹಾರಿಸಿಬಿಟ್ಟರು. ಇದರಿಂದಾಗಿ ಜೈಲುವಾಸದ ಅವಧಿ ದ್ವಿಗುಣಗೊಂಡಿತು. 6 ತಿಂಗಳ ಜೈಲುವಾಸದ ನಂತರ ವಿದ್ಯಾಭ್ಯಾಸಕ್ಕೆ ಅನೇಕ ಅಡೆತಡೆಗಳುಂಟಾದರೂ, ಅವಳನ್ನು ತಿರಸ್ಕರಿಸಿದ ಕಾಲೇಜಿನಿಂದ ಹೊರಬಂದು, ಬೇರೊಂದು ಕಾಲೇಜನ್ನು ಸೇರಿ ಅತ್ಯಂತ ಪ್ರತಿಭಾನ್ವಿತ ಯುವತಿಯಾಗಿ ಹೊರಬಂದಿದ್ದರು. ಈಕೆ ಪರೇಲ್ ಮಹಿಳಾ ಸಂಘದೊಡನೆ ಸೇರಿ, ಕಾರ್ಮಿಕ ಹೋರಾಟ, ಹಿಂದೂ ಕೋಡ್ ಬಿಲ್ ಪರವಾದ ಹೋರಾಟ, ನೌಕ ಸೈನಿಕರ ಪರ ಹೋರಾಟ ಮಾಡುತ್ತಾ, ಭಾರತವನ್ನು ಕಟ್ಟುವಲ್ಲಿ ಬಹುಮುಖ್ಯ ಪಾತ್ರವಹಿಸಿದವರಾಗಿದ್ದಾರೆ. ಆಚಾರ್ಯ ಅತ್ರೆ ಅವರು, ಅಹಲ್ಯಾರನ್ನು ಕುರಿತು "ರಣರಾಗಿಣಿ ಅಹಲ್ಯಾ" ಎಂದು ಕವನವನ್ನು ಬರೆದು ಅರ್ಪಿಸಿದ್ದಾರೆ.

ಕನಕ ಮುಖರ್ಜಿ ವಿದ್ಯಾರ್ಥಿ ದೆಸೆಯಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ, ಕನಕಮುಖರ್ಜಿ, "ಗಾಂಧೀಜಿ ಅವರು ಉಪವಾಸ ಮಾಡಿದಾಗ, ಇವರೂ ಉಪವಾಸ ಮಾಡುತ್ತಾ, ಹತ್ತಿ ಗಿಡಗಳನ್ನು ಬೆಳೆಸುತ್ತಾ, ಚರಕದಿಂದ ನೂಲುತ್ತಾ, ಸ್ವಾತಂತ್ರ್ಯ ಹೋರಾಟದೆಡೆಗೆ ಹೆಜ್ಜೆ ಇಟ್ಟರು. ಹದಿನೇಳರ ವಯಸ್ಸಿನಿಂದಲೇ ಜೈಲುವಾಸ, ಗಡಿಪಾರು ಶಿಕ್ಷೆಗೆ ತುತ್ತಾಗಿ ಭೂಗತ ಆಗುವಷ್ಟರ ಮಟ್ಟಿಗೆ ಕ್ರಾಂತಿಕಾರಿಯಾದ ಈಕೆಯನ್ನು ಸರೋಜಿನಿ ನಾಯ್ಡು ಅವರು "ಆಟಂ ಬಾಂಬ್" ಎಂದು ಕರೆಯುತ್ತಿದ್ದರು. 'ಮಹಿಳಾ ಆತ್ಮ ರಕ್ಷತಿ ಸಮಿತಿ'ಯನ್ನು ರಚಿಸಿಕೊಂಡು ಹಲವಾರು ಹೋರಟದೊಂದಿಗೆ ಕ್ಷಾಮ–ಪುರ್ನವಸತಿ, ಕೋಮು ಸೌಹಾರ್ದತೆಗಾಗಿ ಶ್ರಮಿಸಿದರು.

ಲಕ್ಷ್ಮಿ ಸೆಹಗಲ್ ಹೆಸರು ಸುಭಾಷ್ ಚಂದ್ರ ಬೋಸರ, ಐಎನ್‌ಎ ಜೊತೆಗೆ ಮಿಳಿತಗೊಂಡಿದೆ. ಐಎನ್‌ಎನಲ್ಲಿ ಸೇರುವ ಪೂರ್ವದಲ್ಲಿ ವೈದ್ಯೆಯಾಗಿದ್ದ ಇವರು ಸಿಂಗಪೂರಕ್ಕೆ ತೆರಳಿ, ವೈದ್ಯಳಾಗಿ ಸೇವೆ ಆರಂಭಿಸಿದರು. ಅಲ್ಲಿ ಭೇಟಿಯಾದ ಬೋಸರ ಪ್ರಭಾವದಿಂದಾಗಿ ಅವರ ಹೋರಾಟದಲ್ಲಿ ಸೇರ್ಪಡೆಯಾದರು. ಅಲ್ಲಿ ಝಾನ್ಸಿರಾಣಿ ಲಕ್ಷ್ಮಿ ರೆಜಿಮೆಂಟ್‌ನ ನಾಯಕಿಯಾಗಿ ಹೊರಹೊಮ್ಮಿದರು. ನಂತರ ಇವರ ಹೋರಾಟ ಅನೇಕ ತಿರುವುಗಳನ್ನು ಪಡೆದುಕೊಂಡಿತು. 1945ರ ವೇಳೆಗೆ ಬರ್ಮಾದ ಕಾಡಿನಲ್ಲಿ ಇವರನ್ನು ಬಂಧಿಸಿ ಗೃಹ ಬಂಧನದಲ್ಲಿಡಲಾಯಿತು. ನಂತರ ರಂಗೂನಿನ ಸೆರೆಮನೆ ವಾಸ ಅನುಭವಿಸಿದ ಲಕ್ಷ್ಮಿ ಅವರಿಗೆ 1946ರವರೆಗೆ ಹಲವಾರು ಜೈಲುಗಳಲ್ಲಿ ಬಂಧನದ ಯಾತ್ರೆಗಳೇ ನಡೆದವು. ಭಾರತ ಸ್ವಾತಂತ್ರ್ಯದ ಹೋರಾಟದ ತೀವ್ರಘಟ್ಟದಲ್ಲಿ ಅವರನ್ನು ಭಾರತಕ್ಕೆ ಕರೆತರಲಾಯಿತು. ಜೈಲಿನಿಂದ ಬಿಡುಗಡೆಯಾದ ನಂತರದ ದಿನಗಳಲ್ಲಿ ಪುನಃ ವೈದ್ಯಕೀಯ ವೃತ್ತಿಯನ್ನಾರಂಭಿಸಿ. ನಿರ್ವಸತಿಕರು, ಕಾರ್ಮಿಕರು, ಶ್ರಮಜೀವಿಗಳು, ವಲಸೆಗಾರರ ಸೇವೆಯಲ್ಲಿ ನಿರತರಾದರು.

ತೆಲಂಗಾಣದಲ್ಲಿನ ಮಲ್ಲು ಸ್ವರಾಜ್ಯ ಕ್ರೂರ ಜಮೀನ್ದಾರಿ ಪದ್ಧತಿ, ಕೃಷಿ ಕಾರ್ಮಿಕರ ಶೋಷಣೆ, ಅಸಮಾನತೆಯ ಚಿತ್ರಣಗಳು ಬಾಲಕಿ ಮಲ್ಲು ಸ್ವರಾಜ್ಯ ಮನುಕಲಕುತ್ತಿತ್ತು. ಮ್ಯಾಕ್ಸಿಂಗಾರ್ಕಿ ಅವರ "ಮದರ್"



ಕಾದಂಬರಿಯ ತೆಲುಗು ಅನುವಾದ ಕೃತಿ, ಆಕೆಯ ಕುಟುಂಬದವರ ಮೇಲೆ ಅತೀವ ಪ್ರಭಾವ ಬೀರಿತು. ಅಲ್ಲಿಂದಾಚೆ 'ಆಂಧ್ರ ಮಹಾ ಸಭಾದ' ಹೋರಾಟದ ಕಡೆ ಒಲವು ಬೆಳೆಸಿಕೊಂಡಾಗ ಸುತ್ತಲಿನ ಸಮುದಾಯ ವಿರೋಧ ಮಾಡಿದರು. ಯಾವುದಕ್ಕೂ ಜಗ್ಗದೆ, ಅರೆಮನಸ್ಸಿನಿಂದ ಶಾಲೆಯನ್ನು ಬಿಟ್ಟಳು. ನಿಜಾಮನ ಆಳ್ವಿಕೆಯ ವಿರುದ್ಧದ ಹೈದ್ರಾಬಾದ್‌ನಲ್ಲಿನ ಸ್ವಾತಂತ್ರ್ಯ ಹೋರಾಟದೊಂದಿಗೆ ಸೇರ್ಪಡೆಯಾಗಿ. ಸಾಮಾಜಿಕ ಮತ್ತು ರಾಜಕೀಯ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡರು. 'ಉಯ್ಯಲು ಜೋಗುಳ ಪದ'ವನ್ನು ಚಳುವಳಿ ಗೀತೆಯಾಗಿ ಮಾರ್ಪಡಿಸಿ, ಮಹಿಳೆಯರನ್ನು ಹೋರಾಟಕ್ಕೆ ಸಜ್ಜುಗೊಳಿಸಿದರು. ಇದು ಏಕಕಾಲಕ್ಕೆ ಒಂದು ಕಡೆ ನಿಜಾಂ ಆಡಳಿತವನ್ನು, ಮತ್ತೊಂದು ಕಡೆ' ರಜಕಾರರ ಸೇವೆಯ ವಿರುದ್ಧ ಹೋರಾಟವನ್ನು ರೂಪುಗೊಳಿಸುತ್ತಿತ್ತು. ಸ್ವರಾಜ್ಯಕ್ಕಾಗಿ ಅವರು, ಸ್ವಯಂ ಸೇವಕರನ್ನು ಸಂಘಟಿಸಿ ಗ್ರಾಮದ ಮಹಿಳೆಯರನ್ನು ಮತ್ತು ಆಸ್ತಿಪಾಸ್ತಿಗಳನ್ನು ರಕ್ಷಿಸುವ ಹೊಣೆಯನ್ನು ಹೊತ್ತರು. 'ಎರ್ರಬಾಡು ಚಳುವಳಿ', 'ಸೂರ್ಯಪೇಟೆ ಚಳುವಳಿ'ಗಳು ಅತಿ ಮುಖ್ಯವಾದುದಾಗಿವೆ. 1948ರಲ್ಲಿ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ, ಹೈದ್ರಾಬಾದ್‌ನಲ್ಲಿ ಭಾರತದ ಗಣರಾಜ್ಯಕ್ಕೆ ಸೇರಿಸುವ ತನಕವೂ ಇವರ ಹೋರಾಟ ಮುಂದುವರಿದಿತ್ತು.

ವಿಮಲ ರಣದಿವೆ 1929–30ರ ಕಾಲಘಟ್ಟದಲ್ಲಿ ಗಾಂಧೀಜಿ ಅವರ ಸತ್ಯಾಗ್ರಹದಿಂದ ಆಕರ್ಷಿತರಾದವರು, ಬಾಲಕಿ, ವಿಮಲ ರಣದಿವೆ, ಕಾಂಗ್ರೆಸ್ ಸೇವಾದಳಕ್ಕೆ ಸೇರುವುದರ ಮೂಲಕ ಗಾಂಧೀಜಿ ಅವರನ್ನು ಭೇಟಿಯಾದರು ಅತ್ಯುತ್ಸಾಹದಿಂದ ಗೆಳತಿಯರೊಂದಿಗೆ, ಬಿಳಿ ಸೀರೆಯುಟ್ಟು, ಗುಂಪುಗಳನ್ನು ರಚಿಸಿಕೊಂಡು, ವಿದೇಶಿ ವಸ್ತುಗಳ ಖರೀದಿಗೆ ತಡೆ, ವಿದೇಶಿ ವಸ್ತ್ರ ಬಹಿಷ್ಕಾರ ಚಳುವಳಿಯಲ್ಲಿ ಭಾಗವಹಿಸಿದರು. ಎಲ್ಲಾ ಬಾಲಕಿಯರು, ಅತಿ ಕಿರಿಯ ವಯಸ್ಸಿನಲ್ಲಿ ಸೆರೆವಾಸ ಅನುಭವಿಸಿದರು. ಯರವಾಡ ಜೈಲುವಾಸದಲ್ಲಿ ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪರಿಚಯವಾಯಿತು. ಜೈಲಿಂದ ಬಿಡುಗಡೆಯ ನಂತರ ವಿದ್ಯಾಭ್ಯಾಸ ಮುಂದುವರೆಸಿದ ವಿಮಲ ನಾಟಕ ಹಾಗೂ ಚಲನಚಿತ್ರ ಕಲಾವಿದೆಯಾಗಿ, ಲೇಖಕಿ ಹಾಗೂ ಹೋರಾಟಗಾರ್ತಿಯಾಗಿ ಪರಿವರ್ತನೆ ಹೊಂದಿದರು. ಪತ್ರಿಕೆಗಳ ಮಾರಾಟ, ಕ್ರಾಂತಿಗೀತೆಗಳು ಪರೇಲ್ ಮಹಿಳಾ ಸಂಘ, ಕಾರ್ಮಿಕರ ಹೋರಾಟದಲ್ಲಿ ಭಾಗವಹಿಸಿದ ವಿಮಲರನ್ನು ಪುನಃ ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ನಂತರದ ದಿನಗಳಲ್ಲಿ ಕಾರ್ಮಿಕ ಚಳುವಳಿ, ಮಹಿಳಾ ಚಳುವಳಿಯಲ್ಲಿ ಭಾಗವಹಿಸುತ್ತ ಅಂಗನವಾಡಿ ಕೆಲಸಗಾರರ ಅಖಿಲ ಭಾರತ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು.

ಪ್ರೀತಿಲತಾ ನಾಡಿನ ವಿಮೋಚನಾ ಹೋರಾಟದಲ್ಲಿನ ಚಿತ್ತ ಕಲುಕುವ ಚಿತ್ತಗಾಂಗ್ ಚಳುವಳಿಯು ಎಲ್ಲರ ಮನಸ್ಸನ್ನು ಆರ್ದ್ರಗೊಳಿಸುತ್ತದೆ. ಮಧ್ಯಮ ವರ್ಗದವರೇ ಪಾಲ್ಗೊಂಡಿದ್ದ ಈ ಚಳುವಳಿಯಲ್ಲಿ 'ಪ್ರೀತಿಲತಾ', 13 ಜನ ಬ್ರಿಟಿಷರನ್ನು ಆಹುತಿ ತೆಗೆದುಕೊಂಡು ತಾನೂ ಬಲಿಯಾದದ್ದೊಂದು ಕರುಣಾಜನಕ ಕಥೆ ಇದೆ. ಆಕೆಯ ಮೃತದೇಹವನ್ನು ಪೊಲೀಸರು ವಶಕ್ಕೆ ಪಡೆದಾಗ ಪ್ರೀತಿಲತಾ ವಡೋದರಳ ಕೈಯಲ್ಲಿ ಒಂದು ಪತ್ರವಿತ್ತು. ಆ ಪತ್ರದಲ್ಲಿ "ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆ, ಪುರುಷ ಎಂಬ ಭೇದವೇಕೆ? ಸಹೋದರಿಯರೇಕೆ ಹೋರಾಡ ಬಾರದು.? ಅತ್ಯಂತ ಕಷ್ಟದ ಅಪಾಯಕಾರಿಯಾದ ಕಾರ್ಯದಲ್ಲೂ, ಅಣ್ಣತಮ್ಮಂದಿರ ಜೊತೆಗೂಡಿ ಹೋರಾಡುತ್ತೇವೆಯೇ ಹೊರತು ಯಾವ ಕಾರಣಕ್ಕೂ ಮಹಿಳೆಯರು ಹಿಂದೇಟು ಹಾಕುವುದಿಲ್ಲ". ಎಂಬ ಅವಳ ಸಂದೇಶ ಹೋರಾಟಗಾರ್ತಿಯರಿಗೆ ಸ್ಫೂರ್ತಿಯ ಸಂದೇಶವಾಗಿದೆ.

50 ವರ್ಷಗಳ ಹಿಂದೆ

ಗಾಂಧೀ ತತ್ವ ಅನುಷ್ಠಾನ ಹೊಸ ಸಮಾಜಕ್ಕೆ ದಾರಿ, ನಿರ್ಲಕ್ಷದಿಂದ ವಿನಾಶ

- ಡಾ. ಜಾಕಿರ್ ಹುಸೇನ್

'ವಿಶ್ವವು ಗಾಂಧೀಜಿ ಅವರ ತತ್ವಗಳನ್ನು ಪಾಲಿಸುವುದರ ಮೂಲಕ ಹೊಸ ಸಾಮಾಜಿಕ ವ್ಯವಸ್ಥೆ ರೂಪಿಸಲು ಮುನ್ನಡೆಯಬಹುದು ಅಥವಾ ಅವರನ್ನು ಕಡೆಗಣಿಸಿ ಪ್ರಪಾತದ ಅಂಚಿನೆಡೆಗೆ ಸ್ಥಿರ ಮನಸ್ಸಿನಿಂದ ಸಾಗಬಹುದು' ಎಂದು ರಾಷ್ಟ್ರಪತಿ ಜಾಕಿರ್ ಹುಸೇನ್ ಅವರು ತಿಳಿಸಿದರು

ಕೃಪೆ ಪ್ರಜಾವಾಣಿ ಪತ್ರಿಕೆ ದಿ. 01.10.2018



ನವ ಭಾರತ ನಿರ್ಮಾಪಕರು

– ಬಿ.ಎನ್. ಹೇಮಾದೇವಿ

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ

ಸ್ವಾತಂತ್ರ ಹೋರಾಟಗಾರ್ತಿ, ಸಮಾಜಸೇವಕಿ, ಕಲಾಪೋಷಕಿ, ರಾಜಕಾರಿಣಿ, ಕಲಾವಿದೆ ಮತ್ತು ಮುಕ್ತ ಆಲೋಚನೆಯನ್ನು ಪ್ರತಿಪಾದಿಸುವ ಸ್ತ್ರೀವಾದಿ ಚಿಂತಕಿ ಕಮಲಾದೇವಿ ಚಟ್ಟೋಪಾಧ್ಯಾಯ ಭಾರತದ ಅನನ್ಯ ಮಹಿಳಾಮಣಿ. ಸ್ವಾತಂತ್ರ್ಯಕ್ಕಾಗಿ ದಿಟ್ಟತನದಿಂದ ಹೋರಾಡಿದ ಈ ಧೀಮಂತ ಮಹಿಳೆ ಯಾವ ಪದವಿ, ಹುದ್ದೆಗಳಿಗೂ ಆಸೆ ಪಡದೆ ಸಮಾಜ ಸೇವೆಯೇ ತನ್ನ ಜೀವನದ ಗುರಿಯೆಂದು ಭಾವಿಸಿ ತಮ್ಮ ಇಡೀ ಜೀವನವನ್ನು ಜನಹಿತಕ್ಕಾಗಿ ಮುಡುಪಾಗಿಟ್ಟರು. ದೇಶಕ್ಕೆ ಆಕೆಯ ಕೊಡುಗೆಗಳು ಅಪಾರ. ಅತ್ಯಂತ ಶ್ಲಾಘನೀಯವೂ ಮತ್ತು ಆದರ್ಶಪ್ರಾಯವೂ ಆದ ಬದುಕು ಆಕೆಯದಾಗಿತ್ತು.

ಏಪ್ರಿಲ್ 3, 1903ರಂದು ಅನಂತಯ್ಯ ಧಾರೇಶ್ವರ ಮತ್ತು ಗಿರಿಜಾ ಬಾಯಿ ದಂಪತಿಗಳಿಗೆ ಜನಿಸಿದ ಮಗಳಿವಳು. ತಂದೆ ಅನಂತಯ್ಯ ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ. ಮಂಗಳೂರಿನ ಸ್ಥಿತಿವಂತ ಕುಟುಂಬದಲ್ಲಿ ಹುಟ್ಟಿದ ಕಮಲೆ ಮಾನವೀಯ ಮೌಲ್ಯಗಳು ಮತ್ತು ಜೀವನಾದರ್ಶಗಳುಳ್ಳ ವಾತಾವರಣದಲ್ಲಿ ಬೆಳೆದಳು.

ವಿಷಾದವೆಂದರೆ ಎಳೆಯ ಕಮಲೆ ತನ್ನ ಬಾಲ್ಯದಲ್ಲಿಯೇ ಒಂದಾದರೊಂದಂತೆ ದುರಂತಗಳನ್ನೇ ಕಂಡಳು. ಆಕೆಯ ಪ್ರೀತಿಯ ಅಕ್ಕ ಸುಗುಣ ಮದುವೆಯಾಗಿ ಹದಿಹರೆಯದ ವಯಸ್ಸಿನಲ್ಲಿದ್ದಾಗಲೇ ಸಾವನ್ನಪ್ಪಿದಳು. ಆಕೆಯ ಏಳನೇ ವಯಸ್ಸಿನಲ್ಲಿ ತಂದೆ ನಿಧನರಾದರು. ತಂದೆ ಉಯಿಲು ಬರೆಯದಿದ್ದ ಕಾರಣ ಪೂರ್ಣ ಆಸ್ತಿ ಮೊದಲ ಹೆಂಡತಿಯ ಮಗನಿಗೆ ದೊರಕಿತು. ಕಮಲಾಳ ತಾಯಿ ಎರಡನೆಯ ಹೆಂಡತಿಯಾಗಿದ್ದರಿಂದ ಏನೂ ಸಿಕ್ಕಲಿಲ್ಲ

ಹೀಗಾಗಿ ಕಮಲೆ ತಾಯಿಯೊಡನೆ ತನ್ನ ಮಾವನ ಮನೆಯಲ್ಲಿ ಬೆಳೆದಳು. ಸಮಾಜ ಸುಧಾರಕರಾದ ಮಾವನ ಮನೆಗೆ ಗೋಪಾಲಕೃಷ್ಣಗೋಖಲೆ, ಸರ್ ತೇಜ್ ಬಹದ್ದೂರ್ ಸಪ್ರು, ಮಹಾದೇವ್ ಗೋವಿಂದ್‌ರಾನಡೆ, ಶ್ರೀನಿವಾಸಶಾಸ್ತ್ರಿ, ಅನಿಬೆಸೆಂಟ್ ಮತ್ತು ಪಂಡಿತಾ ರಮಾಬಾಯಿ ಅವರಂತಹ ರಾಜಕೀಯ ಧುರೀಣರು ಹಾಗೂ ಗಣ್ಯರು ಆಗಾಗ್ಗೆ ಭೇಟಿನೀಡುತ್ತಿದ್ದರು. ಈ ಸಂಪರ್ಕ ಸಂವಹನವು ಕಮಲೆಯ ಮನಸ್ಸಿನಲ್ಲಿ ಸಾಮಾಜಿಕ ಪ್ರಜ್ಞೆಯ ಬೀಜ ಬಿತ್ತುತ್ತಿತ್ತು.

ನಂತರದಲ್ಲಿ 1917ರಲ್ಲಿ 14ವರ್ಷದ ಕಮಲೆಗೆ ವಿವಾಹವಾಯಿತು. ಆದರೆ ಮದುವೆಯಾದ ಒಂದು ವರ್ಷದೊಳಗೆ ಪತಿ ನಿಧನರಾದರು. ಉದಾರಿಯಾದ ಮಾವ ಆಕೆಯ ಶಿಕ್ಷಣವನ್ನು ಮುಂದುವರಿಸಲು ಪ್ರೋತ್ಸಾಹ ನೀಡಿದರು. ಇದರಿಂದಾಗಿ ಆಕೆ ಮಂಗಳೂರಿನಲ್ಲಿ ಶಾಲಾ ಶಿಕ್ಷಣವನ್ನು ಮುಗಿಸಿ ಮದ್ರಾಸ್‌ನ ಕ್ವೀನ್ ಮೇರಿಸ್ ಕಾಲೇಜಿಗೆ ಸೇರಿದಳು. ಅಲ್ಲಿ ಆಕೆಗೆ ಸುಹಾಸಿನಿ ಚಟ್ಟೋಪಾಧ್ಯಾಯಳ ಸ್ನೇಹವಾಯಿತು. ಆಕೆ ಸರೋಜಿನಿ ನಾಯ್ಡು ಅವರ ಸಹೋದರಿ. ಆಕೆಯ ಮೂಲಕ ಕಮಲಾದೇವಿಗೆ ಆಕೆಯ ಹಿರಿಯಣ್ಣ ಹರಿಂದ್ರನಾಥ್ ಚಟ್ಟೋಪಾಧ್ಯಾಯರ ಪರಿಚಯವಾಯಿತು.

ಕವಿ, ನಾಟಕಕಾರ ಮತ್ತು ಕಲಾವಿದರಾದ ಉನ್ನತ ವ್ಯಕ್ತಿತ್ವದ ಹರಿಂದ್ರನಾಥ್‌ರೊಂದಿಗೆ ಕಮಲಾದೇವಿ ಕಲೆ, ಸಂಗೀತ ಮತ್ತು ರಂಗಭೂಮಿಯ ಒಲವು ಅಸಕ್ತಿಗಳನ್ನು ಹಂಚಿಕೊಂಡರು. ದಿನಗಳೆದಂತೆ ಅವರ ಸಂಪರ್ಕ ಅನ್ಯೋನ್ಯವಾಯಿತು. ಸಂಪ್ರದಾಯಸ್ಥ ಸಮಾಜದ ವಿರೋಧವನ್ನು ಮೆಟ್ಟಿ ನಿಂತು ಅವರಿಬ್ಬರೂ ಮದುವೆಯಾದರು. ಮುಂದೆ ಮಗ ರಾಮ ಹುಟ್ಟಿದನು. ನಂತರದಲ್ಲಿ ಕಮಲಾದೇವಿ ಪತಿಯೊಂದಿಗೆ ದೇಶದಾದ್ಯಂತ ಸಂಚರಿಸಿ, ಅವರ ಆಸಕ್ತಿಯ ಕ್ಷೇತ್ರವಾದ ರಂಗಭೂಮಿಗೆ ಪಾದಾರ್ಪಣೆ ಮಾಡಿದರು. ಹಲವಾರು ಜಾನಪದ, ರಂಗಭೂಮಿ ಮತ್ತು ಪ್ರಾದೇಶಿಕ ನಾಟಕಗಳ ಪ್ರದರ್ಶನಗಳನ್ನು ನೀಡಿದರು. ಇಷ್ಟೇ ಅಲ್ಲದೆ ಅವರು ಮೂಕಿ ಚಿತ್ರಗಳಲ್ಲೂ ನಟಿಸಿದರು.

ನಂತರ, ಅವರು ಲಂಡನ್ನಿನ ಬೆಡ್‌ಫೋರ್ಡ್ ಕಾಲೇಜಿನಲ್ಲಿ ಸಮಾಜಶಾಸ್ತ್ರದಲ್ಲಿ ಡಿಪ್ಲೊಮಾ ಪದವಿ ಗಳಿಸಿದರು. ಆದರೆ ಜೀವನ ಸಂಗಾತಿ ಹರಿಂದ್ರನಾಥರ ವ್ಯಾಮೋಹಗಳ ವಿಲಾಸಿ ಬದುಕು ಕಮಲಾದೇವಿಗೆ ಹತಾಶೆಯನ್ನು ಮೂಡಿಸಿದವು. ವಿರಸ, ವ್ಯತ್ಯಾಸಗಳು ಹೆಚ್ಚಾಗಿ ಮನಸ್ಸುಗಳು ಬೇರೆಯಾದವು. ಕೊನೆಗೆ ಕಮಲಾದೇವಿ ಪತಿಯಿಂದ ವಿಚ್ಛೇದನ ಪಡೆದರು.

1923ರಲ್ಲಿ ಲಂಡನ್ನಿನಲ್ಲಿದ್ದಾಗ ಗಾಂಧಿ ಅವರ ಅಸಹಕಾರ ಚಳವಳಿಯಿಂದ ಪ್ರೇರಿತರಾಗಿ ಕಮಲಾದೇವಿ ಕೂಡಲೇ ಭಾರತಕ್ಕೆ ಮರಳಿದರು. ರಾಷ್ಟ್ರೀಯ ಕಾಂಗ್ರೆಸ್ ಮತ್ತು ಸೇವಾದಳಕ್ಕೆ ಸೇರಿದರು. ಬಹುಬೇಗ, ಕಮಲಾದೇವಿಯವರು ಆ ಸಂಸ್ಥೆಯ ಮಹಿಳಾ ವಿಭಾಗದ ಪ್ರಮುಖರಾದರು. ಮಹಿಳೆಯರನ್ನು ಸ್ವಯಂಪ್ರೇರಿತ ಕಾರ್ಯಕರ್ತರಾಗಲು ಪ್ರೇರೇಪಿಸುವ, ತರಬೇತಿ ನೀಡುವ ಸಂಘಟನಾ ಕಾರ್ಯದಲ್ಲಿ ಅವರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಮಾರ್ಗರೆಟ್ ಕಸಿನ್ಸ್‌ರಿಂದ ಪ್ರೇರಿತರಾಗಿ ಅವರು ಅಖಿಲ ಭಾರತ ಮಹಿಳಾ ಸಮ್ಮೇಳನದ ಮದ್ರಾಸ್ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಕೇವಲ 55 ಮತಗಳಿಂದ ಸೋತರು. ಇದರಿಂದಾಗಿ ಚುನಾವಣೆಗೆ ಸ್ಪರ್ಧಿಸಿದ ಭಾರತದ ಮೊದಲ ಮಹಿಳೆಯಾಗಿದ್ದಾರೆ.

1930ರಲ್ಲಿ ಅವರು ಗಾಂಧೀಜಿ ಅವರ ಉಪ್ಪಿನ ಸತ್ಯಾಗ್ರಹ ಚಳವಳಿಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು. 'ಸ್ವಾತಂತ್ರ್ಯ' ಎಂಬ ಉಪ್ಪಿನ ಪೊಟ್ಟಣಗಳ ಮಾರಾಟ ಮಾಡಲು ಬಾಂಬೆ ಷೇರು ಮಾರುಕಟ್ಟೆಯನ್ನು ಪ್ರವೇಶಿಸಿ ಪ್ರಚಾರ ಮಾಡಿದರು. ಅಲ್ಲಿ ಉಪ್ಪಿನ ಕಾನೂನಿನ ಉಲ್ಲಂಘನೆಗಾಗಿ ಜೈಲು ಶಿಕ್ಷೆ ಅನುಭವಿಸಿದರು. ಒಮ್ಮೆ ಅವರು ಹೈಕೋರ್ಟ್‌ಗೆ ಹೋಗಿ ಅಲ್ಲಿ ಹಾಜರಿದ್ದ ಮ್ಯಾಜಿಸ್ಟ್ರೇಟರನ್ನು "ಈಗಷ್ಟೇ ಸಿದ್ಧಪಡಿಸಿದ, ಸ್ವಾತಂತ್ರ್ಯ ಉಪ್ಪು ಖರೀದಿಸಲು ಆಸಕ್ತಿ ಇದೆಯೇ?" ಎಂದು ಕೇಳಿ ಎಲ್ಲರನ್ನೂ ಚಕಿತಗೊಳಿಸಿದರು.

ಮಹಿಳಾ ಸಮಾನತೆಯನ್ನು ಎತ್ತಿಹಿಡಿದ ಅವರು ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದರು, ಬಾಲ್ಯವಿವಾಹವನ್ನು ತಡೆಗಟ್ಟಲು ತೀವ್ರವಾಗಿ ಶ್ರಮಿಸಿದರು. ಸಂಬಳವಿಲ್ಲದ ಗೃಹಕೃತ್ಯವನ್ನು ಆರ್ಥಿಕ ಚಟುವಟಿಕೆಯೆಂದು ಪರಿಗಣಿಸುವ ಅಗತ್ಯವನ್ನು ಒತ್ತಿ ಹೇಳಿದರು. ಸಾಮಾಜಿಕ ಸುಧಾರಣೆ ಮತ್ತು ಸಮುದಾಯ ಕಲ್ಯಾಣ ಕಾರ್ಯಕ್ರಮಗಳಿಗೆ ಅವರು ಪ್ರೇರಣೆಯಾದರು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅದರಲ್ಲೂ ವಿಶೇಷವಾಗಿ ಮಹಿಳಾ ಶಿಕ್ಷಣದ ಗುಣಮಟ್ಟ ಸುಧಾರಿಸಲು ಪ್ರಯತ್ನಿಸಿದರು. ಇವರ ಪ್ರಯತ್ನದ ಫಲವಾಗಿ ನವದೆಹಲಿಯಲ್ಲಿ ಲೇಡಿ ಇರ್ವಿನ್ ಕಾಲೇಜ್ ಫಾರ್ ಹೋಮ್ ಸೈನ್ಸ್ ಆರಂಭವಾಯಿತು. ಅವರು ನೂರಾರು ಮಹಿಳೆಯರು ಸ್ವಯಂ ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು ಕರೆ ನೀಡಿದರು. 1936ರಲ್ಲಿ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಅಧ್ಯಕ್ಷರಾದರು. ರಾಮ್ ಮನೋಹರ್ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣ್ ಅವರೊಂದಿಗೆ ಕೆಲಸ ಮಾಡಿದರು.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಮಹಿಳೆಯರ ಹಕ್ಕುಗಳನ್ನು ಉಲ್ಲಂಘಿಸಿದರೆ ಅಥವಾ ನಿರ್ಲಕ್ಷಿಸಿದರೆ ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರು ಭಾಗವಹಿಸುವುದನ್ನು ಗಾಂಧೀಜಿಯವರು ವಿರೋಧಿಸಿದಾಗ ಈ ನಿರ್ಧಾರದ ವಿರುದ್ಧ ಅವರು ಮಾತನಾಡಿದ್ದರು.

1939ರಲ್ಲಿ ಡೆನ್ಮಾರ್ಕ್‌ನಲ್ಲಿ ನಡೆದ ಮಹಿಳೆಯರ ಹಕ್ಕುಗಳ ಸಮ್ಮೇಳನದಲ್ಲಿ ಪಾಲ್ಗೊಂಡರು. ಎರಡನೇ ಮಹಾಯುದ್ಧ ಪ್ರಾರಂಭವಾದಾಗ ಭಾರತದ ರಾಷ್ಟ್ರೀಯತಾವಾದಿ ಚಳುವಳಿಗೆ ಬೆಂಬಲವನ್ನು ಕೋರಲು ಬೇರೆ ಬೇರೆ ದೇಶಗಳಿಗೆ ಪ್ರಯಾಣ ಮಾಡಿದರು. ಅವರು ವಿಶೇಷವಾಗಿ ಅಮೆರಿಕಾಗೆ ತೆರಳಿ ಅಲ್ಲಿನ ಸ್ತ್ರೀವಾದಿ ಚಿಂತಕರೊಂದಿಗೆ ಸ್ನೇಹ ಬೆಳೆಸಿದರು, ಆಫ್ರಿಕನ್-ಅಮೇರಿಕನ್ ನಾಗರಿಕ ಹಕ್ಕುಗಳ ಕಾರ್ಯಕರ್ತರೊಂದಿಗೆ ಸಂಪರ್ಕ ಸಾಧಿಸಿದರು. ಅಮೇರಿಕಾದ ಹಲವಾರು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ದಿಟ್ಟವಾಗಿ ಸಾಮ್ರಾಜ್ಯವಾದದ ವಿರುದ್ಧ ಹೋರಾಡುತ್ತಿದ್ದೇನೆ ಎಂದು ಘೋಷಿಸಿದರು.

ಭಾರತವು ಸ್ವಾತಂತ್ರ್ಯವನ್ನು ಪಡೆದ ನಂತರ, ನಿಸ್ವಾರ್ಥಿ ಕಮಲಾದೇವಿ ತಮ್ಮ ಬದುಕನ್ನು ಮಾನವೀಯ ಸೇವೆಗೆ ಮೀಸಲಿಟ್ಟರು. ರಾಯಭಾರಿ, ಕೇಂದ್ರ ಸಚಿವೆ, ರಾಜ್ಯಪಾಲ ಮತ್ತು ಉಪಾಧ್ಯಕ್ಷರಂತಹ ದೊಡ್ಡ ಹುದ್ದೆಗಳು ಇವರನ್ನು ಅರಸಿ ಬಂದಾಗ್ಗೆಯೂ ಇವರು ಅವುಗಳನ್ನು ನಿರ್ಲಿಪ್ತವಾಗಿ ನಿರಾಕರಿಸಿದರು.



ಭಾರತ ಸ್ವಾತಂತ್ರ್ಯದ ನಂತರ ಕಮಲಾದೇವಿಯವರು ಮಾಡಿದ ಮೊಟ್ಟ ಮೊದಲ ಕೆಲಸವೆಂದರೆ ಸಾವಿರಾರು ನಿರಾಶ್ರಿತರಿಗೆ ಸಹಕಾರಿ ಯೋಜನೆಯ ಆಧಾರದಲ್ಲಿ ಮನೆಗಳನ್ನು ಕಟ್ಟಲು "ಭಾರತೀಯ ಸಹಕಾರಿ ಒಕ್ಕೂಟ"ವನ್ನು ಸ್ಥಾಪಿಸಿದರು. ಅವರು ದೆಹಲಿಯ ಹೊರವಲಯದ ಫರಿದಾಬಾದ್ ಪಟ್ಟಣದಲ್ಲಿ ಗಡಿನಾಡಿನ 50,000ಕ್ಕೂ ಹೆಚ್ಚು ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಲು ನೆರವು ನೀಡಿದರು. ಸಾಮಾನ್ಯ ಜನರ ಸಹಾಯದಿಂದ ಅಲ್ಲಿ ಕೈಗಾರಿಕಾ ಪಟ್ಟಣವನ್ನು ಬೆಳೆಸಿದರು. ನಿರಾಶ್ರಿತರಿಗೆ ಹೊಸ ಮನೆಗಳು ಕಟ್ಟಿಕೊಡಲು ಮತ್ತು ಅವರಿಗೆ ಕೆಲಸ ಕೊಡಿಸಲು ದಣಿವರಿಯದೆ ದುಡಿದರು.

ನಮ್ಮ ದೇಶದ ಸಾವಿರಾರು ಸಾಂಪ್ರದಾಯಿಕ ಕಲೆ, ಕರಕುಶಲತೆಗಳಿಗೆ ಮರುಜೀವ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ, ಅಖಿಲ ಭಾರತ ಕರಕುಶಲ ಮಂಡಳಿ, ಸಂಗೀತ ನಾಟಕ ಅಕಾಡೆಮಿ ಮತ್ತು ಸೆಂಟ್ರಲ್ ಕಾಟೇಜ್ ಇಂಡಸ್ಟ್ರೀಸ್ ಎಂಪೋರಿಯಂ, ಹೀಗೆ ಹಲವಾರು ರಾಷ್ಟ್ರೀಯ ಸಂಸ್ಥೆಗಳನ್ನು ಅವರು ಸ್ಥಾಪಿಸಿದರು. ಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡಲು ಹಲವಾರು ರಾಷ್ಟ್ರೀಯ ಪ್ರಶಸ್ತಿಗಳನ್ನು ಕೂಡ ಪ್ರಾರಂಭಿಸಿದರು.

ಕಮಲಾದೇವಿ ಅವರು ಸುಮಾರು 20 ಕೃತಿಗಳನ್ನು ರಚಿಸಿದರು. ಅವರ ಪ್ರತಿಯೊಂದು ಪುಸ್ತಕವೂ ಅವರ ಜಾಗತಿಕ ದೃಷ್ಟಿಕೋನ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಅಭಿವ್ಯಕ್ತಿಸುತ್ತವೆ.

ಭಾರತ ಸರ್ಕಾರವು ಅವರಿಗೆ 1955ರಲ್ಲಿ ಪದ್ಮಭೂಷಣ ಹಾಗೂ 1987ರಲ್ಲಿ ಪದ್ಮವಿಭೂಷಣ ಪ್ರಧಾನ ಮಾಡಿವೆ. 1966ರಲ್ಲಿ ಸಮುದಾಯ ನಾಯಕತ್ವಕ್ಕಾಗಿ ಅವರಿಗೆ 'ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ' ನೀಡಿ ಪುರಸ್ಕರಿಸಲಾಗಿದೆ. ಕರಕುಶಲತೆಗೆ ಉತ್ತೇಜನ ನೀಡಿದ ಅವರ ಗಣನೀಯ ಕಾರ್ಯಗಳಿಗಾಗಿ ಯುನೆಸ್ಕೋ, 'ಯೂನಿಮಾ' ಎಂಬ ಗೌರವವನ್ನು ನೀಡಿದೆ. ಇಂಟರ್‌ನ್ಯಾಷನಲ್ ಪಪ್ಪೆಟ್ರಿ ಆರ್ಗನೈಸೇಶನ್ ಮತ್ತು ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್‌ಗಳೂ ಕೂಡ ಅವರನ್ನು ಗೌರವಿಸಿದೆ. ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜಗತ್ತಿನ ಧೃವತಾರೆಯಾದ ಕಮಲಾದೇವಿ ಅವರು 1988ರ ಅಕ್ಟೋಬರ್ 29 ರಂದು ಅವರ 85ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.



Kasturba

- Usha Dhidi

Kasturba and Mahatma Gandhi were born in the town of Porbandar in the state of Gujarat in 1869. Kasturba was born in a happy, prosperous and cultured Kapadia family. Her father Gokuldas was in trading and his business spread all the way to South Africa. Her mother, Brijkumvar, was a religious woman by nature. Kasturba was the only girl in the family with one elder and one younger brother. Both the Kapadia and the Gandhi families lived in the same neighbourhood and had a good relationship with each other. Young Kasturba would often go and play at Gandhi's residence. Kasturba and Gandhiji were engaged when they were seven year old and married at the age of thirteen. Kasturba became a young mother at the age of 15. Unfortunately, their first child survived only for a few days.

When Mohan was thirteen year old, he had read that being loyal to one's wife was every husband's duty. This was embedded deep in his mind. Along with this, he had a firm belief that a wife shall be loyal to the husband as well. A wife shall obey her husband and shall not step outside the house without his permission. Independent minded Kasturba could not agree to this.

She would think, "Why there is a need to seek husband's permission to go to the temple?" Due to such issues, the couple would often stop talking to each other. Not speaking to each other had become a common feature of this couple.

Gandhiji always bothered that Kasturba was an illiterate. He wanted to tutor her. In spite of his repeated efforts, he did not succeed. In his biography Gandhiji writes, "Kasturba was not bothered about her illiteracy. By nature she was a simple, independent and hardworking woman."

to be continued ....


ಇಂದಿಗೂ ಪ್ರಸ್ತುತ ಗಾಂಧೀಜಿ ಎಂಬ ರೂಪಕ

– ಶಾರದಾ ಭಟ್

ಅಕ್ಟೋಬರ್ 2 ಮತ್ತು ಜನವರಿ 20 ವರ್ಷದ ಈ ಎರಡು ದಿನಗಳಲ್ಲಿ ಇಡೀ ಭಾರತ ಗಾಂಧೀಜಿ ಅವರನ್ನು ನೆನಪಿಸಿಕೊಳ್ಳುತ್ತದೆ. ರಾಜಕಾರಣಿಗಳು ಇನ್ನಿಲ್ಲದಂತೆ ಗಾಂಧೀಜಿ ಅವರ ಗುಣಗಾಣ ಮಾಡಿ ಗಾಂಧೀಜಿ ಅವರ ಪೋಟೋಗೆ ಹಾರ ಸಮರ್ಪಣ ಮಾಡಿ ತಾವು ಗಾಂಧಿ ಭಕ್ತರೆಂಬ ಪೋಸು ನೀಡುತ್ತಾರೆ. ಮತ್ತೆ ಗಾಂಧೀಜಿ ಈ ರಾಜಕಾರಣಿಗಳ ಮನಸ್ಸುಗಳಿಂದ ವರ್ಷಪೂರ್ತಿ ಮರೆಯಾಗುತ್ತಾರೆ.

ಜನಸಾಮಾನ್ಯರು ಗಾಂಧೀಜಿ ಅವರನ್ನು ನೆನಪಿಸಿಕೊಳ್ಳುವುದು ಜೀವನಪೂರ್ತಿ ಗಾಂಧೀಜಿ ನಂಬಿಕೊಂಡು ಬಂದ ಅವರ ಮಾನವೀಯ ಕಾಳಜಿ, ಸರಳತೆ, ಸತ್ಯಸಂಧತೆ, ಅಹಿಂಸೆ ಇತ್ಯಾದಿ ಗುಣಗಳಿಂದಾಗಿ ಎಂಬುದು ನಿರ್ವಿವಾದ. ತೀರಾ ಇತ್ತೀಚೆಗೆ ಇಳಕಲ್ ಗ್ರಾಮದ ಕಾಡಗಿ ಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾದ್ಯ ತೈಲ ಸಾಗಿಸುತ್ತಿದ್ದ ಟ್ಯಾಂಕರ್ ಒಂದು ಅಪಘಾತಕ್ಕೀಡಾಗಿ ಮಗುಚಿ ಬಿದ್ದಿತು. ಟ್ಯಾಂಕರ್ ಸೋರುತ್ತಿದ್ದ ತೈಲವನ್ನು ಸಂಗ್ರಹಿಸಲು ಆಸುಪಾಸಿನ ಜನರೆಲ್ಲ ಬಕೇಟು, ಕೊಡಗಳನ್ನು ಹಿಡಿದು ಪೈಪೋಟಿ ನಡೆಸುತ್ತಿದ್ದಾಗ ಪ್ರಾಣಾಂತಿಕ ಸ್ಥಿತಿಯಲ್ಲಿದ್ದ ಟ್ಯಾಂಕರ್ ಚಾಲಕ ರಕ್ಷಣೆಗಾಗಿ ಚೀರಾಟ ಮಾಡುತ್ತಿದ್ದರೂ ಜನರಿಗೆ ಅವನ ಚೀರಾಟ ಕೇಳುವ ವ್ಯವಧಾನವಿರಲಿಲ್ಲ. ಕೊನೆಯ ಪಕ್ಷ ಒಂದು ಗುಟುಕು ನೀರನ್ನೂ ಅವನಿಗೆ ಕುಡಿಯಲು ಯಾರೂ ಕೊಡಲಿಲ್ಲ. ಅಪಘಾತದ ಸುದ್ದಿ ತಿಳಿದು ಪೋಲೀಸರು ಅಲ್ಲಿ ಬರುವಷ್ಟರಲ್ಲಿ ಅವನ ಪ್ರಾಣಪಕ್ಷಿ ಹಾರಿ ಹೋಗಿತ್ತು. ಈ ಜನರ ದುರಾಸೆಯ ಪ್ರವೃತ್ತಿ ಅವರ ಅಮಾನವೀಯತೆಯ ಒಂದು ಸ್ಪಷ್ಟ ನಿದರ್ಶನ. ಗಾಂಧೀಜಿ ಈಗ ಬದುಕಿದ್ದರೆ ಈ ಘಟನೆಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು?

ಇನ್ನೊಂದು ಘಟನೆ ಹೀಗಿದೆ. ಶ್ರೀಮಂತರ ಅನುಕೂಲಕ್ಕೆಂದೇ ಮುಂಬಯಿ–ಅಹಮದಾಬಾದ್ ನಡುವೆ ಓಡಿಸಲು ಉದ್ದೇಶಿಸಲಾದ ಬುಲೆಟ್ ಟ್ರೈನ್ ಯೋಜನೆಯಿಂದ ಭೂಮಿ ಕಳೆದುಕೊಂಡು ಸಂಕಷ್ಟಕ್ಕೀಡಾಗಲಿರುವ ಸುಮಾರು ಒಂದು ಸಾವಿರ ರೈತರು ಯೋಜನೆಯ ವಿರುದ್ಧ ಗುಜರಾತ್ ಹೈಕೋರ್ಟಿನಲ್ಲಿ ಅಫಿಡೆವಿಟ್ ಸಲ್ಲಿಸಿರುವುದು



ವರದಿಯಾಗಿದೆ. ಸುಮಾರು ಒಂದು ಶತಮಾನದಷ್ಟು ಹಿಂದೆ ಉತ್ತರ ಭಾರತದ ಚಂಪಾರಣ್ಯ ಪ್ರದೇಶದಲ್ಲಿ ನೀಲಿ ಬೆಳೆಸುವ ರೈತರು ಆಂಗ್ಲರ ದಬ್ಬಾಳಿಕೆಗೆ ಒಳಗಾಗಿ ಬವಣೆ ಪಡುತ್ತಿದ್ದಾಗ ಅವರ ಸಂಕಷ್ಟಕ್ಕೆ ನೆರವಾಗಲು ಗಾಂಧೀಜಿ ಅವರು ಚಂಪಾರಣ್ಯಕ್ಕೆ ಹೋಗಿದ್ದರು. ಆದರೆ ಅವರ ನೆರವಿಗೆ ಗಾಂಧೀಜಿ ಧಾವಿಸದಂತೆ ಮಾಡಿ ರೈತರನ್ನು ಬಗ್ಗು ಬಡಿಯುವ ಇರಾದೆಯಿಂದ ಬ್ರಿಟಿಷರು ಗಾಂಧೀಜಿ ಅವರನ್ನು ಬಂಧಿಸುವ ಹುನ್ನಾರ ಮಾಡಿದರೂ ಅದರಿಂದ ಮುಂದಾಗಬಹುದಾದ ರಾದ್ಧಾಂತ ಎಣಿಸಿಯೇ ಬಂಧನದ ಯೋಚನೆ ಕೈ ಬಿಡಲಾಯಿತು. ಅದೆಲ್ಲ ಈಗ ಇತಿಹಾಸ. ಆದರೆ ಬುಲೆಟ್ ಟ್ರೈನ್ ಕಾರಣದಿಂದಾಗಿ ಸಂಕಷ್ಟಕ್ಕೀಡಾಗಿರುವ ರೈತರ ವಿಷಯದಲ್ಲಿ ಗಾಂಧೀಜಿ ಎಂಥ ಕ್ರಮ ಕೈಗೊಳ್ಳಬಹುದು ಎಂಬ ಜಿಜ್ಞಾಸೆ ಎಲ್ಲರ ಮನಸ್ಸಿನಲ್ಲಿ ಮೂಡುವುದು ಸಹಜವೇ ಅಗಿದೆ. ತಮ್ಮನ್ನು ಸತ್ಯಾನ್ವೇಷಿ ಎಂದು ಹೇಳಿಕೊಳ್ಳುತ್ತಿದ್ದ ಗಾಂಧೀಜಿ ಅವರು ಯಾವಾಗಲೂ ಪ್ರಯೋಗಶೀಲರಾಗಿದ್ದರು. ತಾವು ನಂಬಿಕೊಂಡು ಬಂದ ನೈರ್ಮಲ್ಯ, ಅಸ್ಪೃಷ್ಯತಾ ನಿವಾರಣೆ, ಪಾನ ನಿಷೇಧ, ಗುಡಿ ಕೈಗಾರಿಕೆಗಳಿಗೆ ಆದ್ಯತೆ, ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ, ಮತೀಯ ಸಾಮರಸ್ಯ ಇತ್ಯಾದಿ ಅಂಶಗಳು ಭಾರತವನ್ನು ಏಕತೆಯೆಡೆಗೆ ಕೊಂಡು ಹೋಗಲು ಸಹಾಯಕವಾಗುತ್ತದೆ ಎಂಬುದನ್ನು ಅವರು ಪ್ರಬಲವಾಗಿ ನಂಬಿದ್ದರು.



ಸಮಾಜದ ಅಂಚಿನಲ್ಲಿರುವ ಜನರ ಪರವಾಗಿದ್ದ ಗಾಂಧೀಜಿ ಅವರ ಕಾಳಜಿಯ ಒಂದು ಸಣ್ಣ ಉದಾಹರಣೆ ಇದು. ಗಾಂಧೀಜಿ ಅವರ ಹುಟ್ಟುಹಬ್ಬದಂದು ಒಮ್ಮೆ ಕಸ್ತೂರ್ ಬಾ ತುಪ್ಪದ ದೀಪ ಹಚ್ಚಿದಾಗ ಗಾಂಧೀಜಿ ಅದನ್ನು ಆಕ್ಷೇಪಿಸುತ್ತಾರೆ. ಜನರಿಗೆ ಒಂದು ಹೊತ್ತಿನ ಹೊಟ್ಟೆಗಾಗಿ ಎಣ್ಣೆ ಕೂಡಾ ಸಿಗದಿರುವಾಗ ತಮ್ಮ ಸಲುವಾಗಿ ತುಪ್ಪದ ದೀಪ ಏಕೆ ಎಂಬುದು ಅವರ ಅಭಿಮತ. ಸರಳ ಜೀವನದಲ್ಲಿ ಸಾರ್ಥಕತೆ ಇದೆ ಎಂದು ನಂಬಿದ ಅವರು ವಿಲಾಸಿ ಜೀವನವನ್ನು ಇಷ್ಟ ಪಡುತ್ತಿರಲಿಲ್ಲ. ಒಮ್ಮೆ ಇಂದೋರಿನಲ್ಲಿ ನಡೆದ ಒಂದು ಸಾಹಿತ್ಯ ಸಮಾವೇಶಕ್ಕೆ ಗಾಂಧೀಜಿ ಅಧ್ಯಕ್ಷರಾಗಿದ್ದರು. ಗಾಂಧೀಜಿ ಮತ್ತು ಅವರ ಅನುಯಾಯಿಗಳನ್ನು ಅಲ್ಲಿನ ಒಬ್ಬ ಸೇಠ್‌ಜಿ ತಮ್ಮಲ್ಲಿ ಭೋಜನಕ್ಕೆ ಆಹ್ವಾನಿಸುತ್ತಾರೆ. ಆಗ ಗಾಂಧೀಜಿ ಅವರ ಅನುಯಾಯಿಗಳಿಗೆ ಬೆಳ್ಳಿ ತಟ್ಟೆ ಹಾಗೂ ಗಾಂಧೀಜಿ ಅವರಿಗೆ ಬಂಗಾರದ ತಟ್ಟೆಯಲ್ಲಿಯೇ ಭೋಜನ ಸ್ವೀಕರಿಸಬೇಕೆಂದು ಒತ್ತಾಯಿಸಿದಾಗ ಅದನ್ನು ನಯವಾಗಿ ನಿರಾಕರಿಸಿದ ಗಾಂಧೀಜಿ ಅವರು ತಮ್ಮ ಜೋಳಿಗೆಯಿಂದ ಅಲ್ಯೂಮಿನಿಯಂ ತಟ್ಟೆ ತೆಗೆದು ಮುಂದಿಟ್ಟು ಕೊಳ್ಳುತ್ತಾರೆ. ಭಾರತದ ಬಹಳಷ್ಟು ಜನರಿಗೆ ಒಂದು ಹೊತ್ತಿನ ಊಟ ಸಿಗದಿರುವಾಗ ತಾನು ಬಂಗಾರದ ತಟ್ಟೆಯಲ್ಲಿ ಉಣ್ಣುವುದು ಅಕ್ಷಮ್ಯ ಎಂದು ಸೇಠ್‌ಜಿಗೆ ಅವರು ವಿವರಿಸುತ್ತಾರೆ. ಶ್ರೀಮಂತಿಕೆಯ ಪ್ರದರ್ಶನ ತಪ್ಪು ಎಂದು ಆಗ ಸೇಠ್‌ಜಿಗೆ ಅರ್ಥವಾಗುತ್ತದೆ.

ಗಾಂಧೀಜಿ ಅವರ ದೃಷ್ಟಿಯಲ್ಲಿ ದುಂದುಗಾರಿಕೆ ಒಂದು ಪಿಡುಗು ಎಂಬ ಭಾವನೆಯಿತ್ತು. ಅದು ಭ್ರಷ್ಟಾಚಾರದ ಮೂಲ ಎಂದವರು ಭಾವಿಸುತ್ತಿದ್ದರು. ಅದಕ್ಕಾಗಿ ಎಕ್ಸರ್‌ಸೈಜ್ ಪುಸ್ತಕದ ಬದಲು ಹಳೆಯ ಕ್ಯಾಲೆಂಡರ್‌ಗಳ ಹಿಂಭಾಗದ ಖಾಲಿ ಜಾಗವನ್ನು ಅವರು ಬಳಸುತ್ತಿದ್ದುದು ಅವರ ಮಿತವ್ಯಯಕ್ಕೆ ಸಾಕ್ಷಿ. ಬೇರೆಯವರಿಗೆ ಪತ್ರ ಬರೆಯಲು ಅವರು ಉಪಯೋಗಿಸುತ್ತಿದ್ದುದು ತನಗೆ ಬಂದ ಪತ್ರಗಳ ಖಾಲಿ ಜಾಗದಲ್ಲಿ ಚೂರು ಖಾಲಿ ಕಾಗದ ಅಂಟಿಸಿ ಅಲ್ಲಿ ಪತ್ರ ರವಾನಿಸಬೇಕಾದ ವ್ಯಕ್ತಿಯ ವಿಳಾಸವನ್ನು ಬರೆದು ಪತ್ರವನ್ನು ಅಂಚೆಗೆ ಹಾಕುತ್ತಿದ್ದರು. ಗಾಂಧೀಜಿ ಅವರು ಅನುಸರಿಸುತ್ತಿದ್ದ ಮಿತವ್ಯಯದ ಮಾರ್ಗ ಸಣ್ಣಪುಟ್ಟ ಸಮಾರಂಭಗಳಿಗೂ ಸರಕಾರಿ ಹಣ ಪೋಲು ಮಾಡುವ ರಾಜಕಾರಣಿಗಳಿಗೆ ಮಾದರಿಯಾಗಬೇಕು.

ಒಮ್ಮೆ ದೊಡ್ಡ ಪೇಟವನ್ನು ತಲೆಗೆ ಸುತ್ತಿದ ವ್ಯಕ್ತಿಯೊಬ್ಬರು ಗಾಂಧೀಜಿಯನ್ನು ನೋಡಲು ಬಂದರು. ಗಾಂಧೀಜಿ ಅವರ ಕಾಲೆಳೆಯುವ ಹುಮ್ಮಸ್ಸಿನಲ್ಲಿ ಆ ವ್ಯಕ್ತಿ ಹೇಳಿದರು. "ನಿಮ್ಮ ಹೆಸರಿನ ಟೋಪಿ ಎಷ್ಟೊಂದು ಪ್ರಸಿದ್ಧವಾಗಿದೆ. ಆದರೆ ನಿಮ್ಮ ತಲೆಯ ಮೇಲೆ ಗಾಂಧಿ ಟೋಪಿ ಇಲ್ಲವಲ್ಲ." ಆ ವ್ಯಕ್ತಿಯ ಮಾತಿನಿಂದ ಒಂದಿಷ್ಟೂ ವಿಚಲಿತರಾಗದೆ ಗಾಂಧೀಜಿ ಅದೇ ಧಾಟಿಯಲ್ಲಿ ನಗುತ್ತಾ, "ಅದಕ್ಕೆ ನೀವೆ ಕಾರಣ. ಇಪ್ಪತ್ತು ಜನರ ಟೋಪಿಗಾಗುವಷ್ಟು ಬಟ್ಟೆಯನ್ನು ನಿಮ್ಮ ಪೇಟವೊಂದೇ ತಿಂದು ಹಾಕಿದೆ. ಹಾಗಾಗಿ ಇಪ್ಪತ್ತು ಜನರಿಗೆ ಟೋಪಿ ಇಲ್ಲದಂತಾಗಿದೆ. ಆ ಇಪ್ಪತ್ತು ಜನರಲ್ಲಿ ನಾನೂ ಒಬ್ಬ" ಎಂದು ಗಾಂಧೀಜಿ ಕಟಕಿಯಾಡಿದಾಗ ವ್ಯಕ್ತಿ ಗಪ್‌ಚುಪ್.

ಅನ್ಯಾಯದ ವಿರುದ್ಧ ಗಾಂಧೀಜಿ ಅವರು ಬಳಸುತ್ತಿದ್ದುದು ಸತ್ಯಾಗ್ರಹದ ಮಾರ್ಗವನ್ನು. ತಮ್ಮ ಅನುಯಾಯಿಗಳಿಗೆ ಅವರು ಉಪದೇಶಿಸುತ್ತಿದ್ದುದು ಕೂಡಾ ಇದನ್ನೇ. ಸತ್ಯಾಗ್ರಹಿಗಳಿಗೆ ಜೀವನ ನಿರ್ವಹಣೆ ಕಷ್ಟವಾದಾಗ ಜೆಮ್‌ಶೇಟ್‌ಜಿ ಟಾಟಾ ಅವರಿಂದ ದೇಣಿಗೆಯಾಗಿ ಪಡೆದ 25 ಸಾವಿರ ರೂಪಾಯಿಗಳಲ್ಲಿ 1910ರಲ್ಲಿ ಟಾಲ್‌ಸ್ಟಾಯ್ ಫಾರ್ಮ್ ಹೌಸ್ ತೆರೆದು ಅಲ್ಲಿ ಸತ್ಯಾಗ್ರಹಿಗಳಿಗೆ ನೈರ್ಮಲ್ಯ, ಶಿಸ್ತು, ಸಹಬಾಳ್ವೆ, ಅಹಿಂಸೆ ಇತ್ಯಾದಿಗಳ ಕುರಿತಾಗಿ ಪಾಠ ಮಾಡುತ್ತಿದ್ದರು. ಬದುಕಿಗೆ ಪೂರಕವಾಗುವಂತೆ ತಂತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕು ಎಂಬ ಉಪದೇಶದೊಡನೆ ಶೌಚಾಲಯವನ್ನು ತಾನೇ ಸ್ವಚ್ಛ ಮಾಡಿ ತೋರಿಸುವ ಮೂಲಕ ಇತರರಿಗೆ ಮಾದರಿ ಹಾಕಿಕೊಟ್ಟರು. ಅಹಿಂಸೆಯನ್ನು ಒಂದು ಅಸ್ತ್ರವಾಗಿ ಬಳಸುತ್ತಾ ಗಾಂಧೀಜಿ ಒಂದು ಶಕ್ತಿಯಾಗಿ ಬೆಳೆದದ್ದು ತಮ್ಮಲ್ಲಿ ಅಂತರ್ಗತವಾದ ಆತ್ಮಬಲದಿಂದ. ಇದೇ ಆತ್ಮಬಲ ಯಾವುದೇ ಅನ್ಯಾಯವನ್ನು ಧೈರ್ಯವಾಗಿ ಎದುರಿಸುವ ನೈತಿಕತೆಯನ್ನು ಅವರಲ್ಲಿ ಉಂಟು ಮಾಡಿತ್ತು. ಹಿಟ್ಲರನ ಯುದ್ಧಪಿಪಾಸು ಪ್ರವೃತ್ತಿಯನ್ನು ವಿರೋಧಿಸುತ್ತಾ ಒಂದೊಮ್ಮೆ ಹಿಟ್ಲರನಿಗೆ ಬರೆದ ಪತ್ರದಲ್ಲಿ **"If you attain success in the war it will not prove that yur are right. It will only prove that your power of destruction is greater"** ಎಂಬ ಒಕ್ಕಣೆ ಇದಕ್ಕೆ ಸಾಕ್ಷಿಯಾಗಿದೆ. ಗಾಂಧೀಜಿಯವರ ಜಿವನವೇ ಒಂದು ವಿಶ್ವಕೋಶ. ಅದರಲ್ಲಿ ಬಗೆದಷ್ಟೂ ಇಂಥ ಅನೇಕ ಉದಾಹರಣೆಗಳು ಸಿಗುತ್ತವೆ. ಸಮಾಜದಲ್ಲಿ ಆರ್ಥಿಕ ಸಮಾನತೆ ತರುವ ನ್ಯಾಯ ಪದ್ಧತಿ ಇವುಗಳಲ್ಲಿ ಮುಖ್ಯವಾದುದು.


ಕನ್ನಡ – ಕನ್ನಡಿಗ – ಕರ್ನಾಟಕ

– ಇಂದಿರಾ ಕೃಷ್ಣಪ್ಪ

ನಾವಿಂದು 64ನೇ ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದೇವೆ. 1956ರ ನವೆಂಬರ್ 1ರಂದು ಕನ್ನಡ ನಾಡು ಒಂದಾಯಿತು. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು". ಹುಯಿಲಗೋಳ ನಾರಾಯಣರಾಯರು ರಚಿಸಿದ ಗೀತೆ, ಇದನ್ನು ಕುಂದಾಪುರದ ಮೊಗೇರಿಯ ನಮ್ಮ ಅಜ್ಜನ ಮನೆಯ ಗ್ರಾಮಪೋನಿನಲ್ಲಿ ಹಾಕುತ್ತಿದ್ದರು. ಅದನ್ನೂ ಕೇಳ್ತಾ ಬೆಳೆದವಳು ನಾನು. ಈ ಗೀತೆಯನ್ನು ಬೆಳಗಾವಿಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಬಾಲಕಿ ಗಂಗೂಬಾಯಿ ಹಾನಗಲ್ ಅವರು ಅಂದಿನ ಕಾಂಗ್ರೇಸ್ ಸಮ್ಮೇಳನದ ಅಧ್ಯಕ್ಷರಾಗಿದ್ದ ಮಹಾತ್ಮ ಗಾಂಧೀಜಿ ಅವರ ಸಮ್ಮುಖದಲ್ಲಿ ಹಾಡಿ 'ಕನ್ನಡ ನಾಡು' ಭೂಮಿಕೆಗೆ ನಾಂದಿ ಹಾಡಿದರು. ಹಾಡಿನ ನಂತರ ಗಂಗೂಬಾಯಿ ಅವರನ್ನು ಗಾಂಧೀಜಿ ಅವರು ಹತ್ತಿರ ಕರೆದು ಹರಸಿದ್ದರು ಎಂಬ ಅಂಶವನ್ನು ಇಲ್ಲಿ ಸ್ಮರಿಸಬಹುದು. ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಕನ್ನಡದ ನಾಲ್ವರಿಗೆ ಭಾರತ ರತ್ನ ಪ್ರಶಸ್ತಿಗಳು ಸಂದಿವೆ. ವರನಟ ರಾಜಕುಮಾರ್ ಅವರಿಗೆ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿಗಳು ಸಂದಿವೆ. ಕರ್ನಾಟಕದ ಗೌರವಾನ್ವಿತ ಸನ್ಮಾನ್ಯ ಹೆಚ್.ಡಿ. ದೇವೇಗೌಡ ಅವರು ಪ್ರಧಾನಿಮಂತ್ರಿಗಳಾಗಿದ್ದರು. ಇಂತಿಲ್ಲಾ ಘನತೆಗೆ ಪಾತ್ರವಾದ ಕರ್ನಾಟಕವೆಂದು ನಾಮಕರಣವಾದ ಗಳಿಗೆ ಹೇಗಿತ್ತೆಂಬುದನ್ನು ಒಮ್ಮೆ ನೋಡೋಣ ಬನ್ನಿ. 1973ರ ನವೆಂಬರ್ 1 ರಂದು ನಮ್ಮ ರಾಜ್ಯಕ್ಕೆ "ಕರ್ನಾಟಕ" ಎಂದು ಮರು ನಾಮಕರಣವಾಯಿತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಅವರು ಅಂದು "ಕರ್ನಾಟಕ ಇಡೀ ದೇಶದಲ್ಲಿ ಮೊದಲನೇ ಸ್ಥಾನಕ್ಕೇರಬೇಕೆಂದು "ಮಾತನಾಡಿದರು. ವಿಧಾನಸಭೆಯಲ್ಲಿ ದೇವರಾಜ ಅರಸು ಅವರು "ಕರ್ನಾಟಕ" ಇತಿಹಾಸ ಕುರಿತು ಸುದೀರ್ಘವಾಗಿ ಮಾತನಾಡಿ "ಬಾಳುವೆ ಕರ್ನಾಟಕ ಆಗಿದೆ – ಆಳುವ ಕರ್ನಾಟಕ ಆಗಬೇಕು" ಎಂದು ಕರ್ನಾಟಕದ ಮರುನಾಮಕರಣದ ನಿರ್ಣಯವನ್ನು ಮಂಡಿಸಿದರು. ಅದನ್ನು ಸಭಾಧ್ಯಕ್ಷರು ಮತಕ್ಕೆ ಹಾಕಿದರು. ರಾಜ್ಯದ ಹೆಸರನ್ನು 'ಕರ್ನಾಟಕ' ಎಂಬುದಾಗಿ ಬದಲಾಯಿಸಬೇಕೆಂದು ಸಭೆ ಖಚಿತ ಅಭಿಪ್ರಾಯಪಟ್ಟು ಸಂವಿಧಾನ ತಿದ್ದುಪಡಿಗಳನ್ನು ರಾಜ್ಯ ಸರ್ಕಾರ ಪಡೆದುಕೊಳ್ಳಲು ಕ್ರಮಕೈಗೊಳ್ಳಬೇಕೆಂದು ಸಭೆ ಶಿಫಾರಸ್ಸು ಮಾಡಿತ್ತು.

ನಿರ್ಣಯ ಮಂಡನೆ ಆಗುತ್ತಿದ್ದಂತೆ ಎಲ್ಲರೂ ಒಕ್ಕೊರಲಿನಿಂದ ಜಯಕಾರ ಹಾಕಿದರು. ನಿರ್ಣಯದ ವಿರುದ್ಧ ಯಾರೂ ಇಲ್ಲದ್ದರಿಂದ "The resolution was adopted" ಎಂದು ಘೋಷಿಸಿದರು. ಆಗ ಶಾಸಕರಾಗಿದ್ದ ವಾಟಾಳ್ ನಾಗರಾಜ್ ಅವರು ಈ ಶುಭ ಸಂದರ್ಭದಲ್ಲಿ, "ನಾನು ಎಲ್ಲರ ಮೇಲೆ ಮಲ್ಲಿಗೆ ಹೂಗಳನ್ನು ಚೆಲ್ಲುತ್ತೇನೆ" ಎಂದರು. ಎಸ್. ಬಂಗಾರಪ್ಪ ಅವರು ವಾಟಾಳ್ ನಾಗರಾಜ್ ಅವರು ಸೇರಿ ಎಲ್ಲರ ಮೇಲೆ ಮಲ್ಲಿಗೆ ಹೂಗಳನ್ನು ಚೆಲ್ಲಿದರು. ಆಗ ದೇವರಾಜ ಅರಸು ಅವರು "ಕರ್ನಾಟಕ"ಕ್ಕೆ ಎಂದು ಧ್ವನಿ ಎತ್ತಿದರು. ಎಲ್ಲಾ ಸದಸ್ಯರು "ಜಯವಾಗಲಿ" ಎಂದು ಘೋಷಣೆ ಹಾಗೂ ಚಪ್ಪಾಳೆಯನ್ನು ತಟ್ಟಿದರು. ನಂತರ "ಕರ್ನಾಟಕ" ವೆಂಬ ನಾಮಫಲಕವನ್ನು ಅನಾವರಣ ಮಾಡಲಾಯಿತು. ಮುಖ್ಯಮಂತ್ರಿ ದೇವರಾಜ ಅರಸು ಅವರ ಅಂದಿನ ಮಾತುಗಳು 'ಐತಿಹಾಸಿಕ ಭಾಷಣ' ಎಂದು ದಾಖಲಿಸಲಾಗಿದೆ.

1956ರ ಪೂರ್ವದಲ್ಲಿ ಕರ್ನಾಟಕದ ಗೆಝೆಟಿಯರ್‌ನಲ್ಲಿ ಪ್ರಕಟವಾದ ಕರ್ನಾಟಕ ಭೂಪಟದಂತೆ ಮೈಸೂರು ಸಂಸ್ಥಾನ (ಮೈಸೂರು, ಬೆಂಗಳೂರು, ಕೋಲಾರ, ಶಿವಮೊಗ್ಗ, ಬಳ್ಳಾರಿವರೆಗೂ), ಕೊಡಗು ಸಂಸ್ಥಾನ, ಮದರಾಸು ಪ್ರಾಂತ್ಯ (ಬಳ್ಳಾರಿ ಮತ್ತು ಮಂಗಳೂರು), ಮುಂಬಯಿ ಪ್ರಾಂತ್ಯ (ವಿಜಾಪುರ, ಬೆಳಗಾವಿ, ಧಾರವಾಡ, ಕಾರವಾರ), ಹೈದ್ರಾಬಾದ್ ಸಂಸ್ಥಾನ (ಬೀದರ್, ಕಲ್ಬುರ್ಗಿ, ರಾಜಚೂರು) ಎಂಬ ಐದು ವಿಭಾಗಗಳಲ್ಲಿ ಹಂಚಿಹೋಗಿತ್ತು. ಭಾರತದ



ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ಕರ್ನಾಟಕ ಏಕೀಕರಣದ ಚಳುವಳಿಯೂ ರೂಪುಗೊಂಡಿರುವುದನ್ನು ನಾವು ಅವಲೋಕಿಸಬಹುದು. ಕನ್ನಡದ ಕುಲ ಪುರೋಹಿತ ಆಲೂರು ವೆಂಕಟರಾಯರು (ಮಹಾತ್ಮ ಗಾಂಧಿ ಅವರ ಸತ್ಯಾಗ್ರಹದಲ್ಲೂ ಭಾಗವಹಿಸಿದ್ದರು) 1903ರಿಂದ ಆರಂಭಿಸಿದ ಕರ್ನಾಟಕದ ಕೂಗು 1956ಕ್ಕೆ ಫಲಪ್ರದವಾಯಿತು. ಸುಧೀರ್ಘ 53ವರ್ಷಗಳ ಹೋರಾಟದಲ್ಲಿ ಶಾಂತಕವಿ, ಡೆಪ್ಯೂಟಿ ಚೆನ್ನಬಸಪ್ಪ, ಪುಟ್ಟಣ್ಣ ಚೆಟ್ಟಿ, ಕರ್ಪೂರ ಶ್ರೀನಿವಾಸ ರಾಯರು, ಫ.ಗು. ಹಳಗಟ್ಟಿ, ರಾ.ಹ.ದೇಶಪಾಂಡೆ, ಬೆನಗಲ್ ರಾಮರಾಯರು, ಮುದುವೀಡು ಕೃಷ್ಣರಾಯರು, ಮಠ ಗದಿಗಯ್ಯ, ವೆಂಕಟಗಿರಿ ಜೋಷಿ, ರಂಗನಾಥ ದಿವಾಕರ, ನಾ.ಸು. ಹರ್ಡೀಕರ್, ಪಾಟೀಲ ಪುಟ್ಟಪ್ಪ, ಹಳ್ಳಿಕೇರಿ ಗುದ್ಲೆಪ್ಪ, ಕಡಪ ರಾಘವೇಂದ್ರರಾಯರು, ಪಟೇಲ್ ಸಂಗನಗೌಡ, ಅಂದಾನಪ್ಪ ದೊಡ್ಡಮೇಟಿ, ರಂಜಾನ್ ಸಾಬ್, ಶಂಕರಕಲ್ಲಿನ ಗೌಡ, ರಾಮಚಂದ್ರರಾವ್, ಸಿದ್ದಪ್ಪ ಕಂಬಳಿ, ಹುಯಿಲಗೋಳ ನಾರಾಯಣರಾಯರು, ಜಿ.ಪಿ. ರಾಜರತ್ನಂ, ದಿನಕರ ದೇಸಾಯಿ, ವಿ.ಕೃ. ಗೋಕಾಕ್, ಮಾಧವರಾವ್, ಶಂಬಾ ಜೋಷಿ, ಅ.ನ.ಕೃ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಬಿ.ಎಂ.ಶ್ರೀಕಂಠಯ್ಯ, ಗೋವಿಂದ ಪೈ, ತಿ.ತಾ. ಶರ್ಮಾ, ಬೆಟಗೇರಿ ಕೃಷ್ಣಶರ್ಮ, ಶಿವರಾಮ ಕಾರಂತ, ಗೊರೂರು ಶ್ರೀರಂಗ, ಜಯದೇವಿತಾಯಿ ಲಿಗಾಡೆ, ಅಲ್ಲಂ ಸರ್ವಮಂಗಳಮ್ಮ (ಬಳ್ಳಾರಿ), ಬಳ್ಳಾರಿ ಸಿದ್ದಮ್ಮ, ಯಶೋಧರಮ್ಮ, ಆಶಾತಾಯಿ, ಡಾ. ಮಂದಾಕಿನಿ, ಪದ್ಮಾವತಿ (ಮದ್ರಾಸ್ ಪ್ರಾಂತ್ಯದ ಶಾಸಕಿ), ವಿಮಲಬಾಯಿ ಮೇಲ್ಕೋಟೆ, ಸಾವಿತ್ರಿದೇವಿ ಹಳ್ಳಿಕೇರಿ, ವೀರಮ್ಮ ಶಾಂತದೇವಿ ಜತ್ತಿ, ಬಸಮ್ಮ ಉಪ್ಪಿನ, ಸುಗ್ಗಲದೇವಿ, ಶಂಕ್ರೆವ್ವ ಹಿರೇಮಠ, ಶಿವಬಾಯಿ ಪಾಟೀಲ, ಬಸವಲಿಂಗಣ್ಣ ಬಾಳೆಕುಂದ್ರಿ, ರಮಾಬಾಯಿ ಗೋಖಲೆ, ಚಂಪಾತಾಯಿ, ಯಮುನಾ ತಾಯಿ, ಲೀಲಾ ಪಾಟೀಲ, ಶಾಂತದೇವಿ ಮಾಳವಾಡ, ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಾಧ್ಯಾಯ, ಕಮಲಾಬಾಯಿ ಮಂಗಳೂರು, ಭಾಗೀರಥಿಬಾಯಿ ಪುರಾಣಿಕ, ಬಳ್ಳಾರಿ ಸಾವಿತ್ರಮ್ಮ, ಕೃಷ್ಣಾಬಾಯಿ, ಶಕುಂತಲಾಬಾಯಿ, ಎಂ.ಆರ್, ಲಕ್ಷ್ಮಮ್ಮ, ಟಿ. ಸುನಂದಮ್ಮ, ನಾಗವ್ವೆ ವೀರನಗೌಡ ಪಾಟೀಲ, ಲೀಲಾವತಿ ವೀರನಗೌಡ, ಶಕುಂತಲಾ ಕುರ್ತುಕೋಟಿ, ಪ್ರಮೀಳಾಬಾಯಿ ದೇಶಪಾಂಡೆ, ಪದ್ಮಾವತಿ ಬಿದರಿ, ಮೈಲಾರ ಮಹಾದೇವಪ್ಪನವರ ಹೆಂಡತಿ ಸಿದ್ದಮ ಮೈಲಾರ, ಗಂಗೆವ್ವೆ ಗುದ್ಲೆಪ್ಪ, ಸರೋಜಿನಿ ಶಿಂತ್ರಿ, ಸರಸ್ವತಿ ಗೌಡರ, ದೇವಕ್ಕ ರಮಾನಂದ, ಸಂಕೆವ್ವೆ ಯಮಕನಮರಡಿ, ಚಂದ್ರಬಾಯಿ ಚನ್ನಪ್ಪವಾಲಿ, ಪದ್ಮಾವತಿ ದೇಸಾಯಿ, ಗೌರವ್ವ ಸಾವಳಗಿ, ಶಾಂತಬಾಯಿ, ವೆಂಕಟೇಶಮಠ, ಪಾರ್ವತಿಬಾಯಿ ದೇಶಪಾಂಡೆ, ಅಂಬಕ್ಕ ಬಳಿಗಾರ, ಲಕ್ಷ್ಮೀದೇವಿ ಪಾಟೀಲ ಇನ್ನೂ ಮುಂತಾದವರು ಅವಿಶ್ರಾಂತವಾಗಿ ಶ್ರಮಿಸಿದ್ದಾರೆ.

ಮುಂಬೈ ಪ್ರಾಂತ್ಯದಲ್ಲಿ ಬಿರುಸಾಗಿದ್ದ ಚಳುವಳಿ ಮೈಸೂರು ಸಂಸ್ಥಾನಕ್ಕೂ ವಿಸ್ತರಿಸಿತು. 1937ನೇ ಅಕ್ಟೋಬರ್ 10ರಂದೇ ಏಕೀಕರಣ ದಿನವನ್ನು ಆಚರಿಸಿದ್ದರು. ಆದರೆ ಆಡಳಿತಾತ್ಮಕ ಕ್ರಮ ಸ್ವಾತಂತ್ರ್ಯ ಬಂದ ನಂತರವೇ ಆರಂಭವಾಯಿತೆನ್ನಬಹುದು. ಸ್ವತಂತ್ರ ಭಾರತದಲ್ಲಿ ರಾಜ್ಯ ಪುರ್ನವಿಂಗಡಣಾ ಸಮಿತಿ ಕೇಂದ್ರ ಸರ್ಕಾರದಿಂದ ಸ್ಥಾಪನೆಯಾಯಿತು. 1948ರಲ್ಲಿ ಎಸ್.ಕೆ. ಧರ್ ಸಮಿತಿ (ಭಾಷಾವಾರು ರಾಜ್ಯದ ಮಾತು ಮುಂದುವರಿಯಲಿಲ್ಲ), ಜೆವಿಸಿ ಸಮಿತಿ (ಪ್ರಧಾನ ಮಂತ್ರಿ ನೆಹರು – ಸರ್ದಾರ್ ಪಟೇಲ್‌ರು ಮತ್ತು ಪಟ್ಟಾಭಿ ಸೀತಾರಾಮಯ್ಯ ಸದಸ್ಯರಾಗಿದ್ದರು), ವಾಂಜಾಲಾ ಸಮಿತಿ, ಕೋಳ್ಕರ್ ಸಮಿತಿ, ನ್ಯಾಯಮೂರ್ತಿ ಫಜಲ್ ಅಲಿ ಸಮಿತಿಗಳು ಕಾಲಕಾಲಕ್ಕೆ ರಚಿಸಲಾಗಿತ್ತು. (ಕೆ.ಎಂ. ಫಣಿಕ್ಕರ್, ಎಚ್.ಎನ್. ಕುಂಜ್ರು ಸದಸ್ಯರಾಗಿದ್ದರು). ಈ ಸಮಿತಿಗಳು ಅನುಕ್ರಮವಾಗಿ ಕಾರ್ಯನಿರ್ವಹಿಸಿದವು. ನ್ಯಾಯಮೂರ್ತಿ ಫಜಲ್ ಆಲಿ ಸಮಿತಿಯು ಬಹು ಆಯಾಮಗಳಲ್ಲಿ ಪರಿಶೀಲಿಸಿ "ಕರ್ನಾಟಕ ಏಕೀಕರಣ"ವಾಗಲು ಪಕ್ವವಾಗಿವೆ ಎಂದು 1955ರ ಸೆಪ್ಟಂಬರ್ 30ರಂದು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿತು. ತದನಂತರ, ಲೋಕಸಭೆ ಮತ್ತು ರಾಜ್ಯಸಭೆ ಒಪ್ಪಿಗೆಯೊಂದಿಗೆ ರಾಷ್ಟ್ರಪತಿಗಳು ಅಂಕಿತವೂ ಆಯಿತು ನಂತರ ವಿಶಾಲ "ಮೈಸೂರು ರಾಜ್ಯ" ಪ್ರತ್ಯೇಕ ರಾಜ್ಯವಾಗಿ ಹೊರಹೊಮ್ಮಿತ್ತು.. ಅಂದಿನ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದ್ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜು ಕ್ರಿಕೆಟ್ ಕ್ರೀಡಾಂಗಣದ ಆವರಣದಲ್ಲಿ ಮೈಸೂರು ರಾಜ್ಯದ ಉದಯವನ್ನು ಘೋಷಿಸಿದರು.


ಮುಂದುವರೆಯುವುದು....

ಗಾಂಧಿ ಆದರ್ಶಗಳ ಚಿಲುವೆ - ಹೊ. ಶ್ರೀನಿವಾಸಯ್ಯ

- ಎಚ್.ಕೆ. ಪಾಟೀಲ್

((ಗಾಂಧಿ ಮಾರ್ಗಿ ಹೋ. ಶ್ರೀ ಕೃತಿಯಿಂದ ಆಯ್ದ ಭಾಗ)

'ಗಾಂಧಿ ಸ್ಮೃತಿ' ಎಂಬ ಅನುಕರಣೀಯವಾದ ತತ್ವಾದರ್ಶಗಳ ಅನುಷ್ಠಾನಕ್ಕೆ ಅನ್ವರ್ಥಕನಾಮವಾದ ಡಾ. ಹೊ. ಶ್ರೀನಿವಾಸಯ್ಯ ಅವರು ನಾಡು ಕಂಡ ಅಪ್ರತಿಮ ಗಾಂಧೀವಾದಿ. ಗಾಂಧಿ ಬದುಕನ್ನು ಅಪ್ಪಿಕೊಂಡು ಬದುಕಿದ ಅಪ್ಪಟ ಗಾಂಧಿ ಅನುಯಾಯಿಯಾಗಿದ್ದವರು. ತಮ್ಮ ಇಳಿ ವಯಸ್ಸಿನಲ್ಲೂ ರಾಜ್ಯದಾದ್ಯಂತ ಪ್ರವಾಸ ಮಾಡಿ ಗಾಂಧಿ ವ್ಯಕ್ತಿ ವಿಚಾರಗಳನ್ನು ಜನರಲ್ಲಿ ವಿಶೇಷವಾಗಿ ಯುವಜನರಲ್ಲಿ ಬಿತ್ತಿ ಅವರಲ್ಲಿ ಜೀವನೋತ್ಸಾಹ ತುಂಬಿದ ಚೈತನ್ಯದ ಚಿಲುಮೆ.



ಗ್ರಾಮೀಣ ಜನರ ಬಗ್ಗೆ ಅನುಕರಣೀಯ ಕಾಳಜಿ ಹೊಂದಿದ್ದ ಅವರು ಚೌದರಿ ಕೊಪ್ಪಲನ್ನು ಮಾದರಿ ಗ್ರಾಮ ಮಾಡಿ, ಗಾಂಧಿ ದರ್ಶನಕ್ಕೊಂದು ಆಯಾಮ ಕಲ್ಪಿಸಿಕೊಟ್ಟವರು ಶ್ರೀನಿವಾಸಯ್ಯ. 20,000 ಶಾಲಾ ಕಾಲೇಜುಗಳಲ್ಲಿ ಗಾಂಧಿ ಕುರಿತು ಪ್ರವಚನ ನೀಡಿ ಯುವ ಮನಗಳಿಗೆ ಕ್ರಿಯಾತ್ಮಕ ಆಯಾಮ ಕೊಟ್ಟವರು ಶ್ರೀನಿವಾಸಯ್ಯ ಅವರಾಗಿದ್ದಾರೆ. ಬಡವರ ಕಂಬನಿಯೊರೆಸಲು ಸಹಕಾರ ತತ್ವದ ಮೇಲೆ ಸಹಕಾರಿ ಬ್ಯಾಂಕ್‌ಗಳನ್ನು ಪ್ರಾರಂಭಿಸಿದರು.

ಗಾಂಧೀಜಿ ಅವರ ಕುರಿತು ಹಲವಾರು ಕೃತಿ ರಚಿಸಿ, ಗಾಂಧೀಜಿ ಅವರ ಚಿಂತನೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವ ಕೈಂಕರ್ಯ ಕೈಗೊಂಡ ಶ್ರೀನಿವಾಸಯ್ಯ ಅವರ "ನಾ ಕಂಡಂತೆ ಜರ್ಮನಿ" ಪುಸ್ತಕ ಶ್ರೇಷ್ಠ ಪ್ರವಾಸ ಕಥನವಾಗಿ, ಪಠ್ಯವಾಗಿ, ಸಾಹಿತ್ಯಾಸಕ್ತರ ಗಮನ ಸೆಳೆದಿದ್ದು ವಿಶೇಷ.



ಡಾ. ಶ್ರೀನಿವಾಸಯ್ಯ ಅವರ 9 ದಶಕಗಳ ಸುಧೀರ್ಘವಾದ ಬದುಕಿನ ಅನುಕ್ಷಣವೂ ಸರಳ, ಪ್ರಾಮಾಣಿಕ ಮತ್ತು ಪರಿಶ್ರಮದಿಂದ ಕೂಡಿದ ಒಂದು ಅಪೂರ್ವವಾದ ಆದರ್ಶದ ಬದುಕು. 1942ರಷ್ಟು ಹಿಂದೆ ರಾಷ್ಟ್ರೀಯ ಆಂದೋಲನದಲ್ಲಿ ಧುಮುಕಿ ಸ್ವಾತಂತ್ರ ಚಳುವಳಿಗೆ ತಮ್ಮನ್ನು ಅರ್ಪಿಸಿಕೊಂಡವರು. ಸಮಾಜ ಸೇವೆ ಮತ್ತು ಸಹಕಾರಿ ಕಾರ್ಯಕರ್ತ, ಸಾಹಿತಿ, ಶಿಕ್ಷಣ ತಜ್ಞ, ಹೋರಾಟಗಾರ ಹೀಗೆ ಹಲವಾರು ರೀತಿಯ ಉಪಮಾನ, ಉಪಮೆಗಳಿಂದ ಖ್ಯಾತರಾದ ಅವರು ಗಾಂಧಿ ವಿಚಾರಧಾರೆಯನ್ನು ಅಕ್ಷರಶಃ ಮಾತು ಮತ್ತು ಕೃತಿಯಲ್ಲಿ ಪಾಲಿಸಿದವರು.

ಅಸ್ಪೃಶ್ಯತೆ ನಿವಾರಣೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇರಿಸಿದ ಶ್ರೀನಿವಾಸಯ್ಯನವರು ಹರಿಜನರಿಗೆ ದೇವಸ್ಥಾನ ಪ್ರವೇಶಕ್ಕೆ ಮುಂದಾಳತ್ವ ವಹಿಸಿ ಅಂದು ಮುಜರಾಯಿ ಮಂತ್ರಿಯಾಗಿದ್ದ ಪಾಮಡಿ ಸುಬ್ಬರಾಯಶೆಟ್ಟಿ ಅವರನ್ನು ಕರೆಸಿ ದೇವಾಲಯಗಳಿಗೆ ಹರಿಜನರ ಪ್ರವೇಶವನ್ನು ಮುಜರಾ ಹೊಸಳ್ಳಿಯಲ್ಲಿ ಗ್ರಾಮಸೇವೆಯ ಮೂಲಕ ಸಾಧ್ಯಗೊಳಿಸಿದ ಖ್ಯಾತಿಗೆ ಪಾತ್ರರಾದರು. ಹಳ್ಳಿಗಳಲ್ಲಿ ವಯಸ್ಕರ ಶಿಕ್ಷಣ, ಹರಿಜನರ ದೇವಸ್ಥಾನ ಪ್ರವೇಶ, ಅಕ್ಷರಾಭ್ಯಾಸ, ಹಳ್ಳಿಯ ಆರ್ಥಿಕ ಯೋಜನೆ ತಯಾರಿಸಿ ಮಜುರಾ ಹೊಸಳ್ಳಿ ಮತ್ತು ಸುತ್ತಮುತ್ತಲಿನ 5 ಗ್ರಾಮಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡವರು.



"ಹಳ್ಳಿಯವರು, ಹಳ್ಳಿಗೆ ಯಾರೇ ಬಂದರೂ ಗ್ರಾಮೀಣ ಭಾಗದವರೆ ಅಥವಾ ಅಲ್ಲವೆ ಎಂಬುದನ್ನು ಬಹಳ ಬೇಗ ಗುರುತಿಸುತ್ತಾರೆ. ತಮಗೆ ಸೇರಿದವರಲ್ಲ ಎಂದು ಗೊತ್ತಾದರೆ ಅವರು ದೂರವೇ ಉಳಿಯುತ್ತಾರೆ ಆದ್ದರಿಂದ ಹಳ್ಳಿಯಲ್ಲಿ ಕೆಲಸ ಮಾಡಬೇಕಾದರೆ ಸರಳ ಉಡುಪು ಧರಿಸಬೇಕು, ಸರಳವಾಗಿರಬೇಕು ಮತ್ತು ಅವರಂತೆಯೇ ಬದುಕಬೇಕು ಆಗಲೇ ಹಳ್ಳಿಯವರ ಜೊತೆ ಸೇರಲು ಸಾಧ್ಯ" ಎಂಬ ಆದರ್ಶವನ್ನು ಪಾಲನೆ ಮಾಡುವ ಮೂಲಕ ಸರಳ ಜೀವನಕ್ಕೆ ನಾಂದಿ ಹಾಡಿದವರು.

ಸಹಕಾರ ಕ್ಷೇತ್ರದಲ್ಲಿ ಇವರ ಸೇವೆ ಅಪಾರ. 1952ರಲ್ಲಿ ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಪ್ರಾರಂಭಿಸಿದರು. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮಾ ಅವರ ಸಹಾಯದಿಂದ ಬಡವರಿಗಾಗಿ ಬ್ಯಾಂಕ್‌ವೊಂದನ್ನು ಸ್ಥಾಪಿಸಿದರು. ಅದು ಈಗ ಹೆಮ್ಮರವಾಗಿ ಬೆಳದಿದೆ.

ಜಾತಿ, ಮತ ಬೇಧವಿಲ್ಲದೇ ಅರ್ಹತೆ ಇರುವ ವಿದ್ಯಾರ್ಥಿಗಳಿಗೆ, ಬಲಹೀನರಿಗೆ ಸಮಾಜ ಸೇವಾ ಸಂಸ್ಥೆಗಳಿಗೆ ಸಹಾಯ ಮಾಡುವ ಉದ್ದೇಶ ಹೊಂದಿದ ಹಲವಾರು ಶೈಕ್ಷಣಿಕ ಟ್ರಸ್ಟ್‌ಗಳನ್ನು ಸ್ಥಾಪಿಸಿದ ಅವರು "ಎಷ್ಟೋ ಜನರ ಕೃಪಾಶ್ರಯ, ಹಿರಿಯರ ಪ್ರೀತಿ, ಸ್ನೇಹಿತರ ಬೆಂಬಲ, ತಾಯಿ ತಂದೆಯರ ಆಶೀರ್ವಾದ ನನ್ನನ್ನೂ, ನನ್ನ ಮನೆಯ ವಾತಾವರಣವನ್ನು ನೆಮ್ಮದಿಯಾಗಿ ಇರಿಸಿದೆ. ನಾವು ಬದುಕುವುದು ಮಾತ್ರವಲ್ಲ, ಸುತ್ತಲಿನವರ ಬದುಕು ಸಹ್ಯಗೊಳ್ಳುವಂತೆ ಬದುಕಬೇಕು. ಇದು ನನ್ನ ಜೀವನ ಸೂತ್ರ, ಇದಕ್ಕೆ ತಕ್ಕಂತೆ ನನ್ನ ಜೀವನ, ಸುಖ ದುಃಖಗಳನ್ನು ಕಂಡು ಸಮರಸವಾಗಿ ನಡೆದುಕೊಂಡು ಬಂದಿದೆ." ಎಂಬ ಕೃತಾರ್ಥಭಾವ ಹೊಂದಿದವರಾಗಿದ್ದಾರೆ.

ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಸತ್ವಭರಿತ ತತ್ವಗಳ ಹಾಗೂ ಮೌಲಿಕ ಆದರ್ಶಗಳಿಂದ ಪ್ರಭಾವಿತರಾಗಿದ್ದ ಶ್ರೀನಿವಾಸಯ್ಯ ಅವರು ಸರಳತೆಯ ಸಿದ್ಧಾಂತವನ್ನು ಅಪ್ಪಿಕೊಂಡವರು. ಮದ್ಯಪಾನ ಸಂಯಮ ಮತ್ತು ಮಾದಕ ವಸ್ತುಗಳ ಬಳಕೆಯನ್ನು ತಡೆಯುವ ಮೂಲಕ ವ್ಯಸನಮುಕ್ತ ಕರ್ನಾಟಕದ ಕನಸು ಕಂಡವರು.

ಹೊ. ಶ್ರೀನಿವಾಸಯ್ಯ ಅವರೊಂದಿಗೆ ವೈಯಕ್ತಿಕವಾಗಿ ನನ್ನದು ಅವಿನಾಭಾವ ಸಂಬಂಧ. ನನ್ನ ಪೂಜ್ಯ ತಂದೆಯವರೊಂದಿಗೆ ಒಡನಾಟ ಹೊಂದಿದ್ದ ಅವರು ನಮಗೆಲ್ಲ ಆದರ್ಶಪ್ರಾಯರು. ಗಾಂಧಿ ತತ್ವ ಮತ್ತು ಆದರ್ಶಗಳು ಇಂದಿಗೂ ಪ್ರಸ್ತುತ ಎಂಬುದನ್ನು ತಮ್ಮ ವಿಚಾರ ಮತ್ತು ಆಚರಣೆಗಳಿಂದ ಸಮಕಾಲೀನ ಜಗತ್ತಿಗೆ ಪರಿಚಯಿಸಿದವರು.

ಗ್ರಾಮೀಣಾಭಿವೃದ್ಧಿ ಮೂಲಕ ನಾಡಿನ ಅಭಿವೃದ್ಧಿಯನ್ನು ಸಾಧಿಸಬೇಕೆನ್ನುವ ಅವರ ಹೃದಯಾಂತರಾಳದ ಕನಸು ಸಾಕಾರಗೊಳ್ಳುವಲ್ಲಿ "ರಚನಾತ್ಮಕ ಕಾರ್ಯಗಳ ಪಾತ್ರ ಬಹುದೊಡ್ಡದು" ಎಂಬ ಅವರ ತತ್ವ, ಗಾಂಧೀಜಿ ಅವರ ಚಿಂತನ ಚಿಲುಮೆಯಿಂದ ಹೊಮ್ಮಿದ ಮಹತ್ವದ ನುಡಿಯಾಗಿದೆ. ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವನಾಗಿ ಸೇವೆ ಸಲ್ಲಿಸುವ ಅವಕಾಶ ದೊರಕಿದಾಗ ನನ್ನನ್ನು ಹರಸಿ ಹಲವಾರು ಪ್ರಮುಖವಾದ ಸಲಹೆ, ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ್ದಾರೆ.

ಗಾಂಧೀಜಿ ಅವರಂತೆ ಅವರ ಆದರ್ಶದ ಬದುಕು ನಮ್ಮೆಲ್ಲರಿಗೂ ಇಂದಿಗೂ ಪ್ರಸ್ತುತ. ಹೋರಾಟಗಾರ, ಕ್ರಿಯಾಶೀಲ ಮತ್ತು ಶಿಸ್ತಿನ ಸೇವಕರೆಂಬ ಖ್ಯಾತಿಯ ಶ್ರೀನಿವಾಸಯ್ಯ ಅವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಗಾಂಧಿ ಭವನಕ್ಕೆ ಬಂದವರಿಗೆಲ್ಲ ಆಶ್ರಮದ ವಾತಾವರಣ ನಿರ್ಮಿಸಿಕೊಟ್ಟವರು. "ಶಾಲೆಯಿಂದ ಶಾಲೆಗೆ, ಕಾಲೇಜಿನಿಂದ ಕಾಲೇಜಿಗೆ ಗಾಂಧಿ" ಎಂಬ ಚಟುವಟಿಕೆಯ ಮೂಲಕ ಗಾಂಧಿ ತತ್ವ ಪ್ರೇರಿತ ಯುವ ಪ್ರೇರಣಾ ಶಿಬಿರಗಳನ್ನು ನಡೆಸಿ ಅತ್ಯಮೂಲ್ಯವಾದ ಗಾಂಧಿ ತತ್ವಗಳನ್ನು ಪ್ರಚಾರ ಮಾಡಿ ಯುವ ಪೀಳಿಗೆಯನ್ನು ಹುರಿದುಂಬಿಸಿದ್ದಾರೆ. ಪಂಚ ಮಹಾಭೂತಗಳಲ್ಲಿ ಲೀನರಾಗಿ ನಮ್ಮನ್ನು ಆಶೀರ್ವದಿಸುತ್ತಿದ್ದಾರೆ. ಅವರ ಉನ್ನತ ಆದರ್ಶಗಳು ನಮಗೆ ಸದಾಕಾಲ ದಾರಿದೀಪವಾಗಿವೆ.

ಮುನ್ನೂರು ಮಿಲಿಯನ್ ನಿರುದ್ಯೋಗಿಗಳು

1931ರ ಆಗಸ್ಟ್ ತಿಂಗಳಿನಲ್ಲಿ ಗಾಂಧೀಜಿ ಎರಡನೇ ದುಂಡು ಮೇಜಿನ ಸಮ್ಮೇಳನಕ್ಕೆ ಕಾಂಗ್ರೆಸ್‌ನ ಏಕೈಕ ಪ್ರತಿನಿಧಿಯಾಗಿ ಲಂಡನ್‌ಗೆ ಪ್ರಯಾಣ ಬೆಳೆಸಿದರು. ಸಂಧಾನ ಯಶಸ್ವಿಯಾಗುವುದರ ಬಗ್ಗೆ ಆಶಾದಾಯಕ ಭರವಸೆ ಯಾರಲ್ಲಿಯೂ ಇರಲಿಲ್ಲ. 'ನಾನು ಬರಿಗೈಯಲ್ಲಿ ಹಿಂದಿರುಗುವ ಸಾಧ್ಯತೆಗಳೇ ಹೆಚ್ಚು' ಎಂದು ಹಡಗು ಹತ್ತುವ ಮೊದಲು ಗಾಂಧಿ ಅಭಿಪ್ರಾಯಪಟ್ಟರು. ಅವರ ಸರಳತೆ ಸಜ್ಜನಿಕೆಗಳಿಂದ ಇಡೀ ಬ್ರಿಟನ್ ಪ್ರಭಾವಿತವಾಗಿಹೋಯಿತು. ಅವರ ನೇರ ಮಾತು ಮತ್ತು ನವಿರಾದ ಹಾಸ್ಯಕ್ಕೆ ಬಹಳ ಮಂದಿ ಮಾರು ಹೋದರು.



ತಮ್ಮ ಅತಿಥೇಯ ದೇಶ ಬ್ರಿಟನ್ ಬೇಡವೆಂದರೂ ಗಾಂಧೀಜಿ ಹಠ ಹಿಡಿದು ಲ್ಯಾಂಕ್‌ಷೈರ್‌ಗೆ ಪ್ರಯಾಣ ಮಾಡಿದರು. ಗಾಂಧೀಜಿ ಅವರ ವಿದೇಶೀ ವಸ್ತು ಬಹಿಷ್ಕಾರ ಚಳುವಳಿಯಿಂದ ಅಲ್ಲಿಯ ಅನೇಕ ಕಾರ್ಖಾನೆಗಳು ಮುಚ್ಚಿದವು. ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದರು. ಗಾಂಧೀಜಿ ಅವರ ಉದ್ದೇಶ ನಿರುದ್ಯೋಗಿಗಳಾಗಿದ್ದ ಕಾರ್ಮಿಕರಲ್ಲಿ ಹೋಗಿ ಅವರನ್ನು ಸಮಾಧಾನಪಡಿದುವುದು ಮತ್ತು ತಿಳುವಳಿಕೆ ನೀಡುವುದೇ ಆಗಿತ್ತು.

ನಿಮ್ಮಲ್ಲಿ ಮೂರು ಮಿಲಿಯನ್ ನಿರುದ್ಯೋಗಿಗಳಾಗಿದ್ದಾರೆ. ಆದರೆ ನಮ್ಮಲ್ಲಿ ಮುನ್ನೂರು ಮಿಲಿಯನ್ ಮಂದಿ ಕೆಲಸವಿಲ್ಲದೇ ಕುಳಿತಿದ್ದಾರೆ. ಕೆಲವರಿಗಾದರೂ ವರ್ಷದಲ್ಲಿ ಆರು ತಿಂಗಳಿನವರೆಗೆ ಕೆಲಸವಿದೆ. ಬಹಳ ಜನಕ್ಕೆ ಅದೂ ಲಭ್ಯವಿಲ್ಲ. ನಿಮಗೆ ನಿರುದ್ಯೋಗ ಭತ್ಯೆಯಾದರೂ ಸಿಗುತ್ತದೆ. ನನ್ನ ಜನಕ್ಕೆ ಅದೂ ಲಭ್ಯವಿಲ್ಲ. ಅವರಲ್ಲಿ ಅನೇಕರು ಬದುಕಿನಲ್ಲಿ ಪ್ರತಿದಿನ ಭರವಸೆ ಕಳೆದುಕೊಳ್ಳುತ್ತಿದ್ದಾರೆ. ನಿರುದ್ಯೋಗದಿಂದಾಗಿ ಅವರ ಆತ್ಮವಿಶ್ವಾಸ ಮತ್ತು ದೇವರಲ್ಲಿ ನಂಬಿಕೆಗಳು ಹೋಗುತ್ತಿವೆ. ಅವರಿಗೆಲ್ಲ ದುಡಿಮೆಯ ಮಾರ್ಗ ತೋರಿದ ಮೇಲೆ ಮಾತ್ರ ನಾನು ದೇವರ ಬಗ್ಗೆ ಮಾತನಾಡಬಲ್ಲೆ ಬೆಳಗಿನ ಉಪಹಾರ ಮುಗಿಸಿ ಮಧ್ಯಾಹ್ನದ ಊಟಕ್ಕೆ ಕಾಯುತ್ತಾ ನಾವಿಲ್ಲಿ ದೇವರ ಬಗ್ಗೆ ಮಾತನಾಡುವುದು ಸುಂದರವಾಗಿ ಕಾಣುತ್ತದೆ. ಆದರೆ ಎರಡು ಹೊತ್ತು ಕೂಳಿಗೂ ಗತಿಯಿಲ್ಲದ ಮಿಲಿಯಗಟ್ಟಲೆ ಜನರ ಮುಂದೆ ದೇವರ ಬಗ್ಗೆ ನಾನು ಹೇಗಾದರೂ ಪ್ರಸ್ತಾಪಿಸಲಿ? ಅವರಿಗೆ ಅನ್ನ ಮತ್ತು ರೊಟ್ಟಿಯೇ ದೇವರು.



Local constructed well for Plenary in Belagavi

Belagavi had a serious challenge before it - to ensure supply of drinking water to a mammoth 70,000 gathering at the plenary. The place was reeling under water crisis then. However, the locals decided to construct a huge well exclusively to provide water to the delegates of the session. This well was named Pampasarovar, which later came to be known as Congress Well. It took four months to dig the well and it cost Rs. 4,370 and 3 annas, according to sources. After the convention, the well supplied water to several parts of the city. But after tap water was introduced, this well turned into a garbage dump. at one point it was even called the suicide well with many people jumping into it to end their live. It remained in a pathetic state for decades until the government woke up in 2,000 to rejuvenate it. Now, the well has water round - the - year.



ಗಾಂಧಿ ಭವನದ ಕಾರ್ಯಕ್ರಮಗಳು

1. ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಅಧ್ಯಯನ ಕೇಂದ್ರ, ಹುತಾತ್ಮ ಮೈಲಾರ ಮಹಾದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಹಾವೇರಿ ಇವರ ಸಂಯುಕ್ತಾಶ್ರಯದಲ್ಲಿ ಬಾ–ಬಾಪು 150ನೇ ಜನ್ಮ ವರ್ಷಾಚರಣೆ, ರಾಷ್ಟ್ರೀಯ ಸೇವಾ ಯೋಜನೆ ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭವನ್ನು ಮತ್ತು ಸದ್ಭಾವನಾ ಪಾದಯಾತ್ರೆ ದಿ. 02.10.2019ರಂದು ಗಾಂಧೀ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಂ-ದು ಗಾಂಧಿ ವಿಶೇಷ ಛಾಯಾಚಿತ್ರ ಪ್ರದರ್ಶನದ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಿದರು. ಪುಸ್ತಕೋತ್ಸವದ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಹೆಚ್. ಕೆ.ಪಾಟೀಲ್,. ಗಾಂಧಿ ಕೃತಿಗಳ ಲೋಕಾರ್ಪಣೆಯನ್ನು ಶ್ರೀ ನಾಗೇಂದ್ರಸ್ವಾಮಿ ಅವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಡಾ. ಚಾರ್ಲ್ಸ್ ಲೋಬೋ ಅವರು ಗಾಂಧಿ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಿದರು. ಈ ಸಂಧರ್ಭದಲ್ಲಿ ಶ್ರೀ ಜಿ.ಎಸ್. ಜಯದೇವ (ದೀನ ಬಂಧು ಟ್ರಸ್ಟ್), ಶ್ರೀ ಸೂ.ರಂ. ರಾಮಯ್ಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಅವರುಗಳಿಗೆ ಗೌರವಾರ್ಪಣೆ ಸಲ್ಲಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ವೂಡೇ ಪಿ. ಕೃಷ್ಣ ಅವರು ವಹಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಪ್ರಸನ್ನ ಹೆಗ್ಗೋಡು, ಶ್ರೀ ಹೆಚ್. ಹನುಮಂತಪ್ಪ, ಶ್ರೀ ಎಸ್.ಎನ್. ಸಿದ್ದರಾಮಪ್ಪ, ಶ್ರೀ ಎನ್ ಭೃಂಗೀಶ್, ಶ್ರೀಮತಿ ಕೆ. ರೋಹಿಣಿ, ಡಾ: ಗಣನಾಥಶೆಟ್ಟಿ ಎಕ್ಕಾರು, ಶ್ರೀ ಖಾದ್ರಿ ನರಸಿಂಹಯ್ಯ, ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾಕೃಷ್ಣಪ್ಪ ಅವರು ಭಾಗವಹಿಸಿದ್ದರು.

2. ದಿನಾಂಕ 02.10.2019ರಂದು ಬೆಂಗಳೂರಿನ ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್.ಘಟಕ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ವತಿಯಿಂದ ಗಾಂಧೀಜಿಯವರ 150ನೇ ವರ್ಷಾಚರಣೆಯ ಪ್ರಯುಕ್ತ ಗಾಂಧೀಜಿಯವರ ಚಿಂತನೆಗಳ ಪ್ರಸ್ತುತತೆ ಕುರಿತು (ಉಪನ್ಯಾಸ ಮತ್ತು ವಿದ್ಯಾರ್ಥಿಗಳಿಂದ ಸಂವಾದ) ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು ಮುಖ್ಯ ಅತಿಥಿಗಳಾಗಿ ಡಾ: ಎಂ.ಎಸ್. ಮೂರ್ತಿ ಅವರು ಭಾಗವಹಿಸಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಸ್.ಎನ್. ವೆಂಕಟೇಶ್ ನಿರ್ವಹಿಸಿದ್ದರು.

3. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ರಾಷ್ಟ್ರೀಯ ಸೇವಾ ಯೋಜನೆ ಕೋಶ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು ಗಾಂಧಿ ಅಧ್ಯಯನ ವಿಭಾಗ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ ದಿ. 10.10.2019 ಪ್ಯಾರನ್ ಸಭಾಂಗಣ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡದಲ್ಲಿ 150ನೇ ಗಾಂಧಿ ಜಯಂತಿಯ ವರ್ಷಾಚರಣೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವ ಅಂಗವಾಗಿ ವಿಶ್ವವಿದ್ಯಾಲಯ ಮಟ್ಟದ ಒಂದು ದಿನದ ಅಧ್ಯಯನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಎ.ಎಸ್. ಶಿರಾಳಶೆಟ್ಟಿ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ: ವೂಡೇ ಪಿ. ಕೃಷ್ಣ, ಶ್ರೀಮತಿ ಚೆನ್ನಮ್ಮ ಹಳ್ಳಿಕೇರಿ ಅವರು ಭಾಗವಹಿಸಿದ್ದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಬಿ.ಎಫ್. ಚಾಕಲಬ್ಬಿ ವಹಿಸಿದ್ದರು. ಈ ಶಿಬಿರದಲ್ಲಿ ಖಾದಿ ಆರ್ಥಿಕತೆ ಹಾಗೂ ಗ್ರಾಮೋದ್ಯೋಗದ ಮಹತ್ವ, ಗಾಂಧೀಜಿಯವರ ವಿದಾಯಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆ, ಪರಿಸರಕ್ಕೆ ಪೂರಕವಾದ ಜೀವನ ಶೈಲಿ ಗಾಂಧೀ ವಿಚಾರಗಳು ವಿಷಯಗಳ ಮಂಡನೆಯಲ್ಲಿ ಶ್ರೀ ಬಸವಪ್ರಭು ಹೊಸಕೇರಿ, ಡಾ: ಅಮೃತ ಯಾರ್ದಿ, ಡಾ.ವಿ.ಶಾರದಾ, ಸಂಜೀವ ಕುಲಕರ್ಣಿ, ಡಾ. ಎ.ಸಿ. ಕುರಹಟ್ಟಿ ಇವರುಗಳು ಭಾಗವಹಿಸಿದ್ದರು.

4. ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಭಾವ – ಮೈತ್ರಿ ಕಾರ್ಯಕ್ರಮವನ್ನು ದಿ. 13.10.2019, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು, ಮುಖ್ಯ ಅತಿಥಿಗಳಾಗಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಕೆ. ಕೃಷ್ಣಸ್ವಾಮಿ ಅವರು ವಹಿಸಿದ್ದು, ವಿಶೇಷ ಆಹ್ವಾನಿತರಾಗಿ ಡಾ: ಗಣನಾಥಶೆಟ್ಟಿ ಎಕ್ಕಾರು ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

5. ಎಸ್.ಎಂ.ಭಂಡಾರಿ ಕಲಾ ಆರ್.ಆರ್ ಭಂಡಾರಿ ವಾಣಿಜ್ಯ ಹಾಗೂ ಎಸ್.ಕೆ. ರಾಠಿ ವಿಜ್ಞಾನ ಮತ್ತು ಆರ್.ಆರ್.ಭಂಡಾರಿ ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ಮಹಾವಿದ್ಯಾಲಯ, ಗುಳೇದ ಗುಡ್ಡ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ 150ನೇ ಗಾಂಧಿ ಜಯಂತಿ ಪ್ರಯುಕ್ತ, ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನಾ ಕಾರ್ಯಕ್ರಮವನ್ನು ದಿ. 16.10.2019ರಂದು ಕಾಲೇಜಿನ ಸಾಂಸ್ಕೃತಿಕ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಪ್ರೊ. ಜಿ.ಬಿ.ಶಿವರಾಜು, ಉಪಾಧ್ಯಕ್ಷರು, ಗಾಂಧೀಭವನ, ಇವರು ವಿಶೇಷ ಉಪನ್ಯಾಸ ನಡೆಸಿಕೊಟ್ಟರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕಮಲ ಕಿಶೋರಜಿ ಭಂಡಾರಿ, ಶ್ರೀ ರವೀಂದ್ರ ಎಮ್ ಪಟ್ಟಣಶೆಟ್ಟಿ ಶ್ರೀ ಅಡಿವೆಪ್ಪ ತಾಂಡೂರ ಚೇರಮನ್ನರು, ಸದಸ್ಯರಾದ ಶ್ರೀ ಯು.ಪಿ.ಬಳಿಗಾರ್ ಭಾಗವಹಿಸಿದ್ದರು.

6. ದಿ. 19.10.2019 ರಂದು ರಾಜ್ಯಮಟ್ಟದ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳ ವಾರ್ಷಿಕ ಕಾರ್ಯಾಗಾರವನ್ನು ಗಾಂಧೀಭವನದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

7. ಕರ್ನಾಟಕ ಅಂಚೆ ನೌಕರರ ಸಾಹಿತ್ಯ ಬಳಗ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಸುಮಂಗಲಿ ಸೇವಾಶ್ರಮ ಇವರ ಸಂಯುಕ್ತಾಶ್ರಯದಲ್ಲಿ ದಿ. 19.10.2019 ರಂದು ಗಾಂಧೀಭವನದಲ್ಲಿ ವಿಶ್ವ ಅಂಚೆ ದಿನಾಚರಣೆ ಹಾಗೂ ರಾಜ್ಯಮಟ್ಟದ ಪ್ರಥಮ ಅಂಚೆ ನೌಕರರ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿತ್ತು. ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಡಿ.ಎಸ್.ವೀರಯ್ಯ ಅವರು ವಹಿಸಿ ಕಾರ್ಯಕ್ರಮ ಉದ್ಘಾಟನೆಯನ್ನು ಮತ್ತು ಅಂಚೆ ರತ್ನ ಪ್ರಶಸ್ತಿ ಪ್ರಧಾನವನ್ನು ನಡೆಸಿಕೊಟ್ಟರು. ಡಾ: ಚಾರ್ಲ್ಸ್ ಲೋಬೊ ಅವರು ಸಂಘದ ಲೋಗೋ ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಡಾ: ಮನುಬಳಿಗಾರ್ ಅವರು ಅಂಚೆ ಚೀಟಿಯಲ್ಲಿ ಗಾಂಧಿ ವಿಷಯದ ಕುರಿತು ಉಪನ್ಯಾಸ ನೀಡಿದರು ಕಾರ್ಯಕ್ರಮದಲ್ಲಿ ಕಲಾವಿದರಾದ ಶ್ರೀಮಾನ್ ಮದನ್ ಪಟೇಲ್ ಮತ್ತು ಸಾಹಿತಿಗಳಾದ ಶ್ರೀ ಎಂ.ಎಸ್. ನರಸಿಂಹಮೂರ್ತಿರವರಿಗೆ ಸನ್ಮಾನ ಮಾಡಲಾಯಿತು. ವೇದಿಕೆಯಲ್ಲಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಇವರು ಕನ್ನಡ ಸಾಹಿತ್ಯ, ಗಾಂಧಿ ಕುರಿತಾದ ಸಾಹಿತ್ಯದ ಬಗ್ಗೆ ವಿಚಾರ ಮಂಡಿಸಿದರು.

8. ತಾಂತ್ರಿಕ ಶಿಕ್ಷಣ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಗಾಂಧೀ ಸ್ಮಾರಕ ನಿಧಿ ಇವರ ಸಂಯುಕ್ತಾಶ್ರಯದಲ್ಲಿ ದಿ. 19.10.2019ರಂದು ಗಾಂಧೀಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಸುವರ್ಣ ಮಹೋತ್ಸವ ಹಾಗೂ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ: ವೂಡೇ ಪಿ. ಕೃಷ್ಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಹೆಚ್. ಯು. ತಳವಾರ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಖಾದ್ರಿ ನರಸಿಂಹಯ್ಯ ಅವರು ಆಗಮಿಸಿದ್ದರು. ಶ್ರೀ ಅರುಣ್ ಪೂಜಾರ್, ಶ್ರೀಮತಿ ಇಂದಿರಾ ಕೃಷ್ಣಪ್ಪ, ಡಾ: ಗಣನಾಥಶೆಟ್ಟಿ ಎಕ್ಕಾರು ಅವರುಗಳು ಕಾರ‍್ಯಕ್ರಮದಲ್ಲಿ ಭಾಗವಹಿಸಿದ್ದರು

9. ಗಾಂಧೀ ಸ್ಮಾರಕ ನಿಧಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲೇಶ್ವರಂ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ ಬಾ–ಬಾಪು 150ನೇ ಜನ್ಮ ವರ್ಷಾಚರಣೆ "ಬಾ– ಬಾಪು ನೂರೈವತ್ತು, ರಾಷ್ಟ್ರೀಯ ಸೇವಾ ಯೋಜನೆ ಐವತ್ತು" ಹಾಗೂ "ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆ", ವಿಶ್ವವಿದ್ಯಾಲಯ ಮಟ್ಟದ ಒಂದು ದಿನದ ಕಾರ್ಯಾಗಾರವನ್ನು ದಿ. 26.10.2019ರಂದು ಕಾಲೇಜು ಸಭಾಂಗಣ, ಮಲ್ಲೇಶ್ವರಂ ಇಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವಿ.ಎನ್. ತಿಪ್ಪನಗೌಡ, ಉಪಾಧ್ಯಕ್ಷರು, ಗಾಂಧೀಭವನ, ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ: ಜೆನಿಫರ್ ಲೋಲಿಟ ಅವರುಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ: ಶಿವಶಂಕರ ಎಸ್.ಪಿ, ಪ್ರೊ. ರವಿಕುಮಾರ್ ಬಿ. ಮಿಣಜಿಗಿ, ಶ್ರೀ ಪುಟ್ಟಪ್ಪ ಹೆಚ್, ಡಾ: ಸುಜಾತ ಆಗಮಿಸಿದ್ದರು. ಈ ವಿಚಾರಗೋಷ್ಠಿಯಲ್ಲಿ ಶ್ರೀ ಪುಟ್ಟಪ್ಪ ಹೆಚ್, ಡಾ: ರಾಜ ಗುಂಡಾಪುರ ಜೆ., ಡಾ: ಮಲ್ಲಿಕಾರ್ಜುನ ಬಿ.ಎನ್, ಡಾ: ಮಂಜುನಾಥ್ ಕೆ, ಶ್ರೀಮತಿ ಪ್ರತಿಮ ಎಂ. ಬಿದರಿಮಠ, ಶ್ರೀಮತಿ ಕೌಸಲ್ಯ ಎಸ್, ಶ್ರೀಮತಿ ಜಯಂತಿ, ಶ್ರೀ ರೇಣುಕಾ ಆರ್, ಡಾ: ಮೋಹನ್ ದಾಸ್, ಡಾ: ರಾಘವೇಂದ್ರರಾಜು, ಶ್ರೀಮತಿ ಶುಭ ಎಸ್, ಡಾ: ರೂಪವತಿ ಅವರುಗಳು ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಮಹಾತ್ಮ ಗಾಂಧೀಜಿ ಅವರ 150ನೇ ವರ್ಷಾಚರಣೆಯಲ್ಲಿ ಮಾಧ್ಯಮಗಳ ವಿಶೇಷ ವರದಿಗಳು

ವಿ.ವಿ.ಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರ : ಸಿ.ಎಂ.

ಬೆಂಗಳೂರು: 'ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರ ತೆರೆಯಲು ಕೂಡಲೇ ಸೂಚನೆ ನೀಡುತ್ತೇನೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿ ಯಿಂದ ಗಾಂಧಿ ಭವನದಲ್ಲಿ ಬುಧವಾರ ಆಯೋಜಿಸಿದ್ದ ಬಾ-ಬಾಪು 150ನೇ ಜನ್ಮ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮೈಲಾರ ಮಹಾದೇವ ಸಭಾಂಗಣ ಉದ್ಘಾಟಿಸಿ ಮಾತನಾಡಿದರು.

'ಡಿಜಿಟಲ್ ಯುಗದಲ್ಲಿ ಯುವಪೀಳಿಗೆಯವರು ಸ್ಮಾರ್ಟ್‌ಫೋನ್ ಮತ್ತು ಕಂಪ್ಯೂಟರ್‌ಗಳ ಮೇಲೆ ಅವಲಂಬಿತರಾಗಿ ಸ್ವಯಂ ವೈಭವೀಕರಣದ ಗೀಳಿಗೆ ಬಿದ್ದಿದ್ದಾರೆ. ಈ ಸಂದರ್ಭದಲ್ಲಿ ಗಾಂಧೀಜಿ ಅವರು ಎಂದಿಗಿಂತ ಈಗ ಹೆಚ್ಚು ಪ್ರಸ್ತುತವಾಗಿದ್ದಾರೆ' ಎಂದು ಅವರು ಅಭಿಪ್ರಾಯಪಟ್ಟರು. 'ಗಾಂಧೀಜಿ ಚಿಂತನೆ ಮತ್ತು ಸಿದ್ಧಾಂತಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೇಂದ್ರ ಇರಬೇಕಿತ್ತು. ಆದರೆ, ಅದೇಕೋ ಈ ವಿಷಯದಲ್ಲಿ ಹಿನ್ನಡೆಯಾಗಿದೆ. ಸರಿಪಡಿಸಲು ಕೂಡಲೇ ಸೂಚನೆ ನೀಡಲಾಗುವುದು' ಎಂದರು.

'ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಈಗಾಗಲೇ ನಿರ್ಣಯ ಕೈಗೊಳ್ಳಲಾಗಿದೆ. ತಲಾ 3 ಕೋಟಿಯಂತೆ 75 ಕೋಟಿ ಬಿಡುಗಡೆ ಮಾಡಲಾಗಿದೆ. ಬಳ್ಳಾರಿ, ಹಾಸನ, ಮಡಿಕೇರಿ,



ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ. ಒಂದೂವರೆ ವರ್ಷಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಗಾಂಧಿ ಭವನ ನಿರ್ಮಾಣಗೊಳ್ಳಲಿವೆ' ಎಂದು ಹೇಳಿದರು.

ಶಾಸಕ ಎಚ್.ಕೆ.ಪಾಟೀಲ, 'ಗಾಂಧೀಜಿ ತತ್ವ ಸಿದ್ಧಾಂತಗಳನ್ನು ಯುವ ಜನರಿಗೆ ತಲುಪಿಸಲು ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ ಸೇರಿದಂತೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಗಾಂಧಿ ಅಧ್ಯಯನ ಕೇಂದ್ರ ತೆರೆಯಲು ಸರ್ಕಾರ ಸೂಚಿಸಬೇಕು ಎಂದು ಮನವಿ ಮಾಡಿದರು.

ಪ್ರಜಾವಾಣಿ ದಿ. 03.10.2019

'ಸ್ವಚ್ಛನಗರ ಹಾಗೂ ಸ್ವಾಸ್ಥ್ಯ ಪರಿಸರಕ್ಕಾಗಿ ಸೈಕಲ್ ಜಾಗೃತಿ ಜಾಥಾ ಮತ್ತು ಸದ್ಭಾವನಾ ಪಾದಯಾತ್ರೆ' ಆನಂದರಾವ್ ವೃತ್ತದಿಂದ ಗಾಂಧೀ ಭವನದವರೆಗೆ ನಡೆಯಿತು.

ಅಂತರರಾಷ್ಟ್ರೀಯ ಸಮ್ಮೇಳನ

'ಗಾಂಧೀಜಿ ಮತ್ತು ಕಸ್ತೂರಬಾ ಹೆಸರಿನಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲು ಸರ್ಕಾರ ಸಿದ್ಧವಿದೆ' ಎಂದು ಯಡಿಯೂರಪ್ಪ ಹೇಳಿದರು.

'ಗಾಂಧೀಜಿ ಅವರ ವ್ಯಕ್ತಿತ್ವ ರೂಪಿಸುವಲ್ಲಿ ಕಸ್ತೂರಬಾ ಅವರ ಕೊಡುಗೆ ಅಪಾರ. ಅವರು ಸಾರಿದ ಮೌಲ್ಯಗಳು ಎಲ್ಲರನ್ನೂ ತಲುಪಬೇಕು. ಈ ಕುರಿತ ಸಮ್ಮೇಳನ ನಡೆಸಲು ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ. ಒಳ್ಳೆಯ ಕೆಲಸಕ್ಕೆ ಹಿಂದು ಮುಂದು ನೋಡದೆ ಕೇಳಿದಷ್ಟು ಹಣ ಒದಗಿಸುತ್ತೇನೆ. ಕಾರ್ಯಕ್ರಮದ ರೂಪರೇಷೆ ಸಿದ್ಧಪಡಿಸಿಕೊಳ್ಳಿ' ಎಂದು ಗಾಂಧೀ ಸ್ಮಾರಕ ನಿಧಿಯ ಪದಾಧಿಕಾರಿಗಳಿಗೆ ತಿಳಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧಿ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ ನಡೆಸಲು ಸಂಪೂರ್ಣ ಬೆಂಬಲ । ಸಿದ್ಧಾಂತ ಜೀವಂತವಿರಲಿ

ಗಾಂಧಿ ಚಿಂತನೆಗೆ ತತ್ತ್ವ ಅಧ್ಯಯನ ಕೇಂದ್ರ

ಬೆಂಗಳೂರು : ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಗಾಂಧಿ ಚಿಂತನೆಗೆ ತತ್ತ್ವಗಳನ್ನು ಕುರಿತು ಅಧ್ಯಯನ ಕೇಂದ್ರ ಪ್ರಾರಂಭಿಸಲು ಸೂಚನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಬಾ–ಬಾಪು 150ನೇ ಜನ್ಮ ವರ್ಷಾಚರಣೆಯಲ್ಲಿ ಮಾತನಾಡಿ, ಗಾಂಧೀ ತತ್ತ್ವಗಳನ್ನು ವಿದ್ಯಾರ್ಥಿ ಅಧ್ಯಯನ ಮಾಡಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗಾಂಧಿ ತತ್ತ್ವ ಸಿದ್ಧಾಂತವನ್ನು ಜೀವಂತವಾಗಿಡಲು ಪ್ರಯತ್ನ ಮಾಡಬೇಕು ಎಂದರು.

ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಬೆಂಬಲ : ಕರ್ನಾಟಕ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಗಾಂಧಿ ಭವನ ನಿರ್ಮಾಣ ಮಾಡಲು ನಿರ್ಣಯ ಕೈಗೊಳ್ಳಲಾಗಿದ್ದು, ಈಗಾಗಲೇ ಬಳ್ಳಾರಿ, ಗುಲ್ಬರ್ಗ, ಮಡಿಕೇರಿ, ಹಾಸನ ಹಾಗೂ ಚಿಕ್ಕಬಳ್ಳಾಪುರದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಕಾಮಗಾರಿಯು ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. ಇದಕ್ಕಾಗಿ ತಲಾ 20 ಲಕ್ಷದಂತೆ 1 ಕೋಟಿಯನ್ನು ಗಾಂಧೀ ಭವನಕ್ಕೆ ಬಿಡುಗಡೆ ಮಾಡಲಾಗಿದೆ. ಉಳಿದ 25 ಜಿಲ್ಲೆಗಳಿಗೆ ತಲಾ 3 ಕೋಟಿಯಂತೆ 75 ಕೋಟಿ ರುಪಾಯಿಯನ್ನು ಬಿಡುಗಡೆ ಮಾಡಲಾಗಿದೆ. ಈ ಮೂಲಕ ಗಾಂಧೀಜಿ ತತ್ತ್ವ ಸಿದ್ಧಾಂತ ಜೀವನವಾಗಿಸಲು ಪ್ರಯತ್ನ ನಡೆಸಲಾಗುತ್ತಿದೆ. ಬೆಂಗಳೂರಿನಲ್ಲಿ ಗಾಂಧೀಜಿ ಅವರ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ ನಡೆಸಲು ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ ಎಂದರು. ಕಾರ್ಯಕ್ರಮದಲ್ಲಿ ಮೈಲಾರ ಮಹಾದೇವ ಸಭಾಂಗಣ ಮತ್ತು ಗಾಂಧಿ ಪುಸ್ತಕೋತ್ಸವ ಮತ್ತು ವಿಶೇಷ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸಲಾಯಿತು. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಕ್ಟೋಬರ್ ವಿಶೇಷ ಸಂಚಿಕೆ ಯೋಜನಾ ಮತ್ತು ಆರ್.ಜಿ. ಮುತಾಲಿಕ ದೇಸಾಯಿ ಅವರ ಹುಕ್ಕೇರಿಕರ ರಾಮರಾಯರು, ಜೆ.ಡಿ. ದೇಸಾಯಿ ಅವರ ಮಹಿಳೆಯರು, ಹನುಮಂತರಾವ್ ಮಂಜ್ರೇಕರ್ ಅವರ ನನ್ನ ಬಾಲ್ಯದ ನೆನಪುಗಳು, ಪ್ರಣತಿ ಪ್ರತಾಪ್ ಅವರ ಕಸ್ತೂರಬಾ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.



ಮನುಕುಲಕ್ಕೆ ಬಹುದೊಡ್ಡ ಕೊಡುಗೆ ನೀಡುವಲ್ಲಿ ಗಾಂಧಿ ಪಾತ್ರ ಬಹುಮುಖ್ಯವಾಗಿದೆ. ಗಾಂಧಿ ತತ್ತ್ವಗಳು ಎಲ್ಲಾ ವಿಶ್ವವಿದ್ಯಾಲಯ ಅಧ್ಯಯನ ಕೇಂದ್ರವನ್ನು ಸರ್ಕಾರ ಪ್ರಾರಂಭಿಸಬೇಕಾಗಿದೆ.

- ಎಚ್.ಕೆ. ಪಾಟೀಲ್. ಮಾಜಿ ಸಚಿವರು

ಬಯಲು ಬಹಿರ್ದೆಸೆ ಮುಕ್ತ ರಾಜ್ಯ

ಮಾಜಿ ಸಚಿವ ಎಚ್.ಕೆ. ಪಾಟೀಲ್ ಮಾತನಾಡಿ, ಎಲ್ಲರೂ ಗಾಂಧೀಜಿ ತತ್ತ್ವ ಸಿದ್ಧಾಂತವನ್ನು ಗೌರವಿಸುವುದರ ಜೊತೆಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗಾಂಧೀಜಿ ಅವರ ಕನಸನ್ನು 2018 ನ. 19ಕ್ಕೆ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಮಾಡಲಾಗಿದೆ. ಎಂದು ಮಾರ್ಗದರ್ಶನ ಮಾಡುವುದರ ಜೊತೆ ಎಲ್ಲರೂ ಶೌಚಾಲಯ ಕಟ್ಟಿಕೊಳ್ಳಿ, ಬಳಸಿಕೊಳ್ಳಿ ಎಂದು ಗಾಂಧೀಜಿ ಕರೆ ನೀಡಿದ್ದರು ಎಂದರು.

ಹೆಚ್ಚುವರಿ ಮಹಾನಿರ್ದೇಶಕ ಎಂ. ನಾಗೇಂದ್ರಸ್ವಾಮಿ, ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್ ಡಾ. ಚಾರ್ಲ್ಸ್ ಲೋಬೋ, ಶಾಸಕ ಎಚ್.ಆರ್. ವಿಶ್ವನಾಥ್, ಜೆ.ಎಸ್. ಜಯದೇವ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸೂ.ರಂ. ರಾಮಯ್ಯ, ಗ್ರಾಮ ಸೇವಾ ಸಂಘದ ಸಂಸ್ಥಾಪಕ ಪ್ರಸನ್ನ ಹೆಗ್ಗೋಡು, ರಾಜ್ಯಸಭಾ ಮಾಜಿ ಸದಸ್ಯ ಎಚ್. ಹನುಮಂತಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಜಾನಕಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್. ಭೃಂಗೀಶ್, ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಕೆ. ರೋಹಿಣಿ ಇದ್ದರು.

ಹೊಸದಿಗಂತ – ದಿ. 03.10.2019



MAHATMA AS MESSAGE



Muttanna Channabasappa Tirlapur, a resident of Karkikatti village in Ron Taluk, Gadag district dressed as Mahatma Gandhi, was at the Vidhana Soudha in Bengaluru on Saturday, He wants to spread the Mahatma's message against cow slaughter for prohigition and on the environment

Deccan Herala 03.10.2019

ಗಾಂಧಿ ವೇಷ ತೊಟ್ಟು ಜಾಗೃತಿ ಯಾತ್ರೆ

ಬೆಂಗಳೂರು: ನೆರೆಗೆ ತತ್ತಾಗಿರುವ ಉತ್ತರ ಕರ್ನಾಟಕದ ಭಾಗದಲ್ಲಿ ಶೀಘ್ರದಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು ಮತ್ತು ಕಳಸಾ-ಬಂಡೂರಿ ಯೋಜನೆ ಜಾರಿಗೆ ಆಗ್ರಹಿಸಿ ಗದಗದ ಮುಂಡರಗಿ ತಾಲೂಕಿನ ಮುತ್ತಣ್ಣ ಚನ್ನಬಸಪ್ಪ ತಿರ್ಲಾಪುರ್ ಗಾಂಧಿ ವೇಷದಲ್ಲಿ ಪಾದಯಾತ್ರೆ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಮಹಾತ್ಮ ಗಾಂಧೀಜಿ ಅವರ 150ನೇ ಜನ್ಮ ದಿನಾಚರಣೆ ಅಂಗವಾಗಿ ಮುಂಡರಗಿಯಿಂದ ಪಾದಯಾತ್ರೆ ಮೂಲಕ ವಿಧಾನಸೌಧದವರೆಗೂ ಬಂದಿರುವ ಅವರು, "ಮದ್ಯಪಾನ ಮುಕ್ತ ರಾಷ್ಟ್ರ ನಿರ್ಮಾಣ ಮಾಡಬೇಕು." ಪರಿಸರ ಸ್ನೇಹಿ ವಾತಾವರಣ ಹಾಗೂ ಸ್ವಚ್ಛತಾ ಅಭಿಯಾನ ಕೈಗೊಳ್ಳಬೇಕು. ಅಲ್ಲದೆ, ಬಸವಣ್ಣನವರ ವಚನಗಳಂತೆ ಗೋಹತ್ಯೆ ನಿಲ್ಲಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಜಾಗೃತಿ ಮೂಡಿಸಿದ್ದಾರೆ. ಅಕ್ಟೋಬರ್ 11ರಂದು ಕರ್ಕಿಕಟ್ಟಿ ಗ್ರಾಮದಿಂದ ಪಾದಯಾತ್ರೆ ಪ್ರಾರಂಭಿಸಿದ ಅವರು, ಮುಂಡರಗಿ, ರೋಣ, ಗದಗ, ಕೊಟ್ಟೂರು, ಚಿತ್ರದುರ್ಗ, ತುಮಕೂರು ಮಾರ್ಗವಾಗಿ ಪಾದಯಾತ್ರೆಯಲ್ಲಿ ಬಂದಿದ್ದೇನೆ ಎಂದು ಹೇಳಿದರು.

ಕನ್ನಡ ಪ್ರಭ, ದಿ. 03.10.2019

City comes together to remember the Mahatma



Artist Paramesh D Jolad dressed up as Gandhiji and posed in front of the Vidhana Soudha

As part of Gandhi Jayanti celebrations, the city's young and old came together to pay homage to the Father of our nation. While Seshadripuram College and SRN Adarsh Evening College students, participated in a rally from Anand Rao Circle to Gandhi Bhavan, artist Paramesh D Jolad dressed up as Gandhiji and posed in front of the Vidhana Soudha. All around the city, events like these marked the 150th birth anniversary of the Mahatma.

Times of India - 03.10.2019

“

Dalit movement reached Koppal in 1934

Koppal: During the intensive agitation of the freedom movement, Gandhi visited Bhanapur Railway Station in Yelburga taluk of Koppal district on March3, 1934. He was touring the country to uplift the dalits and encourage them to join the freedom movement. As part of his tour of the Hyderabad-Karnataka region to raise funds for the upliftment of dalits, he visited Bhanapur railway station. Devareddy Shiroor, son of late freedom fighter Veerabhadrppa Shiroor, recalls that Gandhi had a cup of milk offered by a dalit at the railway station. Interestingly, late Kalappa Pattar, an which continues to be displayed on the wall of Bhanapur railway station

Deccan Herald - 02.10.2019

ಗಾಂಧಿ ಸ್ಮರಣಾರ್ಥ ಬ್ರಿಟನ್ ನಾಣ್ಯ ಬಿಡುಗಡೆ

ಲಂಡನ್: ಮಹಾತ್ಮ ಗಾಂಧಿ ಅವರ 150ನೇ ಜನ್ಮದಿನಾಚರಣೆ ಸ್ಮರಣಾರ್ಥ ನಾಣ್ಯವೊಂದನ್ನು ಬ್ರಿಟನ್ ಸರಕಾರ ಬಿಡುಗಡೆಗೊಳಿಸಲಾಗಿದೆ ಎಂದು ಬ್ರಿಟಿಷ್ ಹಣಕಾಸು ಸಚಿವ ಸಜಿದ್ ಜಾವಿದ್ ಹೇಳಿದ್ದಾರೆ.

ವಿಶ್ವಕ್ಕೆ ಗಾಂಧಿ ಅವರು ಏನನ್ನು ಬೋಧಿಸಿದ್ದಾರೋ ಅದನ್ನು ಮರೆಯದಂತೆ ನಾಣ್ಯ ಬಿಡುಗಡೆಗೆ ಕಾರ್ಯ ಪ್ರವೃತ್ತವಾಗುವಂತೆ ಬ್ರಿಟನ್‌ನ ರಾಯಲ್ ಮಿಂಟ್‌ಗೆ ತಾನು ಸೂಚಿಸಿದ್ದೇನೆ ಎಂದು ಪಾಕಿಸ್ಥಾನಿ ಮೂಲದ ಈ ಸಚಿವರು ಹೇಳಿದರು.

ಬ್ರಿಟನ್‌ನ ದಕ್ಷಿಣ ಏಷ್ಯಾ ಸಮುದಾಯದ ಅತ್ಯಂತ ಪ್ರಭಾವಿ ಸದಸ್ಯರನ್ನು ಗೌರವಿಸಲು ಇಲ್ಲಿ ನಡೆದ ವಾರ್ಷಿಕ ಜಿಜಿ2 ನಾಯಕತ್ವ ಪುರಸ್ಕಾರಗಳ ಪ್ರಧಾನ ಸಮಾರಂಭದಲ್ಲಿ ಜಾವಿದ್ ಅವರು ಈ ಯೋಜನೆಯನ್ನು ಪ್ರಕಟಿಸಿದರು.

ಈ ದಿನದ ಪ್ರಶಸ್ತಿಗಳು ಗಾಂಧಿ ಅವರ 150ನೇ ಜನ್ಮದಿನೋತ್ಸವವನ್ನು ಆಚರಿಸುತ್ತವೆ. ಅವರ ಗೌರವಾರ್ಥ ಹೊಸ ಸಂಸ್ಮರಣ ನಾಣ್ಯವೊಂದರ ಪ್ರಸ್ತಾಪ ಸಲ್ಲಿಸುವಂತೆ ಬ್ರಿಟನ್‌ನ ರಾಯಲ್ ಮಿಂಟ್‌ನ್ನು ನಾನು ಕೇಳಿಕೊಂಡಿದ್ದೇನೆ ಎಂದು ಪ್ರಕಟಿಸಲು ಇದು ಸೂಕ್ತ ಸಮಯ. ಜಗತ್ತಿಗೆ ಗಾಂಧಿ ಅವರು ಏನನ್ನು ಬೋಧಿಸಿದ್ದರೊ ಅದನ್ನು ನಾವು ಎಂದಿಗೂ ಮರೆಯಬಾರದು ಎಂದು ಬ್ರಿಟಿಷ್ ಚಾನ್ಸಲರ್ ಆಫ್ ದಿ ಎಕ್ಸ್‌ಚೆಕರ್ ಹೇಳಿದರು.

1888ರಲ್ಲಿ ಗಾಂಧಿ ಅವರು ಕಾನೂನು ಶಾಲೆಗೆ ಭೇಟಿ ನೀಡಲು ಲಂಡನ್‌ಗೆ ತೆರಳಿದ್ದರು. ಅವರು ಲಂಡನ್ ಲಾ ಸ್ಕೂಲ್‌ನ ವಿಶ್ವವಿದ್ಯಾಲಯ ಕಾಲೇಜಿಗೆ ಭೇಟಿ ನೀಡಿದ್ದರು. 1891ರಲ್ಲಿ ಇಂಗ್ಲೀಷ್ ಬಾರ್‌ಗೆ ಅವರನ್ನು ಕರೆಸಲಾಗಿತ್ತು. ಆ ನಂತರ ಅವರು ಸಕಾಲದಲ್ಲಿ ಭಾರತಕ್ಕೆ ಮರಳಿದರು. ಆದರೂ ಅವರು ನಗರಕ್ಕೆ ಮತ್ತೆ ಬರುತ್ತಾ ಇದ್ದರು. 1931ರಲ್ಲಿ ಲಂಡನ್‌ಗೆ ಅವರ ಕೊನೆಯ ಭೇಟಿಯಾಗಿತ್ತು. ಭಾರತದ ಭವಿಷ್ಯ ಕುರಿತಾದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಅವರು ಬಂದಿದ್ದರು.

ಅಧಿಕಾರ ಕೇವಲ ಸಂಪತ್ತು ಅಥವಾ ಉನ್ನತ ಹುದ್ದೆಯಿಂದ ಬರುವುದಿಲ್ಲ ಎಂದು ಗಾಂಧಿ ನಮಗೆ ಬೋಧಿಸಿದ್ದರು. ಅವರ ಜೀವನ ಮೌಲ್ಯಗಳನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮ ಹಿರಿಯರು ಅನೇಕ ವರ್ಷಗಳ ಹಿಂದೆ ಇಲ್ಲಿಗೆ ಆಗಮಿಸಿದಾಗ ತಮ್ಮೊಂದಿಗೆ ಆ ಜೀವನ ಮೌಲ್ಯಗಳನ್ನು ಹೊತ್ತು ತಂದಿದ್ದರು ಎಂದು ಜಾವಿದ್ ಹೇಳಿದರು. ಜಿಜಿ2 ಹಿಂದೆ ಇರುವ ಬ್ರಿಟನ್ ಮೂಲದ ಪ್ರಕಾಶನ ಸಂಸ್ಥೆ ಏಷ್ಯನ್ ಮೀಡಿಯಾ ಗ್ರೂಪ್ (ಎಎಂಜಿ) ವಾರ್ಷಿಕವಾಗಿ ಬಿಡುಗಡೆಗೊಳಿಸುವ ಪವರ್ ಲಿಸ್ಟ್‌ನಲ್ಲಿ ಜಾವಿದ್ ಅಗ್ರ ಸ್ಥಾನದಲ್ಲಿದ್ದಾರೆ.

ಪಾಕಿಸ್ತಾನದ ಬಸ್ ಚಾಲಕರೊಬ್ಬರ ಪುತ್ರರಾಗಿರುವ ಜಾವಿದ್, ತನ್ನ ಬಡ ಮೂಲದ ಬಗ್ಗೆ ಯಾವಾಗಲೂ ಮಾತನಾಡುತ್ತಾರೆ. 1969ರಲ್ಲಿ ಅವರು ಜನಿಸುವ ಮೊದಲು ಅವರ ಹೆತ್ತವರು ಪಾಕಿಸ್ಥಾನದಿಂದ ಬ್ರಿಟನ್‌ಗೆ ವಲಸೆ ಬಂದಿದ್ದರು.

ವಿಜಯ ಕರ್ನಾಟಕ ದಿ 03.10.2019

ಜನವರಿ 2020 ರಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಆಯೋಜಿಸಿರುವ ಕಾರ್ಯಕ್ರಮಗಳ ವಿವರಗಳು

1. ಕರ್ನಾಟಕ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಸಮಾಲೋಚನಾ ಸಮಾರಂಭ
2. ಡಾ. ಹೊ. ಶ್ರೀನಿವಾಸಯ್ಯ ಅವರ ದತ್ತಿ ಕಾರ್ಯಕ್ರಮ
3. ಗಾಂಧಿ ಅಂಗಳದಲ್ಲಿ ಗಾಂಧೀ ಚಿಂತಕರು
4. ಅರಕಲಗೂಡು ವರದರಾಜು ಶಾಂತಮ್ಮ ಕಾಲೇಜಿನಲ್ಲಿ ಗಾಂಧಿ ಮತ್ತು ಮಹಿಳೆ ಒಂದು ದಿನದ ವಿಚಾರ ಗೋಷ್ಠಿ
5. ರಾಷ್ಟ್ರೀಯ ಸೇವಾ ಯೋಜನೆಯ ಪ್ರೌಢಶಾಲಾ ಮಟ್ಟದ ಕಾರ್ಯಕ್ರಮ ಅಧಿಕಾರಿಗಳ ಒಂದು ದಿನದ ವಿಚಾರ ಗೋಷ್ಠಿ
6. ಗಾಂಧೀಜಿ ಅವರ "ಹಿಂದ್ ಸ್ವರಾಜ್" ಬಹುಮಾಧ್ಯಮ ರಂಗ ಪ್ರಸ್ತುತಿ - ಶ್ರೀ ಎಚ್. ಎಸ್. ಶಂಕರ್ ಅವರಿಂದ ಜನವರಿ 30,31 ರಂದು
7. ಜನವರಿ 30ರಂದು ಸರ್ವೋದಯ ದಿನಾಚರಣೆ
8. ಸಂತ ವಿನೋಬಾಜಿ ಅವರ ಅನುಯಾಯಿ ಮಹಾದೇವಿ ತಾಯಿ ಅವರ ಸಂಸ್ಮರಣೆ.



ಮನಿಲಾದಲ್ಲಿ ಮಹಾತ್ಮನ ಪುತ್ಥಳಿ ಅನಾವರಣ




ಮನಿಲ: ಫಿಲಿಪ್ಪೀನ್ಸ್ ಪ್ರವಾಸದಲ್ಲಿರುವ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಭಾನುವಾರ ಮನಿಲಾದ ಮಿರಿಯಮ್ ಕಾಲೇಜಿನ ಆವರಣದಲ್ಲಿ ಮಹಾತ್ಮ ಗಾಂಧೀಜಿ ಅವರ ಪುತ್ಥಳಿಯನ್ನು ಅನಾವರಣಗೊಳಿಸಿದ್ದಾರೆ. ಬಳಿಕ ಕಾಲೇಜಿನ ಶಾಂತಿ ಶಿಕ್ಷಣ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲೂ ಭಾಗವಹಿಸಿ ಮಾತನಾಡಿದ ಅವರು, 'ಮಹಾತ್ಮನ ಸತ್ಯ, ನೀತಿ ಹಾಗೂ ಸಹಾನುಭೂತಿಗಳಿಂದ ಭವಿಷ್ಯದ ತಲೆಮಾರು ಪ್ರೇರಣೆ ಪಡೆದುಕೊಳ್ಳಬೇಕು.

ಈ ಪುತ್ಥಳಿಯು ಭಾರತೀಯರು ನಿಮಗೆ ನೀಡುತ್ತಿರುವ ಪ್ರೀತಿಯ ಕೊಡುಗೆ. ಆದರೆ, ಮಹಾತ್ಮನು ಎಲ್ಲ ಜನರಿಗೂ ಎಲ್ಲ ಜನಾಂಗಕ್ಕೂ ಎಲ್ಲ ಸಂಸ್ಕೃತಿ ಹಾಗೂ ಸಮಾಜಕ್ಕೆ ಸೇರಿದವರು. ಅವರ ಮಾರ್ಗದರ್ಶನದಲ್ಲೇ ನಮ್ಮ ಶಾಂತಿ, ಸಾಮರಸ್ಯ ಹಾಗೂ ಸುಸ್ಥಿರ ಅಭಿವೃದ್ಧಿಯ ಪಯಣ ಸಾಗಲಿ ಎಂದಿದ್ದಾರೆ. ಬಳಿಕ ಮನಿಲಾದಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿಯೂ ಕೋವಿಂದ್ ಮಾತನಾಡಿದ್ದಾರೆ.

ಉದಯವಾಣಿ ದಿ. 21.10.2019

ಫಿಲಿಪ್ಪೀನ್ಸ್ : ಗಾಂಧಿ ಪುತ್ಥಳಿ ಅನಾವರಣ



ಮನಿಲ (ಪಿಟಿಐ): ಇಲ್ಲಿನ ಮನಿಲಾದ ಮಿರಿಯಮ್ ಕಾಲೇಜಿನ ಆವರಣದಲ್ಲಿ ಸ್ಥಾಪಿಸಲಾಗಿರುವ ಮಹಾತ್ಮ ಗಾಂಧೀಜಿ ಅವರ ಪುತ್ಥಳಿಯನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಅನಾವರಣಗೊಳಿಸಿದರು.

ಸ್ಪ್ಯಾನಿಷ್ ವಸಹಾತುಶಾಹಿ ವಿರುದ್ಧ ಹೋರಾಡಿದ ಫಿಲಿಪ್ಪಿನ್ಸ್ ನಾಯಕ ಜೋಸ್ ರಿಜಲ್ ಅವರನ್ನು ಸ್ಮರಿಸಿದ ಕೋವಿಂದ್ ಅವರು ಗಾಂಧಿ ಮತ್ತು ರಿಜಲ್ ಅವರ ಹೋರಾಟದಲ್ಲಿದ್ದ ಸಾಮ್ಯತೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಹಭಾಗಿತ್ವ: ಇದಕ್ಕೂ ಮೊದಲು ಭಯೋತ್ಪಾದನೆ ನಿರ್ಮೂಲನೆ, ರಕ್ಷಣೆ ಮತ್ತು ಸಾಗರ ಭದ್ರತೆಯಲ್ಲಿ ರಾಷ್ಟ್ರಗಳ ಸಹಭಾಗಿತ್ವದ ಕುರಿತು ಕೋವಿಂದ್ ಮತ್ತು ಫಿಲಿಪ್ಪಿನ್ಸ್ ಅಧ್ಯಕ್ಷ ರೋಡ್ರಿಗೊ ಡುಟರ್ಟೆ ಚರ್ಚೆ ನಡೆಸಿದರು.

ಪ್ರಜಾವಾಣಿ ದಿ. 21.10.2019

ಕನ್ನಡ ಕವಿಗಳ ಮಹತ್ವದ ನುಡಿಗಳು

ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು
ನೀ ಮೆಟ್ಟುವ ನೆಲ ಅದೇ ಕರ್ನಾಟಕ
ನೀನೇರುವ ಮಲೆ ಸಹ್ಯಾದ್ರಿ
ನೀ ಮುಟ್ಟುವ ಮರ ಶ್ರೀಗಂಧದ ಮರ
ನೀ ಕುಡಿಯುವ ನೀರ್ ಕಾವೇರಿ

- ಕುವೆಂಪು

ಒಂದೇ ಒಂದೇ ಕರ್ನಾಟಕ ಒಂದೇ
ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ
ಇಲ್ಲಿಯ ಜನಮನ ಭಾಷೆಯ ಕನ್ನಡವದು ಒಂದೇ
ಒಂದೇ ಜನವು ಮನವು ಕನ್ನಡಿಗರು ಎಂದೇ!

- ದ.ರಾ. ಬೇಂದ್ರೆ

City's notable Gandhi hubs

On the150th birth anniversary of Mahatma Gandhi,we curated a list of places you can visit in and around Bengaluru.Along with venues that have been constructed in tribute to the man,the places he frequented during his visits to the city between 1915 to 1936 hasbeen featured.

Learn about his Philosophies

Located on Kumara Krupa Road, Gandhi Bhavan is a museum dedicated to the "Father of the Nation". It was setup with the intention of promoting his ideologies and teachings among the youth. The main attraction here is a picture gallery consisting of photos from his early childhood to the last day of his life. Copies of his letters and placards with his aphorisms can also be found. Sources say the museum has been built on the land where he used to take strolls.

Visit A Park

Freedom Park is located on Seshadri Road, Gandhi Nagar. Originally, it was a central jail built by the British in 1866, for executing prisoners of the First War of Indian Independence. During the independence movement many national leaders, including Gandhi were imprisoned here. In 2008,the central jail was converted into a park, and apart of it has been allotted for protests.The park is symbolic of the colonial rule, and the changes the country has gone through since.

His Meditation Spot

Gandhi, during his visit to Bangalore in 1927, had conducted a public meeting in Kumara Krupa Road. Under the'Jyothi Vriksh', he had even held a prayer meeting. A memorial was built at the same place. The hotel Lalit Ashok was built on this land. However, those who plan to visit this memorial should be prepared to face the security personnel, who are reluctant to let non guests inside.

Check-in at Kumara Krupa Guest House

Located on a sprawling 14 acres of land on Kumara Krupa Road, the guest house is a place of great historical significance. It has housed many prominent personalities, including Gandhi. In 1927, on a visit to Karnataka, he fell unwell and was advised for rest. He recuperated at Nandi Hills in itially and then moved to the Kumara Krupa guest house. The guest house was adjacent to the office of William Smith from the Imperial Dairy Farm, whom he met regularly to discuss the improvement of cattle farming across the country.

Gokhale Institute

In May 1915, Gandhi who was touring south India, was invited to inaugurate the Mysore Social Service League Setup as a tribute to Gopal Krishna Gokhale, the League was reborn as the Gokhale Institute of Public Affairs in 1930. The institute conducts talks on various aspects of public life and spirituality and also provides a large library for those interested in research.

Shop for khadi

In 1918, Gandhi began promoting khadi as part of the Swadeshi movement. It would act as a relief programme for the poor masses by creating self-employment. Khadi then became a symbol for both self-reliance and self-government. The Khadi Bhandar at Annapoorneshwari and Gramodyog Khadi Mandir at Hospital Road are some shops you could visit to pick a few khadi outfits for yourself.

Gandhi Bhavan

Jyothi Vriksh, where Gandhi held prayer meetings. He stayed at the Kumara krupaGuest House between June and August 1927.

- Krupajoseph

Team Metrolife (Deccan Herald - 2.10.2019)



Socialism: A Gandhian Perspective

Dr. Wooday P. Krishna
President, Karnataka Gandhi Smaraka Nidhi

Mahatma Gandhi, considered to be one of the greatest Asians of the 20th century, had a distinct dream of India. He said:

" I shall work for an India in which the poorest shall feel that it is their country, in whose making they have an effective voice, an India in which there shall be no high class and low class of people; an India in which all communities shall live in perfect harmony. There can be no room in such an India for the curse of untouchability or the curse of intoxicating drinks and drugs. Women will enjoy the same rights as men. We shall be at peace with all the rest of the world. This is the India of my dreams."

The earliest literature available for us wherein Gandhiji reveals his mind is his 'Hind Swaraj' published in 1906. One of the salient features of 'Hind Swaraj' is that Gandhiji spoke for the first time of "limiting our wants". Soon after his return from South Africa in 1914, he led the national struggle for freedom. According to him, Swaraj means freedom – political, social, economic and moral. We conclusively achieved political freedom on the 15th of August 1947, but we are yet to win social, economic and moral freedoms as envisaged by him.

The core of Gandhiji's life agenda was Fight against Poverty. Gandhiji advanced his economic ideas along side his political agenda during the freedom struggle. J. C. Kumarappa, a well-known Gandhian Economist, presented to the world a new terminology called 'Gandhian Economics', covering the whole gamut of Gandhiji's economic ideas.

On the advice of his political guru Gopalakrishna Gokhale, Gandhiji undertook Bharat Yatra as a third class train traveler. Gokhale said: "Go to the people; know them; love them; work among them". It is with this message that Gandhiji started his Bharat Yatra. He was able to understand clearly the body, mind and soul of India. He was able to have a wonderful grasp of the socio-economic reality of his times.

The core of Gandhian economics was "economic self-sufficiency". Socialism was natural to Gandhiji. He very clearly identified the exploitative design of the British. He used swadeshi and non-cooperation as tools of his struggle for freedom. Gandhiji targeted European clothing symbolically as a source of mass unemployment and poverty. He advocated Khadi as a means of peaceful civil resistance to promote national self-sufficiency. In fact, Gandhiji led farmers' satyagraha in Champaran and Kheda against mill owners who were backed by the British Government to end oppressive taxation.

To Gandhiji, moral considerations were paramount. He recognized and relied heavily upon the spiritual strength of India.

Gandhiji's concept of "ashram" is noteworthy. He pioneered ashram settlement called "Phoenix Settlement" in South Africa. This is compared to a typical commune where people produced their own food, clothing and means of living. Gandhiji promoted values of equality and co-operation and promoted the notion of trusteeship in his ashram way of living. Gandhiji practiced the lifestyle of self-sufficiency, personal and spiritual development through the concept of 'ashram'.

The fulcrum of Gandhian Wheel of Life was truth and non-violence. Contrary to Indian socialists and communists, Gandhiji rejected class warfare and class-based revolution. To him, preservation of human dignity was far greater than material development. Gandhiji

believed in non-violent humanistic socialism. He swore to the maxim that 'nothing is done without the consent of anyone'.

Gandhiji accepted democracy as a way of life. To him, man was more important than money. His economic thought revolved around simple living. He rejected consumerism in all its forms. Gandhiji never advocated increase in standard of living but always spoke of increase in the standard of life.

When Gandhiji spoke of economic equality, he asked whether the ant and the elephant could be given the same quantity of food. He paid highest attention to the prime needs of the weakest sections of the population. He gave to the world the concept of Sarvodaya which spoke of the right to earn according to one's capacity using just means. In other words, 'to each according to his need'.

Gandhiji focused on non-violent rural economy. Towards this end, he advocated four ideas:

i. Trusteeship
ii. Decentralization of economic activity
iii. Labour intensive technology
iv. Priority to the weaker sections

Gandhiji felt that character of production is to be decided by social necessity and not by personal greed.

Gandhiji clearly said that recourse to class warfare and mutual hatred will be suicidal. He spoke of socialism free of exploitation. According to him, all are born equal. Everyone has a right of equal opportunity. All have not the same capacity. Ahimsa or non-violence is an essential attribute of society.

When Gandhiji spoke of economic equality, he made it clear that it does not mean that everyone will literally have the same amount. He clarified the distinction between 'equal distribution' and 'equitable distribution'. According to him, reforms cannot and should not be rushed. He favoured educating both the 'haves' and the 'have nots'.

Gandhiji spoke eloquently about nationalization. He never favoured all the means of production to be nationalized. He favoured both 'planned production' and 'private enterprise'. He said that 'if you have only state production, men will become moral and intellectual paupers'. He further said: 'I would allow capitalists and zamindars to keep their factory and land but I would make them consider themselves as trustees of their property'.


Gandhiji never admired poverty. He felt that everybody should be able to get sufficient work to enable both ends meet. When he advocated elimination of machinery and large-scale production, he was very clear that large-scale production should not cause mass unemployment.

Today, capitalists and communists both have proved to be imperfect. Gandhian method of transforming society through trusteeship seems to be the via-media between capitalists' chaos and communists' rigidity.



Congress Road that Gandhi took in 1924

The road in Belagavi that leads to Veerasoudha from the railway station circle was named Congress Road as Gandhi took out a procession on this road after he reached the station to attend the Congress Plenary in December 1924. Hindalga jail was jam-packed with at least 3,000 inmates when the plenary was on. Gandhi attending the Congress plenary session held in Belagavi in December 1924




ಗಾಂಧಿ ಜಯಂತಿಯಂದು, ಗಾಂಧಿ ವಿಶೇಷ ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ. ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಶ್ರೀ ನಾಗೇಂದ್ರಸ್ವಾಮಿ, ಭಾ.ಆ.ಸೇ., ಡಾ. ವೂಡೇ ಪಿ. ಕೃಷ್ಣ ಅವರು ಇದ್ದಾರೆ.



ಗಾಂಧಿ ಜಯಂತಿಯಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಕ್ಟೋಬರ್ ವಿಶೇಷ ಸಂಚಿಕೆ "ಯೋಜನಾ" ಬಿಡುಗಡೆ. ಮಾನ್ಯ ಮುಖ್ಯಮಂತ್ರಿಗಳು, ಡಾ. ವೂಡೇ. ಪಿ. ಕೃಷ್ಣ, ಶ್ರೀ ಹೆಚ್.ಕೆ. ಪಾಟೀಲ್, ಚಾರ್ಲ್ಸ್ ಲೋಬೋ, ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್, ಶ್ರೀ ಎಂ. ನರೇಂದ್ರಸ್ವಾಮಿ, ಹೆಚ್ಚುವರಿ ಮಹಾ ನಿರ್ದೇಶಕರು, ಶ್ರೀಮತಿ ಕಿರಣ್ಮಯಿ, ಸಂಪಾದಕರು, ಯೋಜನಾ ಪತ್ರಿಕೆ



ಗಾಂಧಿ ಜಯಂತಿಯಂದು ಎಂ.ಜಿ. ರಸ್ತೆಯ ಮಹಾತ್ಮಾ ಗಾಂಧಿ ಪ್ರತಿಮೆಯಿಂದ ಗಾಂಧೀ ಭವನದವರೆಗೆ ಸೈಕಲ್ ಜಾಥಾ ನಡೆಸಲಾಗಿತ್ತು. ಬಲಭಾಗದಿಂದ ಡಾ. ಗಣನಾಥಶೆಟ್ಟಿ ಎಕ್ಕಾರು, ಡಾ. ರುದ್ರಪ್ಪ, ಶ್ರೀ ಆರ್. ನರಸಿಂಹಯ್ಯ ಮತ್ತು ಚಂದ್ರಪ್ಪ ಅವರಿದ್ದಾರೆ.



ಮೈಲಾರ ಮಹಾದೇವ ಸಭಾಂಗಣ ಉದ್ಘಾಟನೆಯಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎಂ. ನಾಗೇಂದ್ರ ಸ್ವಾಮಿ, ಶ್ರೀ ಹೆಚ್.ಕೆ. ಪಾಟೀಲ್, ಡಾ. ವೂಡೇ ಪಿ. ಕೃಷ್ಣ, ಶ್ರೀಮತಿ ಕಸ್ತೂರಿ, ಶ್ರೀ ಮಹದೇವಪ್ಪ, ಶ್ರೀ ನರೇಂದ್ರ ಶ್ರೀಮತಿ ಇಂದಿರಾ ಕೃಷ್ಣಪ್ಪ



ಗಾಂಧಿ ಜಯಂತಿಯಂದು ಸದ್ಭಾವನ ಪಾದಯಾತ್ರೆಯಲ್ಲಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಗಾಂಧೀ ಪ್ರತಿಮೆಗೆ ಮಾಲಾರ್ಪಣೆ ಮಾಡುತ್ತಿರುವವರು ಡಾ. ವೂಡೇ ಪಿ. ಕೃಷ್ಣ, ಶ್ರೀಮತಿ ಇಂದಿರಾ ಕೃಷ್ಣಪ್ಪ, ಡಾ. ಗಣನಾಥಶೆಟ್ಟಿ ಎಕ್ಕಾರು, ಶ್ರೀಮತಿ ಪೂರ್ಣಿಮಾ ಜೋಗಿ, ಶ್ರೀ ಆರ್. ನರಸಿಂಹಯ್ಯ



ಗಾಂಧಿ ಜಯಂತಿಯಂದು ಸದ್ಭಾವನ ಹಾಗೂ ಸ್ವಚ್ಛ ಪರಿಸರಕ್ಕಾಗಿ ಸೈಕಲ್ ಜಾಗೃತಿ ಜಾಥ ಮತ್ತು ಸದ್ಭಾವನಾ ಪಾದಯಾತ್ರೆ. ಶೇಷಾದ್ರಿಪುರಂ ಶಾಲೆ, ಸರ್ಕಾರಿ ಶಾಲೆ ಮತ್ತು ಎನ್.ಎಸ್.ಎಸ್. ವಿದ್ಯಾರ್ಥಿಗಳೊಂದಿಗೆ ಎಡದಿಂದ ಶ್ರೀ ಜೇರಿಗೆ ಲೋಕೇಶ್, ಡಾ. ವೂಡೇ ಪಿ. ಕೃಷ್ಣ, ಶ್ರೀಮತಿ ಇಂದಿರಾ ಕೃಷ್ಣಪ್ಪ, ಡಾ. ಗಣನಾಥಶೆಟ್ಟಿ ಎಕ್ಕಾರು, ಶ್ರೀಮತಿ ಪೂರ್ಣಿಮಾ ಜೋಗಿ, ಶ್ರೀ ವೇಮಗಲ್ ಸೋಮಶೇಖರ್ (ಗಾಂಧಿ ಉಡುಪಿನಲ್ಲಿ) ಭಾಗವಹಿಸಿದ್ದರು.



ದಿ. 2.10.2019ರ ಬಾಪು 150ರ ವರ್ಷಾಚರಣೆಯಂದು ಭಾಗವಹಿಸಿದ್ದ ಗಣ್ಯರ ಸಮೂಹ



ದಿ. 10.10.2019ರಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಅಂಚೆ ನೌಕರರ ಸಾಹಿತ್ಯ ಬಳಗ ಮತ್ತು ಸುಮಂಗಲಿ ಸೇವಾಶ್ರಮ ಇವರ ಸಹಯೋಗದಲ್ಲಿ ರಾಜ್ಯಮಟ್ಟದ ಪ್ರಥಮ ಅಂಬೇಡ್ಕರ್ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿದ ಸಂದರ್ಭ.



ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಗಾಂಧೀ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಿರುವುದು. ವೇದಿಕೆಯಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಹೆಚ್.ಕೆ. ಪಾಟೀಲ್, ಶಾಸಕರು, ಚಾರ್ಲ್ಸ್ ಲೋಬೋ, ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್, ಶ್ರೀ ಎಂ. ನಾಗೇಂದ್ರ ಸ್ವಾಮಿ, ಶ್ರೀ ಜಯದೇವ, ಶ್ರೀ ಸೂ.ರಂ. ರಾಮಯ್ಯ(ಸ್ವಾತಂತ್ರ್ಯ ಹೋರಾಟಗಾರರು), ಶ್ರೀಮತಿ ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ ಮತ್ತೆಲ್ಲ ಗಣ್ಯರಿದ್ದಾರೆ.

> “ಕಾವೇರಿಯಿಂದ
> ಮಾ ಗೋದಾವರಿಯ ವರಗಿರ್ಪ
> ನಾಡದಾ ಕನ್ನಡದೋಳ್
> ಭಾವಿಸಿದ ಜನಪದಂ ವಸುಧಾ ವಳಯ
> ವಿಲೀನ ವಿಷದ ವಿಷಯ ವಿಶೇಷಂ
>
> ಶ್ರೀವಿಜಯ - ಕವಿರಾಜ ಮಾರ್ಗ

ಬಾಪು ಪ್ರಪಂಚ

ಗಾಂಧಿಜೀ ಅವರ ಜೀವನ, ತತ್ವ ಸಿದ್ಧಾಂತಗಳನ್ನು ಮತ್ತು ಅವರ ಕುರಿತಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಓದುಗರಿಗೆ ಪರಿಚಯ ಮಾಡಿಕೊಡುವುದು ಬಾಪು ಪ್ರಪಂಚ ಮಾಸ ಪತ್ರಿಕೆಯ ಮುಖ್ಯ ಆಶಯವಾಗಿದೆ. ಗಾಂಧೀಜಿ ಅವರ ಕುರಿತಾದ ವಿಚಾರ ಸಂಕಿರಣ, ಸಂವಾದ, ಚರ್ಚೆ, ವಿಶೇಷ ಶಿಬಿರಗಳು, ಕಾರ್ಯಚಟುವಟಿಕೆಗಳ ಮೂಲಕ ಗಾಂಧಿಜೀ ಅವರ ಸಿದ್ಧಾಂತಗಳ ವಿಶ್ವಮಟ್ಟದ ಅನುಸಂಧಾನಗಳನ್ನು ಯುವಜನತೆಗೆ ನೀಡುವುದು ಬಾಪು ಪ್ರಪಂಚದ ಉದ್ದೇಶವಾಗಿದೆ. ಇಂದಿನ ಯುವ ಜನತೆ, ಗಾಂಧಿಜೀ ಅವರ ಜೀವನ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಿ ಎಂಬ ಮಹದಾಸೆಯನ್ನು ಪತ್ರಿಕೆ ಹೊಂದಿದೆ.

- ಓದುಗರು ತಮ್ಮ ಅಭಿಪ್ರಾಯಗಳು, ಸಲಹೆಗಳು, ಸೂಚನೆಗಳನ್ನು ಪತ್ರಗಳ ಮುಖಾಂತರ ಅಥವಾ ಇಮೇಲ್ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು.
  ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–56001,
  ದೂರವಾಣಿ : 080–22261967, 9738605799, gandhibhavanbangalore@gmail.com.
  gandhibhavanabengaluru@gmail.com ನೀಡಬಹುದು.
- ಗಾಂಧೀಜಿ ಅವರ ವಿಚಾರಗಳ ಕುರಿತ ಲೇಖನಗಳು, ವಿಶೇಷ ಸಂಗತಿಗಳು, ಚಿತ್ರಗಳು ಇತ್ಯಾದಿಗಳನ್ನು ಓದಗರು ನೀಡಬಹುದು. ಅವುಗಳನ್ನು ಪ್ರಕಟಿಸುವ ಆಯ್ಕೆ ಸಂಪಾದಕರದ್ದಾಗಿರುತ್ತದೆ.
- ಲೇಖನಗಳಲ್ಲಿ ಅಳವಡಿಸಬಹುದಾದ ಚಿತ್ರಗಳನ್ನೂ ಕಳುಹಿಸಬಹುದು ಹಾಗೂ ನೆರವು ಪಡೆದ ಆಕರಗಳನ್ನು ಸೂಚಿಸುವುದು. ಸಂಪರ್ಕಕ್ಕಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು, ಪೂರ್ಣ ವಿಳಾಸವನ್ನು ಕಡ್ಡಾಯವಾಗಿ ಕಳುಹಿಸುವುದು
- ಜಾಹೀರಾತುಗಳಿಗೆ ಸಂಪರ್ಕ : ಸಹ ಕಾರ್ಯದರ್ಶಿ : 9738605799
  ಕಾರ್ಯನಿರ್ವಹಣಾಧಿಕಾರಿ : 9980307286

ಚಂದಾದಾರರಾಗಲು ಈ ಕೆಳಗಿನಂತೆ ಅರ್ಜಿಯನ್ನು ಭರ್ತಿಮಾಡಿ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು

ಹೆಸರು ______________________

ವಿಳಾಸ ______________________

______________________ ನಗರ ______________________

ಪಿನ್‌ಕೋಡ್ ____________ ಜಿಲ್ಲೆ ____________ ರಾಜ್ಯ ____________

ಮೊಬೈಲ್ ನಂ. ____________ ಸ್ಥಿರ ದೂರವಾಣಿ ____________

ಹೊಸದಾಗಿ ಚಂದಾದಾರರಾಗಲು ☐ ನವೀಕರಣ ☐

ಗೌರವ ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.– 560001
ಫೋನ್: 080–22261967

ಬಾಪು ಪ್ರಪಂಚ ಮಾಸಿಕ : ಚಂದಾ ವಿವರ

ಚಂದಾ ಅವಧಿ	ಚಂದಾ	ರಿಯಾಯಿತಿ ದರ	ದೊರಕುವ ಸಂಚಿಕೆಗಳು
ಬಿಡಿ ಪ್ರತಿ	20/–		1
1 ವರ್ಷಕ್ಕೆ	240/–	170	13
2 ವರ್ಷಕ್ಕೆ	480/–	400/–	26
3 ವರ್ಷಕ್ಕೆ	720/–	630/–	39

- ಚಂದಾ ಹಣವನ್ನು ಡಿಡಿ ಅಥವಾ ಆನ್‌ಲೈನ್ ಮುಖಾಂತರ ಕಾರ್ಯದರ್ಶಿ, ಗಾಂಧಿ ಭವನ ಇವರ ಹೆಸರಿನಲ್ಲಿ ಕಳುಹಿಸುವುದು
- ಬ್ಯಾಂಕ್ ಮಾಹಿತಿ ಖಾತೆ ಸಂಖ್ಯೆ 0788101000778 ಕೆನರಾ ಬ್ಯಾಂಕ್, ಮಾಧವನಗರ ಶಾಖೆ, ಬೆಂಗಳೂರು, IFSC ಸಂಖ್ಯೆ CNRB0000788
- ಚಂದಾ ಕಳುಹಿಸುವ ವಿಳಾಸ : ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.– 56001, ಫೋನ್: 080–22261967
ಕಚೇರಿಯೊಡನೆ ವ್ಯವಹರಿಸುವಾಗ ಡಿಮ್ಯಾಂಡ್ ಡ್ರಾಫ್ಟ್ ಕಳುಹಿಸುವ ದಿನಾಂಕವನ್ನು ಚಂದಾದಾರರು ನಮೂದಿಸಬೇಕು. ಯಾವುದೇ ಮಾಹಿತಿಗಾಗಿ ಸಂಪರ್ಕಿಸಿ :
ಸಹ ಕಾರ್ಯದರ್ಶಿ : 9738605799, ಕಾರ್ಯನಿರ್ವಹಣಾಧಿಕಾರಿ : 9980307286

ಪಾವತಿ: ಬ್ಯಾಂಕಿನ ಹೆಸರು ____________ ಡಿಡಿ ಸಂಖ್ಯೆ ____________

ಮೊತ್ತ ____________ ದಿನಾಂಕ ____________

ನೆಟ್ ಬ್ಯಾಂಕ್ ವಿವರ ______________________

ಚಂದಾದಾರರ ಹೆಸರು ಮತ್ತು ಸಹಿ

ದಿನಾಂಕ

To Suscribe please fill the below form

Name ______________________________

Address ______________________________

______________________________ City ______________

Pincode ______________ District ______________ State ______________

Mobile No. ______________________ Landline ______________________

New Membership ☐ Renewal ☐

Hon. Secretary, Gandhi Bhavana, Kumarapark East, Bengaluru - 560001

Bapu Prapancha Subscripation Detail

Subscription period	Subscription Amount	Discount	Issues
Single Copy	20/-		1
One year	240/-	170/-	13
Two years	480/-	400/-	26
Three years	720/-	630/-	39

- For Subscription, D/D Should be in favour of Secretary, Gandhi Bhavana, Bengaluru
- Bank Details : A/c No. 0788101000778 Canara Bank
  Madhavanagara Branch, Bengaluru, IFSC No. CNRB0000788.
- For Subscription please write to Secretary, Gandhi Bhavana, Kumarapark East Bengaluru - 560001, Ph : 080 - 22261967 with following details.
  For any comunication please contact our Assistant Secretary : 9738605799
  Executive officer : 9980307286.

Payment : Name of the Bank ______________________ D/D. No. ______________

Amount ______________________ Date ______________

Netbanking Detail ______________________________

Subscribers name & Signature

Date

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು



ಬಾಪು ಪ್ರಪಂಚ ಕನ್ನಡ–ಇಂಗ್ಲಿಷ್ ಪತ್ರಿಕೆ

RN No: KRBIL/2019/77950

Bapu Prapancha Special issue Date of Publication : 15th December posted on 20th December at Bengaluru - 560001

Registered Reg. No. KARBIL/2019/77950 Total Pages : 36+4 Cover pages



ಮನುಷ್ಯ ಚಿರಂಜೀವಿ ಆಗಲಾರ. ಆದರೆ ಅವನ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ.
ಒಂದು ಗಿಡಕ್ಕೆ ನೀರು ಎಷ್ಟು ಅವಶ್ಯಕವೋ ಹಾಗೆಯೇ ಒಂದು ಚಿಂತನೆಯು
ಪ್ರಸರಣವಾಗುವುದು ಅಷ್ಟೇ ಅಗತ್ಯ. ಇಲ್ಲವಾದರೆ ಎರಡೂ ಸಾಯುತ್ತವೆ.

- ಡಾ. ಬಾಬಾ ಸಾಹೇಬ್ ಅಂಬೇಡ್ಕರ್

ಇವರಿಗೆ, ______________________________

____

____

If undelivered please return to:

Hon. Secretary, Karnataka Gandhi Smaraka Nidhi, Gandhi Bhavna, Kumara Park Post Bengaluru - 560001,Ph: 080 22261967, Email : gandhibhavanabengaluru@gmail.com

Printed at Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049